ಆದರ್ಶ ಗುರುಗಳ ಸ್ತುತಿ

(ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು
ತಮ್ಮ ಗುರುಗಳ ಕುರಿತು ರಚಿಸಿದ ಎರಡು
ಸ್ಫೂರ್ತಿಪ್ರದ, ಭಕ್ತಿಭರಿತ ಹಾಗೂ ತಾತ್ತ್ವಿಕ ಸ್ತೋತ್ರಗಳು
— ಅನುವಾದ ಮತ್ತು ವ್ಯಾಖ್ಯಾನದೊಂದಿಗೆ)



ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು,
ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ
35ನೆಯ ಜಗದ್ಗುರು ಶಂಕರಾಚಾರ್ಯರು

ಆದರ್ಶ ಗುರುಗಳ ಸ್ತುತಿ

(ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳ ಕುರಿತು
ರಚಿಸಿದ ಎರಡು ಸ್ಫೂರ್ತಿಪ್ರದ, ಭಕ್ತಿಭರಿತ ಹಾಗೂ ತಾತ್ತ್ವಿಕ ಸ್ತೋತ್ರಗಳು
— ಅನುವಾದ ಮತ್ತು ವ್ಯಾಖ್ಯಾನದೊಂದಿಗೆ)

ಅನುವಾದಕ — ಡಾ. ಬೂ. ರಾ. ವಿದ್ಯಾಶಂಕರ್

Centre for Brahmavidya
Chennai 600032

Book Title

Ādarśa Gurugaḷa Stuti

(Paramapūjya Jagadguru Śrī Bhāratī Tīrtha Mahāsvāmigaḷu
tamma gurugaḷa kuritu racisida eraḍu sphūrtiprada,
bhaktibharita hāgū tāttvika stōtragaḷu
— anuvāda mattu vyākhyānadōndige)

Language
Kannada

Published by
Centre for Brahmavidya
SVK Towers, 8th Floor
A25, Industrial Estate, Guindy
Chennai 600032
Email: contact@centreforbrahmavidya.org
Website: www.centreforbrahmavidya.org

EBook: First Edition (2026)

For free download

ಮುನ್ನುಡಿ

ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳನ್ನು ಕುರಿತು, ಅವರ ಜೀವಿತಕಾಲದಲ್ಲಿಯೇ, ಭಕ್ತಿಭರಿತವೂ ತಾತ್ತ್ವಿಕವೂ ಮನೋಹರವೂ ಸ್ಫೂರ್ತಿಪ್ರದವೂ ಆದ ಎರಡು ಸ್ತೋತ್ರಮಾಲಿಕೆಗಳನ್ನು ರಚಿಸಿದರು. ಇವುಗಳಲ್ಲಿ ಮೊದಲನೆಯದು ಶ್ರೀಮದ್-ಅಭಿನವ ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್. 1978ರ ಮೇ ತಿಂಗಳಲ್ಲಿ ಶೃಂಗೇರಿಯಲ್ಲಿ ಅವರು ಪ್ರಾತಃಕಾಲದ ಆಹ್ನಿಕವನ್ನು ಮಾಡುತ್ತಿದ್ದಾಗ ಈ ಸ್ತೋತ್ರವು ತಾನಾಗಿಯೇ ಅವರಿಗೆ ಸ್ಫುರಿಸಿತು. ಅನುಷ್ಟುಪ್-ಛಂದಸ್ಸಿನ ಎಂಟು ಹೃದಯಸ್ಪರ್ಶಿ ಶ್ಲೋಕಗಳು ಅದರಲ್ಲಿವೆ. ಈ ಶ್ಲೋಕಗಳು ಕ್ರಮವಾಗಿ ಅ, ಭಿ, ನ, ವ, ವಿ, ದ್ಯಾ, ತೀ ಮತ್ತು ರ್ಥ ಎಂಬ ಅಕ್ಷರಗಳಿಂದ ಆರಂಭವಾಗುತ್ತವೆ. ಈ ಅಕ್ಷರಗಳನ್ನು ಕ್ರಮವಾಗಿ ಜೋಡಿಸಿದಾಗ ಅವರ ಪರಮಪೂಜ್ಯ ಗುರುಗಳ ಪಾವನನಾಮವಾದ 'ಅಭಿನವ ವಿದ್ಯಾತೀರ್ಥ' ಎಂಬುದು ರೂಪಗೊಳ್ಳುತ್ತದೆ. ಆದ್ದರಿಂದ ಈ ಕೃತಿಯನ್ನು ಅಕ್ಷರಮಾಲಾ ಸ್ತೋತ್ರವೆಂದು ಕರೆಯಲಾಗಿದೆ. ಪ್ರತಿಯೊಂದು ಶ್ಲೋಕದ ಕೊನೆಯಲ್ಲೂ, ತಾವು ಅವರನ್ನು ಶರಣುಹೋಗುತ್ತಿರುವುದಾಗಿ ಭಕ್ತಿಯಿಂದ ನಿವೇದಿಸಿಕೊಳ್ಳುತ್ತಾರೆ. ಈ ಕೃತಿಯಲ್ಲಿ ತಮ್ಮ ಗುರುಗಳನ್ನು ಪರಬ್ರಹ್ಮವೆಂದೂ, ಈಶ್ವರನೆಂದೂ, ಸರ್ವಶ್ರೇಷ್ಠರಾದ ಜೀವನ್ಮುಕ್ತ-ಗುರುಗಳೆಂದೂ ಅವರು ಆರಾಧಿಸುತ್ತಾರೆ.

ಎರಡನೆಯದಾದ *ಗುರುಧ್ಯಾನಮ್* ಮಾಲಿಕೆಯು ಅವರಿಗೆ 1982ರ ಮಾರ್ಚ್ ತಿಂಗಳಲ್ಲಿ ತಾನಾಗಿಯೇ ಸ್ಫುರಿಸಿತು. ಆಗ ಅವರು ತಮ್ಮ ಗುರುಗಳೊಡನೆ ಅಖಿಲ ಭಾರತ ವಿಜಯ-ಯಾತ್ರೆಯನ್ನು ಕೈಗೊಳ್ಳುತ್ತ ಮಹಾರಾಷ್ಟ್ರದಲ್ಲಿದ್ದರು. ಇದರಲ್ಲಿ ಅನುಷ್ಟುಪ್-ಛಂದಸ್ಸಿನ ಐದು ಶ್ಲೋಕಗಳಿವೆ; ಅವುಗಳ ಬಳಿಕ ಹದಿನಾರು ಅಕ್ಷರಗಳ ಪ್ರತ್ಯೇಕವಾದ ಪ್ರಾರ್ಥನಾ-ವಾಕ್ಯವೊಂದಿದೆ. ಆ ಐದು ಶ್ಲೋಕಗಳಲ್ಲಿ ಅವರು ತಮ್ಮ ಗುರುಗಳನ್ನು ಎರಡು ರೀತಿಯಲ್ಲಿ — ಪಾರಮಾರ್ಥಿಕ ಸತ್ಯ, ಶುದ್ಧ ಚೈತನ್ಯ ಹಾಗೂ ಅಪರಿಮಿತ ಆನಂದ ಸ್ವರೂಪವಾದ ಪರಬ್ರಹ್ಮದಲ್ಲಿ ಅನಾಯಾಸವಾಗಿ ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸಿರುವವರೆಂದೂ, ಸ್ವಯಂ ಪರಬ್ರಹ್ಮವೂ ಈಶ್ವರನೂ ಆಗಿರುವವರೆಂದೂ — ಬಣ್ಣಿಸಿದ್ದಾರೆ. ಹೀಗೆ ಐದು ಶ್ಲೋಕಗಳಲ್ಲಿ ತಮ್ಮ ಗುರುಗಳನ್ನು ಸ್ತುತಿಸಿ, 'ವಿದ್ಯಾತೀರ್ಥಗುರೂತ್ತಂಸಂ ಧ್ಯಾಯಾಮಿ ಭವಮುಕ್ತಯೇ' — ಸಂಸಾರದಿಂದ ಮಕ್ತಿಗಾಗಿ ಗುರುಶಿರೋಮಣಿಗಳಾದ (ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ) ವಿದ್ಯಾತೀರ್ಥರನ್ನು ಧ್ಯಾನಿಸುತ್ತೇನೆ — ಎಂದಿದ್ದಾರೆ.

ಮೊದಲ ಸ್ತೋತ್ರವನ್ನು ರಚಿಸಿದ ಸ್ವಲ್ಪ ಹೊತ್ತಿನಲ್ಲಿಯೇ ಪರಮಪೂಜ್ಯರು ನನ್ನನ್ನು ಕರೆಸಿಕೊಂಡು ಅದನ್ನು ನನಗೆ ಅನುಗ್ರಹಿಸಿದರು. ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಮೇಲೆ ಒಂದು ಸ್ತೋತ್ರವನ್ನು ರಚಿಸಬೇಕೆಂದು ಕೆಲವು ದಿನಗಳ ಹಿಂದೆ ನಾನು ಅವರಲ್ಲಿ ಮಾಡಿಕೊಂಡಿದ್ದ ಪ್ರಾರ್ಥನೆಯನ್ನು ಅವರು ಹೀಗೆ ಕರುಣೆಯಿಂದ ಈಡೇರಿಸಿದರು. 1982ರಲ್ಲಿ ದೆಹಲಿಯಲ್ಲಿ ಅವರ ಚಾತುರ್ಮಾಸ್ಯದ ಸಂದರ್ಭದಲ್ಲಿ ನಾನು

ಅವರ ದರ್ಶನ ಪಡೆದಾಗ ಎರಡನೆಯ ಸ್ತೋತ್ರವನ್ನು ನನಗೆ ದಯಪಾಲಿಸಿದರು. ಪರಬ್ರಹ್ಮದಲ್ಲಿ ನಿರ್ವಿಕಲ್ಪ-ಸಮಾಧಿಯಲ್ಲಿ ಲೀನರಾಗಿ ನಿಶ್ಚಲರಾಗಿ ಕುಳಿತಿರುವ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಕುರಿತು ಒಂದು ಸ್ತೋತ್ರವನ್ನು ರಚಿಸಬೇಕೆಂದು ಆ ವರ್ಷದ ಆರಂಭದಲ್ಲಿ ನಾನು ಮಾಡಿಕೊಂಡಿದ್ದ ಪ್ರಾರ್ಥನೆಯನ್ನೂ ಅವರು ಈ ರೀತಿ ದಯೆಯಿಂದ ಈಡೇರಿಸಿದರು.

ಇತ್ತೀಚೆಗೆ ನಾನು ಈ ಎರಡೂ ಸ್ತೋತ್ರಗಳನ್ನು ಅನುವಾದಿಸಿ, ಅವುಗಳಿಗೆ ವ್ಯಾಖ್ಯಾನವನ್ನೂ ಬರೆದು ಪರಮಪೂಜ್ಯರಿಗೆ ಸಮರ್ಪಿಸಿದೆ. ಅವರು ಕೃಪೆಯಿಂದ ಅವುಗಳನ್ನು ಅವಲೋಕಿಸಿ ಅನುಮೋದಿಸಿದರು.ನನ್ನ ಪ್ರಶ್ನೆಗೆ ಉತ್ತರವಾಗಿ, ನಾನು ನೀಡಿದ ಶ್ಲೋಕಗಳ ಅರ್ಥವಿವರಣೆಯು ತಮ್ಮ ಅಭಿಪ್ರಾಯಕ್ಕೆ ಅನುಗುಣವಾಗಿದೆ ಎಂದು ದೃಢಪಡಿಸಿದರು. ಮೇಲಾಗಿ, ಆಶೀರ್ವದಿಸಿ ಈ ಬರಹಗಳನ್ನು ಪ್ರಕಟಿಸಬೇಕೆಂದರು. ನನ್ನ ಕೋರಿಕೆಯ ಮೇರೆಗೆ, ಬಳಿಕ ಅವರು ಸ್ತೋತ್ರಗಳನ್ನು ತಮ್ಮ ಸ್ವಹಸ್ತಾಕ್ಷರದಲ್ಲಿ ಬರೆದು ದಯಪಾಲಿಸಿ ಅವುಗಳನ್ನು ಈ ಗ್ರಂಥದಲ್ಲಿ ಸೇರಿಸಲು ಅನುಮತಿಯನ್ನಿತ್ತರು. ಅವರಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆಗಳೂ ನಮಸ್ಕಾರಗಳೂ ಸಲ್ಲುತ್ತವೆ.


(ಸೂಚನೆ: ಈ ಕನ್ನಡ ಅನುವಾದದಲ್ಲಿ ಗ್ರಂಥಕಾರರ 'ನಾನು', 'ನನ್ನ' ಇತ್ಯಾದಿ ಉತ್ತಮ ಪುರುಷ ಪ್ರಯೋಗಗಳು, ಈ ಅನುವಾದದ ಮೂಲ 'In Praise of the Perfect Guru' ಎಂಬ ಶೀರ್ಷಿಕೆಯೊಂದಿಗೆ 2025ರಲ್ಲಿ 'Centre For Brahmavidya'ದಿಂದ ಪ್ರಕಟಿಸಲ್ಪಟ್ಟ ಆಂಗ್ಲ ಗ್ರಂಥದ ಲೇಖಕರಿಗೆ ಮಾತ್ರ ಅನ್ವಯಿಸುತ್ತವೆ.)

ವಿಷಯಸೂಚಿ

1	ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು, ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ 35ನೆಯ ಜಗದ್ಗುರು ಶಂಕರಾಚಾರ್ಯರು — ನಿರ್ವಿಕಲ್ಪ-ಸಮಾಧಿಯಲ್ಲಿ	1
2	ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು ತಮ್ಮ ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳನ್ನು ವಂದಿಸುತ್ತಿರುವುದು	2
3	ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್ (ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪವಿತ್ರ ಸ್ವಹಸ್ತಾಕ್ಷರದಲ್ಲಿ)	3
4	ಗುರುಧ್ಯಾನಮ್ (ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ ಪವಿತ್ರ ಸ್ವಹಸ್ತಾಕ್ಷರದಲ್ಲಿ)	4
5	**ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್** (ಅನುವಾದ ಮತ್ತು ವ್ಯಾಖ್ಯಾನ)	5
	ಶ್ಲೋಕ 1	7
	ಶ್ಲೋಕ 2	16
	ಶ್ಲೋಕ 3	23
	ಶ್ಲೋಕ 4 ಮತ್ತು 5	36
	ಶ್ಲೋಕ 6	45
	ಶ್ಲೋಕ 7 ಮತ್ತು 8	49
6	**ಗುರುಧ್ಯಾನಮ್** (ಅನುವಾದ ಮತ್ತು ವ್ಯಾಖ್ಯಾನ)	77
	ಗುರುಧ್ಯಾನದ ಪ್ರಾರ್ಥನೆ	79
	ಶ್ಲೋಕ 1	82
	ಶ್ಲೋಕ 2	83
	ಶ್ಲೋಕ 3	84
	ಶ್ಲೋಕ 4	86
	ಶ್ಲೋಕ 5	89



ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು,
ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠದ 35ನೆಯ ಜಗದ್ಗುರು ಶಂಕರಾಚಾರ್ಯರು
— ನಿರ್ವಿಕಲ್ಪ-ಸಮಾಧಿಯಲ್ಲಿ




ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ-ತೀರ್ಥ ಮಹಾಸ್ವಾಮಿಗಳು, ದಕ್ಷಿಣಾಮ್ನಾಯ
ಶೃಂಗೇರಿ ಶ್ರೀ ಶಾರದಾ ಪೀಠದ 36ನೆಯ ಹಾಗೂ ಪ್ರಸ್ತುತ ಜಗದ್ಗುರು ಶಂಕರಾಚಾರ್ಯರು
ತಮ್ಮ ಗುರುಗಳು ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ
ಮಹಾಸ್ವಾಮಿಗಳನ್ನು ವಂದಿಸುತ್ತಿರುವುದು

ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್

ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ

ಪವಿತ್ರ ಸ್ವಹಸ್ತಾಕ್ಷರದಲ್ಲಿ




श्रीमदभिनवविद्यातीर्थाक्षरमालास्तोत्रम्

अखिलानन्दसन्दायि मनोज्ञमुखपङ्कजम् ।
जगद्गुरुं जगत्पूज्यं विद्यातीर्थमहं श्रये ॥
भिद्यते हृदयग्रन्थिर्हृषे यस्मिन्निति श्रुतिः ।
जगौ परावरं ज्ञान्तं तं विद्यातीर्थमाश्रये ॥
नटत्याननरङ्गे हि यस्य साक्षात् सरस्वती ।
नतार्तिशमने दक्षं तं विद्यातीर्थमाश्रये ॥
वटमूलं परित्यज्य शृङ्गाद्रौ निवसन् हि यः ।
तत्त्वं बोधयते भक्तान् दक्षिणास्यं तमाश्रये ॥
विषयाशां परित्यज्य वैराग्यं परमं श्रिताः ।
मुनयो यत्कृपाभाजस्तं विद्यातीर्थमाश्रये ॥
द्यावाभूमी हि जनयन् देव राक इति श्रुतिः ।
यं वर्णयति सर्वेशं तं विद्यातीर्थमाश्रये ॥
तीरे तुङ्गातटिन्या यस्तत्त्वं शिष्यान् प्रबोधयन् ।
आस्ते देशिकराजं तं विद्यातीर्थं समाश्रये ॥
धर्मपूर्वं श्रुतेर्यस्तु यथावदवबोधयन् ।
शिष्यान् धर्मपथासक्तान् कुरुते तमहं श्रये ॥

ಗುರುಧ್ಯಾನಮ್

ಪರಮಪೂಜ್ಯ ಜಗದ್ಗುರು ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳ

ಪವಿತ್ರ ಸ್ವಹಸ್ತಾಕ್ಷರದಲ್ಲಿ



ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್

ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್

ಅಖಿಲಾನನ್ದಸನ್ದಾಯಿ-ಮನೋಜ್ಞಮುಖಪಙ್ಕಜಮ್।
ಜಗದ್ಗುರುಂ ಜಗತ್ಪೂಜ್ಯಂ ವಿದ್ಯಾತೀರ್ಥಮಹಂ ಶ್ರಯೇ॥ 1॥

ಭಿದ್ಯತೇ ಹೃದಯಗ್ರನ್ಥಿರ್ದೃಷ್ಟೇ ಯಸ್ಮಿನ್ನಿತಿ ಶ್ರುತಿಃ।
ಜಗೌ ಪರಾವರಂ ಶಾನ್ತಂ ತಂ ವಿದ್ಯಾತೀರ್ಥಮಾಶ್ರಯೇ॥ 2॥

ನಟತ್ಯಾನನರಙ್ಗೇ ಹಿ ಯಸ್ಯ ಸಾಕ್ಷಾತ್ಸರಸ್ವತೀ।
ನತಾರ್ತಿಶಮನೇ ದಕ್ಷಂ ತಂ ವಿದ್ಯಾತೀರ್ಥಮಾಶ್ರಯೇ॥ 3॥

ವಟಮೂಲಂ ಪರಿತ್ಯಜ್ಯ ಶೃಙ್ಗಾದ್ರೌ ನಿವಸನ್ಹಿಯಃ।
ತತ್ತ್ವಂ ಬೋಧಯತೇ ಭಕ್ತಾನ್ದಕ್ಷಿಣಾಸ್ಯಂ ತಮಾಶ್ರಯೇ॥ 4॥

ವಿಷಯಾಶಾಂ ಪರಿತ್ಯಜ್ಯ ವೈರಾಗ್ಯಂ ಪರಮಂ ಶ್ರಿತಾಃ।
ಮುನಯೋ ಯತ್ಕೃಪಾಭಾಜಸ್ತಂ ವಿದ್ಯಾತೀರ್ಥಮಾಶ್ರಯೇ॥ 5॥

ದ್ಯಾವಾಭೂಮೀ ಹಿ ಜನಯನ್ದೇವ ಏಕ ಇತಿ ಶ್ರುತಿಃ।
ಯಂ ವರ್ಣಯತಿ ಸರ್ವೇಶಂ ತಂ ವಿದ್ಯಾತೀರ್ಥಮಾಶ್ರಯೇ॥ 6॥

ತೀರೇ ತುಙ್ಗತಟಿನ್ಯಾ ಯಸ್ತತ್ತ್ವಂ ಶಿಷ್ಯಾನ್ಪ್ರಬೋಧಯನ್।
ಆಸ್ತೇ ದೇಶಿಕರಾಜಂ ತಂ ವಿದ್ಯಾತೀರ್ಥಂ ಸಮಾಶ್ರಯೇ॥ 7॥

ರ್ಥಮಪೂರ್ವಂ ಶ್ರುತೇರ್ಯಸ್ತು ಯಥಾವದವಬೋಧಯನ್।
ಶಿಷ್ಯಾನ್ಧರ್ಮಪಥಾಸಕ್ತಾನ್ಕುರುತೇ ತಮಹಂ ಶ್ರಯೇ॥ 8॥



ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರಮ್

ಶ್ಲೋಕ 1

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಪರಬ್ರಹ್ಮವಾಗಿ ಈಶ್ವರನಾಗಿ ಮನಮೋಹಕ ಮುನಿಗಳಾಗಿ ಆರಾಧ್ಯರು

***ಅ**ಖಿಲಾನನ್ದಸನ್ದಾಯಿ-ಮನೋಜ್ಞಮುಖಪಙ್ಕಜಮ್।*
ಜಗದ್ಗುರುಂ ಜಗತ್ಪೂಜ್ಯಂ ವಿದ್ಯಾತೀರ್ಥಮಹಂ ಶ್ರಯೇ॥ 1॥

[ಮನೋಹರವಾದ ಕಮಲದಂತಹ ಮುಖವುಳ್ಳ, (ಎಲ್ಲರಿಗೂ ಅವರವರ) ಪ್ರತಿಯೊಂದು ಸುಖವನ್ನೂ ನೀಡುವ, ಜಗತ್ತಿಗೇ ಗುರುಗಳಾದ ಮತ್ತು ಜಗತ್ತಿನಲ್ಲಿ ಎಲ್ಲರಿಗೂ ಪೂಜಾರ್ಹರಾದ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ನಾನು ಆಶ್ರಯಿಸುತ್ತೇನೆ.]

ಈ ಮೊದಲ ಶ್ಲೋಕವು ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಪೂಜ್ಯನಾಮದ ಮೊದಲನೆಯ ಅಕ್ಷರವಾದ 'ಅ'ಕಾರದಿಂದ ಆರಂಭವಾಗುತ್ತದೆ. ಇದರಲ್ಲಿ ಗುರುಗಳನ್ನು ಪರಬ್ರಹ್ಮವೆಂದೂ ಈಶ್ವರನೆಂದೂ, ಮತ್ತು ಅವರನ್ನು ಮಾನುಷರೂಪದಲ್ಲಿ ನೋಡಿದಾಗ, ಮನಮೋಹಕರಾದ ಮುನಿಗಳೆಂದೂ ಸ್ತುತಿಸಲಾಗಿದೆ. ಎರಡನೆಯ ಶ್ಲೋಕದಲ್ಲಿ ಅವರನ್ನು ಪರಬ್ರಹ್ಮವೆಂದೂ, ನಾಲ್ಕು, ಐದು ಮತ್ತು ಆರನೆಯ ಶ್ಲೋಕಗಳಲ್ಲಿ ಈಶ್ವರನೆಂದೂ ನಿಶ್ಚಿತವಾಗಿ ವರ್ಣಿಸಲಾಗಿದೆ. ಮೂರು, ಏಳು ಮತ್ತು ಎಂಟನೆಯ ಶ್ಲೋಕಗಳಲ್ಲಿ ಅವರನ್ನು ಅನುಪಮ ಜೀವನ್ಮುಕ್ತ-ಗುರುಗಳೆಂದು ವರ್ಣಿಸಲಾಗಿದೆ. ಪ್ರತಿಯೊಂದು ಶ್ಲೋಕವೂ ಅವರಿಗೆ ಶರಣಾಗುವ ಹೃತ್ಪೂರ್ವಕ ನಿವೇದನೆಯಿಂದ ಕೊನೆಗೊಳ್ಳುತ್ತದೆ. ಈ ಎಂಟು ಶ್ಲೋಕಗಳ ಮೊದಲ ಅಕ್ಷರಗಳು ಒಟ್ಟಾಗಿ ಗುರುಗಳ ಪೂಜ್ಯನಾಮವನ್ನು ಕೊಡುತ್ತವೆ.

ಈ ಮೊದಲ ಶ್ಲೋಕದ ಮೊದಲ ಪಾದಕ್ಕೆ 'ಅವರು (ಎಲ್ಲರ) ಪ್ರತಿಯೊಂದು ಸುಖವನ್ನೂ ಕೊಡುವವರು' ಎಂಬ ಅರ್ಥವಿದೆ. ಅವರೇ ಪರಬ್ರಹ್ಮ ಎಂಬುದನ್ನು ಈ ಪಾದವು ಪ್ರಕಟಿಸುತ್ತದೆ. ಏಕೆಂದರೆ ಶಾಸ್ತ್ರಗಳ ಪ್ರಕಾರ, (ಚತುರ್ಮುಖ) ಬ್ರಹ್ಮನವರೆಗಿನ ಪ್ರತಿಯೊಬ್ಬ ಜೀವಿಯೂ ಅನುಭವಿಸುವ ಪ್ರತಿಯೊಂದು ಸುಖಕ್ಕೂ ಪರಬ್ರಹ್ಮವೇ ಆಧಾರ.

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು ಪ್ರಸ್ಥಾನತ್ರಯವನ್ನು (ಬ್ರಹ್ಮಸೂತ್ರಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆ — ಇವುಗಳನ್ನು) ಶ್ರೀ ಶಂಕರ-ಭಗವತ್ಪಾದರ ಆಯಾ ಭಾಷ್ಯಗಳೊಂದಿಗೆ ಪಾಠ ಮಾಡುತ್ತಿದ್ದರು. ಆ ಪಾಠಗಳಲ್ಲಿನ ಉಪದೇಶಗಳಿಂದಲೂ ಅವರು ನನಗೆ ಪ್ರತ್ಯೇಕವಾಗಿ ತಿಳಿಸಿದ ವಿಷಯಗಳಿಂದಲೂ ಆಯ್ದ ಅಂಶಗಳನ್ನು ಕೆಳಗೆ ನೀಡಲಾಗಿದೆ. ಇಲ್ಲಿ ಉದ್ಧರಿಸಿರುವ ಉಪನಿಷತ್ತುಗಳ ವಾಕ್ಯಗಳ ಸರಳ ಭಾವಾನುವಾದವು, ಅವರು ವಿವರಿಸಿದಂತೆ ಭಗವತ್ಪಾದರ ಭಾಷ್ಯಗಳನ್ನು ಆಧರಿಸಿದೆ.

'ಬ್ರಹ್ಮವು ಪರಿಪೂರ್ಣವೂ ಅನಂತವೂ ಆದ ಆನಂದಸ್ವರೂಪವೇ ಆಗಿದೆ. "ವಿಜ್ಞಾನಮಾನನ್ದಂ ಬ್ರಹ್ಮ — ಬ್ರಹ್ಮವು ಶುದ್ಧಚೈತನ್ಯವೂ ಪರಿಪೂರ್ಣಾನಂದವೂ ಆಗಿದೆ", ಎಂದು ಬೃಹದಾರಣ್ಯಕ-ಉಪನಿಷತ್ತು ಘೋಷಿಸುತ್ತದೆ.[1] "ಯೋ ವೈ ಭೂಮಾ ತತ್ಸುಖಂ ನಾಲ್ಪೇ ಸುಖಮಸ್ತಿ — ಯಾವುದು ಅನಂತವೋ ಅದೇ ಸುಖ; ಪರಿಮಿತವಾದುದರಲ್ಲಿ ಸುಖವಿಲ್ಲ", ಎಂದು ಛಾಂದೋಗ್ಯ-ಉಪನಿಷತ್ತು ಉಪದೇಶಿಸುತ್ತದೆ.[2] ಚತುರ್ಮುಖಬ್ರಹ್ಮನವರೆಗಿನ ಪ್ರತಿಯೊಂದು ಬಗೆಯ ಜೀವಿಯು ಅನುಭವಿಸುವ ಎಲ್ಲ ವಿಧದ ಸುಖಕ್ಕೂ ಆನಂದಸ್ವರೂಪವಾದ ಪರಬ್ರಹ್ಮವೇ ಏಕೈಕವಾದ ನಿಜವಾದ ಮೂಲ. ಆದ್ದರಿಂದಲೇ ತೈತ್ತಿರೀಯ-ಉಪನಿಷತ್ತು ಹೀಗೆ ಸಾರುತ್ತದೆ: "*ರಸೋ ವೈ ಸಃ । ರಸಂ ಹ್ಯೇವಾಯಂ ಲಬ್ಧ್ವಾನನ್ದೀ ಭವತಿ...ಕೋ ಹ್ಯೇವಾನ್ಯಾತ್ಕಃ ಪ್ರಾಣ್ಯಾತ್ । ಯದೇಷ ಆಕಾಶ ಆನನ್ದೋ ನ ಸ್ಯಾತ್ । ಏಷ ಹ್ಯೇವಾನನ್ದಯಾತಿ* — ಆ ಸ್ವಯಂಸೃಷ್ಟನಾದ ಬ್ರಹ್ಮವು ನಿಶ್ಚಯವಾಗಿಯೂ ಸುಖದ ಆಗರ...ಆನಂದಸ್ವರೂಪವಾದ ಈ ಆಕಾಶವು (ಬ್ರಹ್ಮವು) ಇಲ್ಲದಿದ್ದರೆ ಯಾರು ತಾನೆ ಉಸಿರೆಳೆಯುತ್ತಿದ್ದರು, ಯಾರು ತಾನೆ ಉಸಿರುಬಿಡುತ್ತಿದ್ದರು? ಇದೊಂದೇ ಜೀವಿಗಳನ್ನು ಸುಖಿಗಳನ್ನಾಗಿ ಮಾಡುತ್ತದೆ."[3] ಅಂತೆಯೇ, "*ಏತಸ್ಯೈವಾನನ್ದಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವನ್ತಿ* — ಉಳಿದೆಲ್ಲ ಜೀವಿಗಳೂ (ಅಜ್ಞಾನಿಗಳೆಲ್ಲರೂ) ಈ ಆನಂದದ ಒಂದು ಕಣವನ್ನೇ ಆಶ್ರಯಿಸಿ ಬದುಕುತ್ತಾರೆ",[4] ಎಂದು ಬೃಹದಾರಣ್ಯಕ-ಉಪನಿಷತ್ತು ತಿಳಿಸುತ್ತದೆ.

'ಬ್ರಹ್ಮವು ಪಾರಮಾರ್ಥಿಕವೂ ಅನಂತವೂ ಆದ ಆನಂದ — ಈ ಬ್ರಹ್ಮದಲ್ಲಿ ವಿಷಯಿ (ಅರಿಯುವವನು) ಮತ್ತು ವಿಷಯ (ಅರಿಯಲ್ಪಡುವುದು) ಎಂಬ ಭೇದವಾಗಲಿ ಯಾವುದೇ ಬದಲಾವಣೆಯಾಗಲಿ ಇಲ್ಲ. ಆದರೆ ಜೀವಿಗಳು ಎಚ್ಚರದಲ್ಲೂ ಕನಸಿನಲ್ಲೂ ಅನುಭವಿಸುವ ಸುಖಕ್ಕೆ ಆದಿಯೂ ಅಂತ್ಯವೂ ಉಂಟು; ಅದು ಪರಿಮಿತವಾದುದು, ಏರುಪೇರುಗಳುಳ್ಳದ್ದು ಮತ್ತು ಅನುಭವಿಸುವವನು–ಅನುಭವ–ಅನುಭವಿಸಲ್ಪಡುವುದು ಎಂಬ ಮೂರು ಬಗೆಯ ಭೇದದಿಂದ ಕೂಡಿದುದು. ಹೀಗಿರುವಾಗ, ಅನುಭವಕ್ಕೆ ಬರುವ ಪ್ರತಿಯೊಂದು ಸಂತೋಷಕ್ಕೂ ಬ್ರಹ್ಮವೇ ನಿಜವಾದ ಆಧಾರ ಎಂಬುದಾಗಿ ಹೇಗೆ ಉಪದೇಶಿಸಲಾಗಿದೆ ಎಂಬ ಪ್ರಶ್ನೆ ಉದ್ಭವಿಸಬಹುದು. ಅದಕ್ಕೆ ಉತ್ತರವಾಗಿ, ಬ್ರಹ್ಮವು ಅದ್ವಯವಾಗಿದ್ದರೂ ಅವಿದ್ಯೆಯ ಕಾರಣದಿಂದ ಅದರ ಮೇಲೆ ದ್ವೈತವು ಮಿಥ್ಯೆಯಾಗಿ ಆರೋಪಿಸಲ್ಪಡುತ್ತದೆ ಎಂದು ಹೇಳಲಾಗಿದೆ. ಮಬ್ಬು ಬೆಳಕಿನಲ್ಲಿ ಹಗ್ಗವು ಹಾವಾಗಿ ಹೇಗೆ ತೋರುತ್ತದೆಯೊ, ಹಾಗೆ ಬ್ರಹ್ಮವು ಸಂಪೂರ್ಣವಾಗಿ ನಿರ್ವಿಕಾರವಾಗಿಯೇ ಇದ್ದುಕೊಂಡು ಈ ನಾನಾ ವೈವಿಧ್ಯದಿಂದ ಕೂಡಿದ

[1] ಬೃಹದಾರಣ್ಯಕ-ಉಪನಿಷತ್ 3.9.28.7

[2] ಛಾಂದೋಗ್ಯ-ಉಪನಿಷತ್ 7.23.1

[3] ತೈತ್ತಿರೀಯ-ಉಪನಿಷತ್ 2.7.1. ಬ್ರಹ್ಮಸೂತ್ರ 1.1.22ರ ಭಾಷ್ಯವು ಆಕಾಶಃ ಎಂಬುದನ್ನು ಬ್ರಹ್ಮ ಎಂದು ಅರ್ಥೈಸುತ್ತದೆ.

[4] ಬೃಹದಾರಣ್ಯಕ-ಉಪನಿಷತ್ 4.3.32

ಜಗತ್ತಾಗಿ ತೋರುತ್ತದೆ. ಅನುಭವಿಸುವವನು–ಅನುಭವ–ಅನುಭವಿಸಲ್ಪಡುವುದು ಎಂಬ ಭೇದದಿಂದ ಕೂಡಿದ, ಕಾಲಮಿತಿಯುಳ್ಳ ಹಾಗೂ ಸೀಮಿತ ಸಂತೋಷಗಳು ಅವಿದ್ಯೆಯ ವ್ಯಾಪ್ತಿಗೆ ಸೇರಿದವು. ಕದಡಿದ ಮಣ್ಣು ಬೆರೆತ ನೀರಿನಲ್ಲಿ ಸೂರ್ಯನ ಪ್ರತಿಬಿಂಬಗಳು ಕಾಣುವಂತೆ, ಚಂಚಲವಾದ ಮನಸ್ಸುಗಳಲ್ಲಿ ಉಂಟಾದ ಬ್ರಹ್ಮದ ಅಮಿತಾನಂದದ ಪ್ರತಿಬಿಂಬಗಳೇ ಅವು. ಬದಲಾಗದ ಹಗ್ಗವೇ ಅಸತ್ಯವಾದ ಹಾವಿಗೆ ನಿಜವಾದ ಆಧಾರ ಮತ್ತು ಆಕಾಶದಲ್ಲಿರುವ ಪ್ರಖರನಾದ ಸೂರ್ಯನೊಬ್ಬನೇ ಕದಡಿದ, ಮಣ್ಣು ಬೆರೆತ ನೀರಿನಲ್ಲಿ ತೋರುವ ವಿವಿಧವಾಗಿ ಹೊಳೆಯುವ ಚಂಚಲ ಪ್ರತಿಬಿಂಬಗಳಿಗೆ ಮೂಲ. ಹಾಗೆಯೇ, ಸಂಪೂರ್ಣವಾಗಿ ನಿರ್ವಿಕಾರವೂ ಅನುಭವಿಸುವವನು–ಅನುಭವ–ಅನುಭವಿಸಲ್ಪಡುವುದು ಎಂಬ ಭೇದವಿಲ್ಲದುದೂ, ಅನಂತಾನಂದಸ್ವರೂಪವೂ ಆದ ಬ್ರಹ್ಮವೇ ಸಕಲ ಸುಖಗಳಿಗೂ ನಿಜವಾದ ಮೂಲ.

'ಬ್ರಹ್ಮದ ಆನಂದವು ಎಲ್ಲ ಮನೋವೃತ್ತಿಗಳಲ್ಲೂ (ಮನಸ್ಸಿನ ಚಿಂತನೆ ಅಥವಾ ಗ್ರಹಿಕೆಯ ರೂಪಗಳಲ್ಲೂ) ಪ್ರಕಟವಾಗುವುದಿಲ್ಲ. ಕೋಪಕ್ಕೆ ತುತ್ತಾದವನಿಗೆ ಸಂತೋಷವಿರುವುದಿಲ್ಲ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಸಾತ್ತ್ವಿಕವಾದ ಮನೋವೃತ್ತಿಗಳಲ್ಲಿ ಆನಂದವು ವಿವಿಧ ಪ್ರಮಾಣದಲ್ಲಿ ಪ್ರಕಟವಾಗುತ್ತದೆ. ಗಾಳಿಯ ಬೀಸುವಿಕೆ ನಿಂತು ಕೆಸರು ತಳಕ್ಕೆ ಇಳಿದಾಗ, ನೀರು ಸ್ಥಿರವೂ ತಿಳಿಯಾಗಿಯೂ ಆಗಿ ಸೂರ್ಯನ ಪ್ರತಿಬಿಂಬವು ಸ್ಪಷ್ಟವಾಗಿಯೂ ಪ್ರಕಾಶಮಾನವಾಗಿಯೂ ತೋರುವಂತೆ, ಮನಸ್ಸಿನ ಶಾಂತಿ ಎಷ್ಟು ಮಟ್ಟಿಗೋ ಅಷ್ಟು ಆನಂದದ ಅನುಭವವಾಗುತ್ತದೆ. ವಸ್ತುವನ್ನು ಪಡೆಯಬೇಕೆಂಬ ಹಂಬಲವು ಮನಸ್ಸನ್ನು ಕದಡುತ್ತದೆ. ಆ ಬಯಕೆ ಈಡೇರಿದಾಗ ಮನಸ್ಸು ತಾತ್ಕಾಲಿಕವಾಗಿ ಶಾಂತ-ವಾಗುತ್ತದೆ. ಆ ಶಾಂತಿಯು ಅಷ್ಟರಮಟ್ಟಿನ ಬ್ರಹ್ಮಾನಂದವು ಮನಸ್ಸಿನಲ್ಲಿ ತೋರಲು ಅನುಕೂಲ ಮಾಡಿಕೊಡುತ್ತದೆ. ಹೀಗೆ ಬಯಸಿದ ವಸ್ತುವು ದೊರೆತಾಗ ಸುಖಾನುಭವವಾಗುತ್ತದೆ.

'ವಿವೇಕದ ಬಲದಿಂದ ಎಲ್ಲ ಬಯಕೆಗಳನ್ನೂ ತೊರೆದು, ಮನಸ್ಸನ್ನು ಬ್ರಹ್ಮದಲ್ಲಿ ನೆಲೆಗೊಳಿಸಿ ಸಮಾಧಿಯಲ್ಲಿ ಪೂರ್ಣವಾಗಿ ಶಾಂತಗೊಳಿಸಿದಾಗ, ಬ್ರಹ್ಮಾನಂದದ ಅಭಿವ್ಯಕ್ತಿಯು ಅತ್ಯಂತ ಹೆಚ್ಚಾಗಿರುತ್ತದೆ. ಬ್ರಹ್ಮಸಾಕ್ಷಾತ್ಕಾರದಿಂದ ಅವಿದ್ಯೆಯ ತೆರೆ ಹರಿದುಹೋದಾಗ ಅದು ಅಲ್ಲಿ ಪೂರ್ಣವಾಗಿ ಪ್ರಕಟವಾಗುತ್ತದೆ. ಸಾಮಾನ್ಯವಾಗಿ ಎಚ್ಚರ, ಕನಸು ಮತ್ತು ಕನಸಿಲ್ಲದ ಗಾಢನಿದ್ರೆ (ಸುಷುಪ್ತಿ) ಎಂಬ ಮೂರು ಅವಸ್ಥೆಗಳು ಮನಸ್ಸಿಗೆ ಇರುತ್ತವೆ. ಅಜ್ಞಾನಿಗಳ ವಿಷಯದಲ್ಲಿ, ಎಚ್ಚರ ಮತ್ತು ಕನಸಿನ ಅವಸ್ಥೆಗಳಲ್ಲಿ ಬ್ರಹ್ಮಾನಂದವು ಮೂಲಾವಿದ್ಯೆಯಿಂದ ಹಾಗೂ ಅದರ ಕಾರ್ಯಗಳಿಂದ ಮುಚ್ಚಲ್ಪಟ್ಟಿರುತ್ತದೆ. ಆದರೆ ಸುಷುಪ್ತಿಯಲ್ಲಿ ಮನಸ್ಸು ಲಯವಾಗಿರುತ್ತದೆ; ಅಲ್ಲಿ ಬ್ರಹ್ಮಾನಂದವು ಕೇವಲ ಮೂಲಾವಿದ್ಯೆಯಿಂದ ಮಾತ್ರ ಮುಚ್ಚಲ್ಪಟ್ಟಿದ್ದು ಪ್ರಕಟವಾಗುತ್ತದೆ. 'ನಾನು' ಎಂಬ ಭಾವನೆಯಿಲ್ಲದ ಈ ಗಾಢನಿದ್ರೆಯ ಮಹದಾನಂದವು ಮಗು, ಮೂಢ, ಪಂಡಿತ, ಹಸು, ನಾಯಿ ಇತ್ಯಾದಿ ಎಲ್ಲ ಜೀವಿಗಳಲ್ಲೂ ಒಂದೇ ಆಗಿರುತ್ತದೆ.

'ಪ್ರತಿಯೊಬ್ಬ ಜೀವಿಯೂ ಒಂದು ಜನ್ಮದಲ್ಲಿ ತನ್ನ ಧರ್ಮ ಮತ್ತು ಅಧರ್ಮಗಳ ಫಲವಾಗಿ ಕ್ರಮವಾಗಿ ಸುಖ ಮತ್ತು ದುಃಖಗಳನ್ನು ಅನುಭವಿಸುತ್ತಾನೆ. ಜೀವಿಯು ಹಿಂದೆ ಸಂಪಾದಿಸಿದ ಧರ್ಮವು — ಪುಣ್ಯವು — ಒಂದು ಜನ್ಮದಲ್ಲಿ ಫಲಕೊಡಲಾರಂಭಿಸಿದಾಗ, ಆ ಧರ್ಮಕ್ಕೆ ತಕ್ಕಷ್ಟು ಬ್ರಹ್ಮಾನಂದವು ಪ್ರಕಟವಾಗುತ್ತದೆ; ಆ ಸಮಯದಲ್ಲಿ ಜೀವಿಯು ಅನುಭವಿಸುವ ಸುಖವು ಬ್ರಹ್ಮಾನಂದವೇ. ಅನುಭವಕ್ಕೆ ಬರುವ ಸಂತೋಷದ ರೂಪದಲ್ಲಿ ಬ್ರಹ್ಮಾನಂದವು ಹೀಗೆ ಪ್ರಕಟವಾಗುವುದು ಅದಕ್ಕೆ ಬೇಕಾದ ಕಾರಣಗಳು ಒಟ್ಟುಗೂಡಿದಾಗ ಮಾತ್ರ; ಆಕಸ್ಮಿಕವಾಗಿ ಅಲ್ಲ. ಧರ್ಮವು ಹೆಚ್ಚಿದಂತೆಲ್ಲ ಜೀವಿಯು ಬ್ರಹ್ಮಲೋಕದವರೆಗಿನ ಮೇಲುಮೇಲಿನ ಲೋಕಗಳನ್ನು ಪಡೆಯುತ್ತಾನೆ. ಶಾಸ್ತ್ರಗಳ ಪ್ರಕಾರ, ಪ್ರತಿಯೊಂದು ಮೇಲಿನ ಲೋಕದಲ್ಲಿ ಅನುಭವಿಸುವ ಸಂತೋಷವು ಅದರ ಹಿಂದಿನ ಲೋಕದ ಸಂತೋಷಕ್ಕಿಂತ ನೂರುಪಟ್ಟು ಹೆಚ್ಚಿನದು. ಎಲ್ಲ ಸಂದರ್ಭಗಳಲ್ಲೂ, ಆಯಾ ಲೋಕಗಳಲ್ಲಿ ಅನುಭವಿಸುವ ಸುಖವಾಗಿ ಪ್ರಕಟವಾಗುವುದು ಬ್ರಹ್ಮಾನಂದವೇ.

'ಸೂರ್ಯನು ಸ್ವಭಾವತಃ ಕೇವಲ ಪ್ರಕಾಶಸ್ವರೂಪನಾಗಿ ಬೆಳಗುತ್ತಿರುತ್ತಾನೆ (ಪ್ರಕಾಶತೇ); ಆದಾಗ್ಯೂ, ವಸ್ತುಗಳಿಗೆ ಸಂಬಂಧಪಟ್ಟಂತೆ ಅವನು ಅವುಗಳನ್ನು ಬೇರೆ ಬೇರೆ ರೀತಿಯಲ್ಲಿ ಬೆಳಗಿಸುತ್ತಾನೆ (ಪ್ರಕಾಶಯತಿ) ಎಂದೂ ಹೇಳಲಾಗುತ್ತದೆ. ಅಂತೆಯೇ, ಬ್ರಹ್ಮವು ಸ್ವಭಾವತಃ ಆನಂದಸ್ವರೂಪವಾಗಿದ್ದು ಯಾವ ಕ್ರಿಯೆಯೂ ಇಲ್ಲದುದಾಗಿದ್ದರೂ, *ರಸಃ* ಮತ್ತು *ಆನನ್ದಯಾತಿ* (*ಆನನ್ದಯತಿ* ಎಂಬುದರ ವೈದಿಕ ರೂಪ) ಮೊದಲಾದ ಪದಗಳ ಮೂಲಕ ಶಾಸ್ತ್ರದಲ್ಲಿ ಅದನ್ನು ಸುಖವನ್ನು ಕೊಡುವುದೆಂದೂ ಹೇಳಲಾಗಿದೆ.'

ಈ ಶ್ಲೋಕದ ಮೂರನೆಯ ಪಾದವು ಗುರುಗಳನ್ನು ಈಶ್ವರನೆಂದು ನಿರೂಪಿಸುತ್ತದೆ. ಆ ಪಾದದ ಮೊದಲ ಪದವಾದ *'ಜಗದ್ಗುರುಮ್'* ಎಂಬುದನ್ನು ಯಾವ ಗೌಣಾರ್ಥದಲ್ಲೂ ಅಲ್ಲದೆ ಮುಖ್ಯಾರ್ಥದಲ್ಲಿಯೇ ತೆಗೆದುಕೊಂಡರೆ, ಗುರುಗಳು *'ಜಗತ್ತಿನ ಗುರುಗಳು'* ಎಂಬುದನ್ನು ತಿಳಿಸುತ್ತದೆ. ಹಾಗೆಯೇ, ಅದೇ ಪಾದದ ಎರಡನೆಯ ಮತ್ತು ಕೊನೆಯ ಪದವಾದ *'ಜಗತ್ಪೂಜ್ಯಮ್'* ಎಂಬುದು ಅವರು *'ಜಗತ್ತಿನ ಎಲ್ಲರಿಗೂ ಪೂಜಾರ್ಹರು'* ಎಂಬುದನ್ನೂ ತಿಳಿಸುತ್ತದೆ. ಇವೆರಡೂ ಅನ್ವಯಿಸುವುದು ಈಶ್ವರನಿಗೊಬ್ಬನಿಗೇ. ಅಂದರೆ *'ಜಗತ್ಪೂಜ್ಯಮ್'* ಎಂಬುದರ ಜೊತೆಗೆ *'ಜಗದ್ಗುರುಮ್'* ಎಂಬುದನ್ನು ಬಳಸಿರುವುದು, *'ಜಗದ್ಗುರುಮ್'* ಎಂಬ ಪದವನ್ನು ಕೇವಲ ಬಿರುದಿನಂತೆಯಾಗಲಿ ಬೇರೆ ಯಾವುದೇ ಲಾಕ್ಷಣಿಕ ಅರ್ಥದಲ್ಲಿಯಾಗಲಿ ಬಳಸಿಲ್ಲ ಎಂಬುದನ್ನು ಸೂಚಿಸುತ್ತದೆ. ಇಲ್ಲಿ *ಜಗದ್ಗುರುಮ್* ಮತ್ತು *ಜಗತ್ಪೂಜ್ಯಮ್* ಎಂಬ ಎರಡೂ ಪದಗಳನ್ನು ಅವುಗಳ ಮುಖ್ಯಾರ್ಥದಲ್ಲಿಯೇ ಬಳಸಲಾಗಿದೆ ಎಂಬುದನ್ನು 4, 5 ಮತ್ತು 6ನೆಯ ಶ್ಲೋಕಗಳು ನಿಸ್ಸಂದೇಹವಾಗಿ ತೋರಿಸುತ್ತವೆ.

ಸುರೇಶ್ವರಾಚಾರ್ಯರು ಈಶ್ವರನನ್ನು ಖಚಿತವಾಗಿ ವರ್ಣಿಸಿ, ಅವನನ್ನೇ ಜಗದ್ಗುರು ಎಂದು ಸ್ಪಷ್ಟವಾಗಿ ಗುರುತಿಸುತ್ತಾರೆ: *'ಸರ್ವಜ್ಞಃ ಸರ್ವಶಕ್ತಿಶ್ಚ ಸರ್ವಾತ್ಮಾ ಸರ್ವಗೋ ಧ್ರುವಃ ।*

ಜಗಜ್ಜನಿಸ್ಥಿತಿಧ್ವಂಸ-ಹೇತುರೇಷ ಸದೇಶ್ವರಃ ॥...ಈಶೋಽಸಾವನ್ತರ್ಯಾಮೀ ಜಗದ್ಗುರುಃ — ಅವನು ಸರ್ವಜ್ಞನು, ಸರ್ವಶಕ್ತನು, ಎಲ್ಲರ ಆತ್ಮನು, ಸರ್ವವ್ಯಾಪಿಯು ಮತ್ತು ನಿರ್ವಿಕಾರನು. ಅವನೇ ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣನಾದ ನಿತ್ಯನಾದ ಈಶ್ವರನು...ಎಲ್ಲರ ಅಂತರ್ಯಾಮಿಯಾದ ಈ ಈಶ್ವರನೇ ವಿಶ್ವಗುರುವು (ಜಗದ್ಗುರುವು).'[1]

1982ರ ಆಗಸ್ಟ್ ತಿಂಗಳ ಮೂರನೆಯ ವಾರದಲ್ಲಿ ನವದೆಹಲಿಯಲ್ಲಿ ಮೊದಲ ಬಾರಿಗೆ ಗುರುಗಳ ದರ್ಶನಕ್ಕೆ ಬಂದಿದ್ದ ಚಂದ್ರಮೌಳಿ ಎಂಬುವವರಿಗೂ ಗುರುಗಳಿಗೂ ನಡೆದ ಸಂಭಾಷಣೆಯ ಸಾರಾಂಶ ಈ ಕೆಳಕಂಡಂತಿದೆ.[2]

ಚಂದ್ರಮೌಳಿ: 'ಜಗದ್ಗುರು' ಎಂಬ ಪದ ಅದರ ಮುಖ್ಯಾರ್ಥದಲ್ಲಿ ಯಾರಿಗೆ ಅನ್ವಯಿಸುತ್ತದೆ?

> 'ವಸುದೇವಸುತಂ ದೇವಂ ಕಂಸಚಾಣೂರಮರ್ದನಮ್ । ದೇವಕೀಪರಮಾನನ್ದಂ ಕೃಷ್ಣಂ ವನ್ದೇ ಜಗದ್ಗುರುಮ್ (ವಸುದೇವನ ಮಗನೂ, ಕಂಸ ಮತ್ತು ಚಾಣೂರರನ್ನು ಸಂಹರಿಸಿದವನೂ, ದೇವಕಿಗೆ ಪರಮಾನಂದವನ್ನು ಉಂಟುಮಾಡಿದವನೂ, ಜಗತ್ತಿನ ಗುರುವೂ ಆದ ಶ್ರೀಕೃಷ್ಣನಿಗೆ ನಾನು ನಮಸ್ಕರಿಸುತ್ತೇನೆ)',[3] ಎಂಬ ಶ್ಲೋಕದಲ್ಲಿ ಕೃಷ್ಣನನ್ನು 'ಜಗದ್ಗುರು' ಎಂದು ಕರೆಯಲಾಗಿದೆ. ಅವನು ಅಕ್ಷರಶಃ ಜಗದ್ಗುರುವೇ? ಹಾಗಿದ್ದರೆ ಅದು ಹೇಗೆ? ಅಥವಾ ಅವನು ಗೌಣಾರ್ಥದಲ್ಲಿ ಮಾತ್ರ ಜಗದ್ಗುರುವೇ? ಕೃಷ್ಣನೇ ನಾಸ್ತಿಕರ ಬಗ್ಗೆ, '*ಜಗದಾಹುರನೀಶ್ವರಮ್* (ಜಗತ್ತಿಗೆ ಈಶ್ವರನೇ ಇಲ್ಲವೆಂದು ಅವರು ಹೇಳುತ್ತಾರೆ)',[4] ಎನ್ನುತ್ತಾ ಈಶ್ವರನ ಇರುವಿಕೆಯನ್ನು ಒಪ್ಪದವರಿದ್ದಾರೆ ಎಂದು ಹೇಳುತ್ತಾನೆ. ಹೀಗಿರುವಾಗ, 'ಜಗದ್ಗುರು' ಎಂಬ ಪದದ ಮುಖ್ಯಾರ್ಥವನ್ನು ಸಡಿಲಗೊಳಿಸದೆ ಮತ್ತು ನಾಸ್ತಿಕರನ್ನು ಹೊರತುಪಡಿಸದೆ, ಯಾರಾದರೂ ಜಗದ್ಗುರುವಾಗಿರಲು ಹೇಗೆ ಸಾಧ್ಯ?

---

[1] ಬೃಹದಾರಣ್ಯಕ-ಉಪನಿಷದ್-ಭಾಷ್ಯ-ವಾರ್ತಿಕ 1.4.376—77. ಆನಂದಗಿರಿಗಳ ಶಾಸ್ತ್ರ-ಪ್ರಕಾಶಿಕಾ ವ್ಯಾಖ್ಯಾನವು ಅನ್ತರ್ಯಾಮೀ — ಎಲ್ಲರ ಅಂತರ್ನಿಯಾಮಕ — ಮತ್ತು *ಜಗದ್ಗುರು* ಎಂಬ ಪದಗಳನ್ನು ಜೋಡಿಸುತ್ತದೆ.

[2] ಶೃಂಗೇರಿ ಮಠದ ಪುರೋಹಿತರಾದ ಗಣಪತಿ ಸುಬ್ರಹ್ಮಣ್ಯ ಅವಧಾನಿಗಳು, ಇಪ್ಪತ್ತರ ಹರೆಯದ ಒಬ್ಬ ವ್ಯಕ್ತಿಯನ್ನು ನನಗೆ ತಮಿಳಿನಲ್ಲಿ, 'ಇವರು ಚಂದ್ರಮೌಳಿ; ಮೊದಲ ಬಾರಿಗೆ ಬಂದಿದ್ದಾರೆ', ಎಂದು ಪರಿಚಯಿಸಿದರು; ಮತ್ತು ಅವರಿಗೆ ತೆಲುಗಿನಲ್ಲಿ, 'ಇಂದು ಗುರುಗಳೊಡನೆ ನಿಮಗಾದ ಸಂಭಾಷಣೆಯನ್ನು ಇವರಿಗೆ ಹೇಳಿ', ಎಂದರು. ಚಂದ್ರಮೌಳಿ ತೆಲುಗಿನಲ್ಲಿ ಹೇಳಲಾರಂಭಿಸಿದಾಗ ಅವಧಾನಿಗಳು ಅವರನ್ನು ತಡೆದು, 'ಇಂಗ್ಲಿಷಿನಲ್ಲಿ ಹೇಳಿ; ಇವರಿಗೆ ತೆಲುಗು ಗೊತ್ತಿಲ್ಲ', ಎಂದರು. ತಾವು ಹಲವು ಅಂಶಗಳನ್ನು ಬರೆದಿಟ್ಟುಕೊಂಡಿದ್ದ ಒಂದು ಹಾಳೆಯ ನೆರವಿನಿಂದ ಚಂದ್ರಮೌಳಿ ಹಾಗೆಯೇ ಮಾಡಿದರು. ವಿಜ್ಞಾನವನ್ನು ಆಧರಿಸಿದ ತಮ್ಮ ಪ್ರಶ್ನೆಗೂ, 'ಜಗದ್ಗುರು' ಎಂಬುದರ ಕುರಿತ ಪ್ರಶ್ನೆಗೂ ಗುರುಗಳು ಕೊಟ್ಟ ಉತ್ತರಗಳನ್ನು ಅವರು ತಿಳಿಸಿದರು. ತಾವು ಕೇಳಿದ್ದ ಒಂದು ವೈಯಕ್ತಿಕ ಸಮಸ್ಯೆಯನ್ನೂ ಅದಕ್ಕೆ ಗುರುಗಳು ಸೂಚಿಸಿದ ಪರಿಹಾರವನ್ನೂ ತಾವು ನನಗೆ ತಿಳಿಸುತ್ತಿಲ್ಲವೆಂದೂ ಅವರು ಹೇಳಿದರು.

[3] ಗರ್ಗ-ಸಂಹಿತಾ 5 (ಮಥುರಾ-ಖಂಡ) 1.1

[4] ಭಗವದ್ಗೀತಾ 16.8

ಗುರುಗಳು: ಸ್ಥೂಲ ಮತ್ತು ಸೂಕ್ಷ್ಮ ಜಗತ್ತಿನ ಸೃಷ್ಟಿಕರ್ತನೂ ರಕ್ಷಕನೂ ಸಂಹಾರಕನೂ, ಎಲ್ಲ ಜೀವಿಗಳ ಅಂತರ್ಯಾಮಿಯೂ, ಕರ್ಮಫಲದಾತನೂ, ಸರ್ವಜ್ಞನೂ, ಪ್ರತಿಯೊಂದು ಸೃಷ್ಟಿಚಕ್ರದ ಆದಿಯಲ್ಲಿ ವೇದಗಳನ್ನು ಮೊದಲು ಉಪದೇಶಿಸುವವನೂ ಆದ ಈಶ್ವರನೇ ಮುಖ್ಯಾರ್ಥದಲ್ಲಿ ನಿಜವಾದ ಜಗದ್ಗುರು. ಪರಮ ಜಗದ್ಗುರುವಾದವನು ಕಾಲದಿಂದ ಸೀಮಿತನಾಗಿರಲು ಸಾಧ್ಯವಿಲ್ಲ; ಹಾಗಿದ್ದಲ್ಲಿ ತನಗಿಂತ ಮುಂಚೆ ಇದ್ದವರಿಗೆ ಅವನು ಗುರುವಾಗಲಾರನು. ಇದಲ್ಲದೆ, ಅವನು ಸರ್ವಜ್ಞನೂ ಆಗಿರಬೇಕು; ಇಲ್ಲದಿದ್ದರೆ ಅವನಿಗೇ ಒಬ್ಬ ಗುರುವಿನ ಅಗತ್ಯವಿರುತ್ತದೆ. ಆದ್ದರಿಂದಲೇ ಯೋಗಸೂತ್ರಗಳಲ್ಲಿ ಮೊದಲು ಈಶ್ವರನು ಸರ್ವಜ್ಞನೆಂದು ಸ್ಥಾಪಿಸಿ, ಬಳಿಕ ಹೀಗೆ ಹೇಳಲಾಗಿದೆ: 'ಸ ಪೂರ್ವೇಷಾಮಪಿ ಗುರುಃ ಕಾಲೇನಾನವಚ್ಛೇದಾತ್ — ಅವನು ಕಾಲದಿಂದ ಪರಿಚ್ಛಿನ್ನನಲ್ಲದ ಕಾರಣ, ಪ್ರಾಚೀನರಿಗೂ (ಬ್ರಹ್ಮನೇ ಮೊದಲಾದವರಿಗೂ) ಗುರುವು.'[1] ಈಗಿನ ಸೃಷ್ಟಿಚಕ್ರದ ಆದಿಯಲ್ಲಿ ಈಶ್ವರನು ಪರಿಪೂರ್ಣ ಜ್ಞಾನದೊಡನೆ ಇದ್ದಂತೆಯೇ, ಹಿಂದಿನ ಸೃಷ್ಟಿಚಕ್ರಗಳಲ್ಲೂ ಹಾಗೆಯೇ ಇದ್ದನೆಂದು ಶಾಸ್ತ್ರಪ್ರಮಾಣದ ಮೇಲೆ ತಿಳಿಯಬೇಕು ಎಂದು ಯೋಗಸೂತ್ರಭಾಷ್ಯವು ವಿವರಿಸುತ್ತದೆ.

ಗುರುಗಳು (ಮುಂದುವರಿಸುತ್ತಾ): ವೇದಗಳು ಪರಮಾತ್ಮನ ನಿಶ್ವಾಸದಂತೆ ಎಂದು ಬೃಹದಾರಣ್ಯಕ-ಉಪನಿಷತ್ತು ಹೇಳುತ್ತದೆ; ಹೀಗೆ, ಪರಮಾತ್ಮನಿಂದ ಬಹುಮಟ್ಟಿಗೆ ಅನಾಯಾಸವಾಗಿ ಹೊರಹೊಮ್ಮಿದವು ಎಂಬುದನ್ನು ಅದು ಸೂಚಿಸುತ್ತದೆ: 'ಅಸ್ಯ ಮಹತೋ ಭೂತಸ್ಯ ನಿಃಶ್ವಸಿತಮೇತದ್ಯದ್ಋಗ್ವೇದೋ ಯಜುರ್ವೇದಸ್ಸಾಮವೇದೋ ಽಥರ್ವಾಙ್ಗಿರಸಃ — ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ...ಇವು ಈ ಅನಂತ ವಸ್ತುವಿನ ನಿಶ್ವಾಸದಂತೆ.'[2] 'ಯೋ ಬ್ರಹ್ಮಾಣಂ ವಿದಧಾತಿ ಪೂರ್ವಂ ಯೋ ವೈ ವೇದಾಂಶ್ಚ ಪ್ರಹಿಣೋತಿ ತಸ್ಮೈ — ಆದಿಯಲ್ಲಿ ಬ್ರಹ್ಮನನ್ನು ಸೃಷ್ಟಿಸಿ, ಅವನಿಗೆ ವೇದಗಳನ್ನು ಉಪದೇಶಿಸುವವನು'[3] ಪರಮೇಶ್ವರನೇ ಎಂದು ಶ್ವೇತಾಶ್ವತರ-ಉಪನಿಷತ್ತು ಹೇಳುತ್ತದೆ. ಇಹಲೋಕದಲ್ಲಿ ಏಳಿಗೆಗೆ ಮತ್ತು ಸ್ವರ್ಗಗಳಿಗೆ ಸಾಧನವನ್ನೂ, ಸಂಸಾರದಿಂದ ಮುಕ್ತಿಗೆ ಸಾಧನವನ್ನೂ ವೇದಗಳು ತಿಳಿಸುತ್ತವೆ; ಈ ಸಾಧನಗಳನ್ನು ಪ್ರತ್ಯಕ್ಷದಿಂದಾಗಲಿ ಸ್ವತಂತ್ರ ತರ್ಕದಿಂದಾಗಲಿ ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ನಿರ್ದೋಷವಾದ ಪ್ರಮಾಣವಾಗಿರುವ ಶ್ರುತಿಯ ಮಾತುಗಳಿಂದ ಎರಡು ಸಂಗತಿಗಳು ಸ್ಪಷ್ಟವಾಗುತ್ತವೆ: ಇಹದಲ್ಲೂ ಪರದಲ್ಲೂ ಸುಖಕ್ಕೆ ಮತ್ತು ಮೋಕ್ಷಕ್ಕೆ ಸಾಧನವನ್ನು ವೇದಗಳ ಮೂಲಕ ಜಗತ್ತಿಗೆ ಉಪದೇಶಿಸುವವನು ಪರಮೇಶ್ವರನೇ ಎಂಬುದು; ಮಾತ್ರವಲ್ಲ, ಚತುರ್ಮುಖಬ್ರಹ್ಮನಿಗೂ ಅವನೇ ಗುರುವು ಎಂಬುದು. ವೇದಗಳನ್ನೇ

[1] ಯೋಗ-ಸೂತ್ರ 1.26

[2] ಬೃಹದಾರಣ್ಯಕ-ಉಪನಿಷತ್ 2.4.10

[3] ಶ್ವೇತಾಶ್ವತರ-ಉಪನಿಷತ್ 6.18

ಮೂಲವಾಗಿಟ್ಟುಕೊಂಡು ಧರ್ಮಶಾಸ್ತ್ರಗಳನ್ನೂ ಇತಿಹಾಸಗಳನ್ನೂ ಪುರಾಣಗಳನ್ನೂ ರಚಿಸುವಂತೆ ಅವನು ಋಷಿಗಳನ್ನು ಅನುಗ್ರಹಿಸಿದನು. ಈ ಶಾಸ್ತ್ರೋಪದೇಶಗಳಲ್ಲಿ ಸನಾತನಧರ್ಮವು ಅಡಕವಾಗಿದೆ; ಅದು ಕಾಲಾತೀತವೂ ಸಾರ್ವತ್ರಿಕವೂ ಆಗಿದ್ದು, ಯಾರಾದರೂ ಅದನ್ನು ಒಪ್ಪುವುದರ ಅಥವಾ ಅಲ್ಲಗಳೆಯುವುದರ ಮೇಲೆ ಅವಲಂಬಿಸಿರದ ಸ್ವತಃಸಿದ್ಧ ಪ್ರಾಮಾಣ್ಯವನ್ನು ಹೊಂದಿದೆ.

ಗುರುಗಳು (ಮುಂದುವರಿಸುತ್ತಾ): ಈಶ್ವರನು ಅಂತರ್ಯಾಮಿ; ಎಲ್ಲದರ ಒಳಗೂ ನೆಲೆಸಿ ಒಳಗಿನಿಂದಲೇ ಎಲ್ಲವನ್ನೂ ನಿಯಂತ್ರಿಸುವವನು. ಯಾವುದೇ ವ್ಯಕ್ತಿಯ ಮಾನಸಿಕ, ವಾಚಿಕ ಅಥವಾ ಕಾಯಿಕ ಕ್ರಿಯೆಯೂ, ಯಾವ ಕಾಲದಲ್ಲೂ, ಯಾವುದೇ ಸಂದರ್ಭದಲ್ಲೂ ಅಂತರ್ಯಾಮಿಯ ಪ್ರೇರಣೆಯಿಲ್ಲದೆ ನಡೆಯುವುದಿಲ್ಲ. ಅವನು ಪ್ರೇರೇಪಿಸುವುದು ಆಯಾ ಜೀವಿಯ ಕರ್ಮ ಇತ್ಯಾದಿಗಳಿಗೆ ಅನುಗುಣವಾಗಿಯೇ; ಪಕ್ಷಪಾತದಿಂದಾಗಲಿ ತೋರಿದಂತೆಲ್ಲ ಆಗಲಿ ಅಲ್ಲ. ಇದು ಶ್ರದ್ಧಾಳುವಾದ ಭಕ್ತನ ಹಾಗೂ ಕಟ್ಟಾ ನಾಸ್ತಿಕನ ವಿಷಯದಲ್ಲೂ ಸಮಾನವಾಗಿ ಸತ್ಯ. ಆದ್ದರಿಂದ ನಾಸ್ತಿಕನು ಈಶ್ವರನಿಂದ ಯಾವ ರೀತಿಯಲ್ಲೂ ಮಾರ್ಗದರ್ಶಿತನಾಗಿಲ್ಲ ಎಂದು ಹೇಳಲಾಗದು. ಇದಲ್ಲದೆ, ಅವನು '*ಈಶಾನಸ್ಸರ್ವವಿದ್ಯಾನಾಮ್* — ಎಲ್ಲ ವಿದ್ಯೆಗಳ ಒಡೆಯನು'[1] ಎಂದು ಶ್ರುತಿ ಹೇಳುತ್ತದೆ; ಸಾಯಣಾಚಾರ್ಯರ ಪ್ರಮಾಣಭೂತ ಭಾಷ್ಯದಲ್ಲಿ ಹೇಳಿರುವಂತೆ, ಈ ವಾಕ್ಯದಲ್ಲಿ ಹೇಳಿರುವ ವಿದ್ಯೆಗಳಲ್ಲಿ ಲೌಕಿಕ ವಿದ್ಯೆಗಳೆಲ್ಲವೂ ಸೇರಿವೆ. ಆದ್ದರಿಂದ ನಾಸ್ತಿಕನು ಕಲಿಯುವ ಯಾವುದೇ ಕಲೆಯಾಗಲಿ ವಿಜ್ಞಾನವಾಗಲಿ ವಾಸ್ತವವಾಗಿ ಈಶ್ವರನಲ್ಲಿಯೇ ಬೇರೂರಿದೆ. ಮಾತ್ರವಲ್ಲ, ನಾಸ್ತಿಕನು ಯಾವ ಶಿಕ್ಷಕನಿಂದ ಕಲೆಯನ್ನೋ ವಿಜ್ಞಾನವನ್ನೋ ಕಲಿತರೂ, ಆ ಶಿಕ್ಷಕನೂ ಈಶ್ವರನ ವಿಶ್ವರೂಪದೊಳಗೇ ಸೇರಿದ್ದಾನೆ. ಆ ಶಿಕ್ಷಕನ ರೂಪದಲ್ಲಿ ಈಶ್ವರನೇ ಅವನಿಗೆ ಕಲಿಸುತ್ತಾನೆ ಎಂದೂ ಭಾವಿಸಬಹುದು. ಏಕೆಂದರೆ, '*ಸಹಸ್ರಶೀರ್ಷಾ ಪುರುಷಃ । ಸಹಸ್ರಾಕ್ಷಸ್ಸಹಸ್ರಪಾತ್* — ಪುರುಷನಿಗೆ ಸಾವಿರ ತಲೆಗಳು (ಎಲ್ಲರ ತಲೆಗಳು), ಸಾವಿರ ಕಣ್ಣುಗಳು (ಎಲ್ಲರ ಕಣ್ಣುಗಳು) ಮತ್ತು ಸಾವಿರ ಪಾದಗಳು (ಎಲ್ಲರ ಪಾದಗಳು)'[2] ಎಂದು ಶ್ರುತಿ ಹೇಳಿ, ಎಲ್ಲ ಶರೀರಗಳೂ ಅವನವೇ ಎಂಬುದನ್ನು ತಿಳಿಸುತ್ತದೆ.

ಗುರುಗಳು (ಮುಂದುವರಿಸುತ್ತಾ): ಈಶ್ವರನು ಸ್ವರೂಪತಃ ನಿರಾಕಾರನು. ಆದರೂ, ಜಗತ್ತನ್ನು ವಿಶೇಷವಾಗಿ ಅನುಗ್ರಹಿಸುವ ಸಲುವಾಗಿ, ತನಗೆ ಸಂಪೂರ್ಣವಾಗಿ ಅಧೀನವಾಗಿರುವ ತನ್ನ ಮಾಯಾಶಕ್ತಿಯಿಂದ ಅವನು ರೂಪಗಳನ್ನು ಧರಿಸುತ್ತಾನೆ. ಅವನು ಅಂತಹ ಯಾವುದೇ ರೂಪವನ್ನು ಧರಿಸಬಹುದು. ಪಂಚಮುಖಿ ಶಿವನ ರೂಪವಾಗಿರಬಹುದು,

[1] ತೈತ್ತಿರೀಯ-ಆರಣ್ಯಕ 10.47. ಈ ಮಂತ್ರವು ಮಹಾನಾರಾಯಣ-ಉಪನಿಷತ್ತಿನ ಒಂದು ಭಾಗ.

[2] ತೈತ್ತಿರೀಯ-ಆರಣ್ಯಕ 3.12.33

ಚತುರ್ಭುಜ ವಿಷ್ಣುವಿನ ರೂಪವಾಗಿರಬಹುದು, ಅಥವಾ ರಾಮ ಮತ್ತು ಕೃಷ್ಣರಂತಹ ವಿಷ್ಣುವಿನ ಅವತಾರರೂಪವಾಗಿರಬಹುದು. ರಾಮಾವತಾರದಲ್ಲಿ ರಾಮನು ಸೀತಾಪಹರಣದ ಸಂದರ್ಭದಲ್ಲಿ ದುಃಖಪೀಡಿತನಾಗಿದ್ದಂತಹ ದಿವ್ಯಲೀಲೆ ಬರುತ್ತದೆ. ಹಾಗೆಯೇ ಮಹಾಭಾರತದಲ್ಲಿ ಅರ್ಜುನನು, 'ಜಯದ್ರಥನನ್ನು ಸಂಹರಿಸುತ್ತೇನೆ; ಇಲ್ಲದಿದ್ದರೆ ಪ್ರಾಣತ್ಯಾಗ ಮಾಡುತ್ತೇನೆ', ಎಂದು ಪ್ರತಿಜ್ಞೆ ಮಾಡುತ್ತಾನೆ. ಆ ಪ್ರತಿಜ್ಞೆಯನ್ನು ಪೂರೈಸಬೇಕಾದ ದಿನದ ಹಿಂದಿನ ರಾತ್ರಿ, ಕೃಷ್ಣನು ಆತಂಕದಿಂದ ನಿದ್ರೆಗೆಟ್ಟಂತೆ ತೋರುವ ದಿವ್ಯಲೀಲೆಯೂ ಬರುತ್ತದೆ. ಆದಾಗ್ಯೂ, ಈಶ್ವರನಾಗಿ ಅವನ ಪೂರ್ಣತೆಯು ವಸ್ತುತಃ ಯಾವುದೇ ರೀತಿಯಲ್ಲೂ ಕುಂದುವುದಿಲ್ಲ. ಆದ್ದರಿಂದಲೇ ಕೃಷ್ಣನು ಹೀಗೆ ಸಾರಲು ಸಾಧ್ಯವಾಯಿತು: 'ಅವಜಾನನ್ತಿ ಮಾಂ ಮೂಢಾ ಮಾನುಷೀಂ ತನುಮಾ-ಶ್ರಿತಮ್ । ಪರಂ ಭಾವಮಜಾನನ್ತೋ ಮಮ ಭೂತಮಹೇಶ್ವರಮ್ — ಎಲ್ಲ ಜೀವಿಗಳಿಗೂ ಮಹೇಶ್ವರನೆಂಬ ನನ್ನ ಪರಮ ಸ್ವರೂಪವನ್ನು ಅರಿಯದ ಅವಿವೇಕಿಗಳು, ಮಾನುಷರೂಪವನ್ನು ಧರಿಸಿದ ನನ್ನನ್ನು ಉಪೇಕ್ಷಿಸುತ್ತಾರೆ.'[1] ಮಾತ್ರವಲ್ಲ, ತನ್ನ ವಿಶ್ವರೂಪದರ್ಶನವನ್ನು ಅರ್ಜುನನಿಗೆ ಅನುಗ್ರಹಿಸಲೂ ಅವನಿಗೆ ಸಾಧ್ಯವಾಯಿತು. ಆದ್ದರಿಂದ ಜಗದ್ಗುರು ಎಂಬ ಪದವು ಕೃಷ್ಣನಿಗೆ ಮುಖ್ಯಾರ್ಥದಲ್ಲಿಯೇ ಅನ್ವಯಿಸುತ್ತದೆ. ಈಶ್ವರನ ಮತ್ತು ಅವನ ದಿವ್ಯ ಅವತಾರಗಳ ವಿಷಯದಲ್ಲಿ ಮಾತ್ರವೇ ಆ ಪದವು ಯಾವ ಷರತ್ತೂ ಇಲ್ಲದೆ ಸರಿಹೊಂದುತ್ತದೆ.

ಚಂದ್ರಮೌಳಿ: 'ಜಗದ್ಗುರು' ಎಂಬುದರ ಬಗ್ಗೆ ನನ್ನ ಪ್ರಶ್ನೆಯನ್ನು ತಮ್ಮ ಮುಂದೆ ಇಟ್ಟದ್ದಕ್ಕೆ ನನಗೆ ಸಂತೋಷವಾಗಿದೆ; ಅದು ಅಗೌರವವೆಂದು ಭಾವಿಸಲ್ಪಡಬಹುದೇನೋ ಎಂಬ ಅಂಜಿಕೆ ನನಗಿತ್ತು. ತಮ್ಮನ್ನು ನಾನು ನೋಡುತ್ತಿರುವುದು ಇದೇ ಮೊದಲ ಬಾರಿ; ಆದರೂ ತಮ್ಮಲ್ಲಿ ದೈವತ್ವವನ್ನು ನಾನು ಎಷ್ಟು ಪ್ರಬಲವಾಗಿ ಅನುಭವಿಸುತ್ತಿದ್ದೇನೆಂದರೆ, ತಾವು ಮಾನುಷರೂಪದಲ್ಲಿರುವ ಈಶ್ವರರೇ ಮತ್ತು ಪೂರ್ಣ ಜಗದ್ಗುರುಗಳೇ ಎಂಬುದು ನನಗೆ ನಿಶ್ಚಯವಾಗಿದೆ.

ಗುರುಗಳು (ಮನಃಪೂರ್ವಕವಾಗಿ ನಗುತ್ತಾ): ನಾನೇ? ನಾನೊಬ್ಬ ಅತಿಸಾಮಾನ್ಯ ಮುದುಕ, ಅಷ್ಟೆ.

(ಗುರುಗಳ ಈ ನಿಷ್ಕಪಟ ವಿನಮ್ರತೆಯೂ ಅಹಂಭಾವದ ಸಂಪೂರ್ಣ ಅಭಾವವೂ ಅವರ ಬಗೆಗಿನ ತನ್ನ ಪೂಜ್ಯಭಾವವನ್ನು ಇನ್ನಷ್ಟು ಹೆಚ್ಚಿಸಿದವೆಂದು ಚಂದ್ರಮೌಳಿ ನನಗೆ ತಿಳಿಸಿದರು. ಮರುದಿನ ಮುಂಜಾನೆ ಅವರು ನವದೆಹಲಿಯಿಂದ ಊರಿಗೆ ಹೊರಡಬೇಕಿದ್ದುದರಿಂದ, ಸಂಭಾಷಣೆ ಮುಗಿದ ಕೂಡಲೇ ಗುರುಗಳು ಅವರಿಗೆ ಮಂತ್ರಾಕ್ಷತೆಯನ್ನೂ ಒಂದು ಹಣ್ಣನ್ನೂ ಕೊಟ್ಟು ಆಶೀರ್ವದಿಸಿ, ಹೊರಡಲು ಅಪ್ಪಣೆಯನ್ನಿತ್ತರು.)

[1] ಭಗವದ್ಗೀತಾ 9.11

ಈ ಶ್ಲೋಕದ ಎರಡನೆಯ ಪಾದವು ಗುರುಗಳ ಬಾಹ್ಯ ಸಾನ್ನಿಧ್ಯದ ಕಡೆಗೆ ಗಮನಸೆಳೆಯುತ್ತದೆ. ಆಧ್ಯಾತ್ಮಿಕ ತೇಜಸ್ಸಿನಿಂದ ಬೆಳಗುತ್ತಿದ್ದ, ಕರುಣೆ ತುಳುಕುವ ಕಣ್ಣುಗಳಿಂದ ಶೋಭಿಸುತ್ತಿದ್ದ, ತಮ್ಮನ್ನು ವೀಕ್ಷಿಸಿದವರೆಲ್ಲರನ್ನೂ ಸೆಳೆಯುತ್ತಿದ್ದ ಅವರ ಪ್ರಶಾಂತವೂ ಆನಂದಪೂರ್ಣವೂ ಆದ ಮುಖವನ್ನು ಅದು ಬಣ್ಣಿಸಿ, ಮನೋಹರವಾದ ಕಮಲದಂತಹ ಮುಖವುಳ್ಳವರು (ಮನೋಜ್ಞ-ಮುಖಪಙ್ಕಜಮ್) ಎಂದು ಅವರನ್ನು ಸ್ತುತಿಸುತ್ತದೆ.

ಮುಂದಿನ ಭಾಗವು ಡಾ. ಜಿ. ಲಕ್ಷ್ಮೀಪತಿ ಅವರ ಭಾಷಣವೊಂದರಿಂದ ಆಯ್ದದ್ದು.

'ಗುರುಗಳು ಸದಾ ಸಮಚಿತ್ತತೆಯಲ್ಲೂ ಪರಿಪೂರ್ಣ ಶಾಂತಿಯಲ್ಲೂ ನೆಲೆಗೊಂಡಿದ್ದರು. ಒಮ್ಮೆ ಕೊಯಮತ್ತೂರಿನಲ್ಲಿ ಗುರುಗಳು ಶಾರದಾ ದೇವಸ್ಥಾನಕ್ಕೆ ಭೇಟಿಯಿತ್ತಾಗ ನಾನು ಅವರ ದರ್ಶನಕ್ಕೆ ಹೋಗಿದ್ದೆ. ಅಲ್ಲಿ ಒಂದು ಸಮಾರಂಭ ನಡೆಯುತ್ತಿತ್ತು. ಎಲ್ಲ ಬಗೆಯ ಜನರಿಂದ ಆ ಸ್ಥಳ ತುಂಬಿಹೋಗಿತ್ತು; ಗದ್ದಲ ಜೋರಾಗಿತ್ತು; ನಾದಸ್ವರ ವಾದನ ಗಟ್ಟಿಯಾಗಿ ಕೇಳಿಬರುತ್ತಿತ್ತು. ಈ ಗದ್ದಲದ ಜೊತೆಗೆ ಹೋಮಕುಂಡದ ಹೊಗೆಯೂ ವಾತಾವರಣವನ್ನು ಆವರಿಸಿತ್ತು. ಆ ಗದ್ದಲ, ನೂಕುನುಗ್ಗಲು, ಜನಜಂಗುಳಿ, ಹೊಗೆ ಮತ್ತು ಬೆವರಿನ ನಡುವೆ ಕುಳಿತಿರುವುದು ನನಗೆ ಬಹಳ ಕಷ್ಟವಾಯಿತು. ಆದರೆ ಗುರುಗಳಾದರೋ ವೇದಿಕೆಯ ಮೇಲೆ ಸಂಪೂರ್ಣವಾಗಿ ಶಾಂತರಾಗಿ, ಮುಖದಲ್ಲಿ ದಿವ್ಯವಾದ ಮಂದಹಾಸವನ್ನು ಹೊತ್ತು, ಅರ್ಧ ಮುಚ್ಚಿದ ಕಣ್ಣುಗಳಿಂದ ಕುಳಿತಿದ್ದರು. ನಾನು ಇದುವರೆಗೆ ಕಂಡ ದೃಶ್ಯಗಳಲ್ಲಿ ಇದೇ ಶ್ರೇಷ್ಠವಾದದ್ದೆಂದು ನನಗೆ ಅನಿಸಿತು; ಏಕೆಂದರೆ ಅವರ ಮುಖವು ನನ್ನ ದೃಷ್ಟಿಯನ್ನು ಸಂಪೂರ್ಣವಾಗಿ ಸೆರೆಹಿಡಿದಿತ್ತು.'

ಎಚ್. ಎಸ್. ರಾಮತೀರ್ಥ ಅವರು ಮೈಸೂರಿನಲ್ಲಿ ಆಕಸ್ಮಿಕವಾಗಿ ತಮಗಾದ ಗುರುಗಳ ದರ್ಶನವನ್ನು ಕುರಿತು 'ಜಗದ್ಗುರು' ಎಂಬ ಕನ್ನಡ ಪುಸ್ತಕದಲ್ಲಿ ಬರೆದಿರುವ ವೃತ್ತಾಂತದ ಸರಳ ನಿರೂಪಣೆ ಮುಂದಿನದು.

'ನಾನು ವಿದೇಶದಲ್ಲಿ ವಿದ್ಯಾಭ್ಯಾಸ ಮಾಡಿದವನು; ಸಂದೇಹಕ್ಕೆ ಆಸ್ಪದವಿಲ್ಲದಂತೆ ನಿಶ್ಚಯವಾಗದ ಯಾವುದನ್ನೂ ಸತ್ಯವೆಂದು ಒಪ್ಪಲು ಒಲ್ಲದವನು. ಆದರೂ ನನಗೆ ಒಮ್ಮೆ ಒಂದು ಪ್ರಬಲವಾದ ಆದರೆ ವಿವರಿಸಲಾಗದ ಅನುಭವವಾಯಿತು. ಒಂದು ಸಂಜೆ ನಾನು ಓದಿಕೊಳ್ಳಲೆಂದು ನನ್ನ ಚಿಕ್ಕಪ್ಪನ ಮನೆಗೆ ಹೋದೆ. ಕೆಲವೇ ನಿಮಿಷಗಳು ಕಳೆದಿರಬಹುದು. ಹೊರಗೆ ಹೋಗಬೇಕೆಂಬ ತುಡಿತ ಮೂಡಿತು. ಸೈಕಲ್ಲನ್ನು ಹತ್ತಿ ಹೊರಟೆ. ಟ್ಯಾಂಕ್ ಬಂಡ್ ರಸ್ತೆಯನ್ನು ದಾಟಿದ ನಂತರ, ನಮ್ಮ ವಿದ್ಯಾಸಂಸ್ಥೆಯ ಸ್ಥಾಪಕ-ಸದಸ್ಯರಲ್ಲಿ ಒಬ್ಬರು ಜನ-ಸಮೂಹದ ನಡುವೆ ನಿಂತಿರುವುದನ್ನು ಕಂಡೆ. ಏನು ನಡೆಯುತ್ತಿದೆ ಎಂಬ ಕುತೂಹಲದಿಂದ ನಾನು ನಿಂತೆ. ಸ್ವಲ್ಪ ಹೊತ್ತಿನಲ್ಲಿ ಒಂದು ಕಾರು ಬಂದು ಆ ಗುಂಪಿನ ಬಳಿ ನಿಂತಿತು. ವೇದಮಂತ್ರಗಳ ಘೋಷವೂ ಜಯಘೋಷಗಳೂ ಮೊಳಗಿದವು. ಕರಗಿದ ಚಿನ್ನದಂತೆ ಹೊಳೆಯುತ್ತಾ, ಕಾಷಾಯವಸ್ತ್ರವನ್ನುಟ್ಟು, ವಿಭೂತಿಯಿಂದ ಬೆಳಗುವ ಹಣೆಯನ್ನೂ ರುದ್ರಾಕ್ಷಿ

ಮಾಲೆಯಿಂದ ಶೋಭಿಸುವ ಕೊರಳನ್ನೂ ಹೊಂದಿದ ಮಹಾತ್ಮರು ಹೊರಬಂದು ನೆರೆದವರ ಕಡೆಗೆ ಸಾಗಿದರು. ಆಹಾ, ಎಂತಹ ಆಧ್ಯಾತ್ಮಿಕ ತೇಜಸ್ಸು! ಆಗ ನನಗಾದ ಅನುಭವವನ್ನು ಮಾತಿನಲ್ಲಿ ಹಿಡಿದಿಡಲು ನನಗೆ ಸಾಧ್ಯವಿಲ್ಲ. ಅವರು ಯಾರೆಂದೂ ತಿಳಿಯದೆ, ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳಿಗೆ ನಾನು ತಾನಾಗಿಯೇ ಅನೇಕ ನಮಸ್ಕಾರಗಳನ್ನು ಸಲ್ಲಿಸಿದೆ.'

ಈ ಎಂಟು ಶ್ಲೋಕಗಳ ಸ್ತೋತ್ರವು ಗುರುಗಳ ಯಾವ ಪೂಜ್ಯನಾಮದ ಆಧಾರದ ಮೇಲಿದೆಯೋ, ಆ ನಾಮವನ್ನು ಶ್ಲೋಕದ ಕೊನೆಯ ಪಾದವು 'ವಿದ್ಯಾತೀರ್ಥಮ್' ಎಂಬ ಪದದಿಂದ ಹೇಳುತ್ತದೆ; ಹೀಗೆ ಮೊದಲ ಮೂರು ಪಾದಗಳಲ್ಲಿ ಅವರ ಬಗ್ಗೆ ಹೇಳಿದ್ದೆಲ್ಲವನ್ನೂ ಒಟ್ಟುಗೂಡಿಸುತ್ತದೆ; ಮತ್ತು ಅವರಿಗೆ ಸಂಪೂರ್ಣವಾಗಿ ಶರಣಾಗುವ ('ಶ್ರಯೇ' ಎಂಬ) ನಿವೇದನೆಯಿಂದ ಕೊನೆಗೊಳ್ಳುತ್ತದೆ.

ಶ್ಲೋಕ 2

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಶಾಸ್ತ್ರದೃಷ್ಟಿಯಲ್ಲಿ ಪರಬ್ರಹ್ಮಸ್ವರೂಪರೂ, ಅವರನ್ನು ಬಲ್ಲವರ ದೃಷ್ಟಿಯಲ್ಲಿ ಪ್ರಶಾಂತ ಋಷಿಗಳು

ಭಿದ್ಯತೇ ಹೃದಯಗ್ರನ್ಥಿರ್ದೃಷ್ಟೇ ಯಸ್ಮಿನ್ನಿತಿ ಶ್ರುತಿಃ।
ಜಗೌ ಪರಾವರಂ ಶಾನ್ತಂ ತಂ ವಿದ್ಯಾತೀರ್ಥಮಾಶ್ರಯೇ ॥ 2 ॥

['ಯಾರನ್ನು ಸಾಕ್ಷಾತ್ಕರಿಸಿಕೊಂಡ ಬಳಿಕ (ಬಯಕೆಗಳ ರೂಪದಲ್ಲಿ ತಲೆಯೆತ್ತುವ, ಅಜ್ಞಾನದ ಕಾರಣ ಆತ್ಮನನ್ನು ದೇಹ-ಮನಸ್ಸಿನ ಸಂಘಾತದೊಂದಿಗೆ ತಾದಾತ್ಮ್ಯಗೊಳಿಸುವ) ಹೃದಯದ ಕಗ್ಗಂಟು ಕಡಿದುಹೋಗುತ್ತದೆ' ಎಂದು (ಮಂತ್ರವೊಂದರಲ್ಲಿ) ಮತ್ತು (ಅದೇ ಮಂತ್ರದಲ್ಲಿ) ಯಾರ ಬಗ್ಗೆ (ಕಾರಣದ ರೂಪದಲ್ಲಿ) ಉತ್ಕೃಷ್ಟ ಪುರುಷನೆಂದು ಹಾಗೂ (ಕಾರ್ಯದ ರೂಪದಲ್ಲಿ) ನಿಕೃಷ್ಟ ಪುರುಷನೆಂದು ಎರಡು ವಿಧದಲ್ಲೂ ಶ್ರುತಿಯು ಘೋಷಿಸಿದೆಯೋ, ಆ ಶಾಂತಸ್ವರೂಪರಾದ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ಆಶ್ರಯಿಸುತ್ತೇನೆ.]

ಭಗವತ್ಪಾದರು ತಮ್ಮ ಭಾಷ್ಯಗಳಲ್ಲಿ ನಿಸ್ಸಂದಿಗ್ಧವಾಗಿ ನಿರ್ಣಯಿಸಿರುವಂತೆ ಉಪನಿಷತ್ತುಗಳ ಪರಮತಾತ್ಪರ್ಯವು ಪರಬ್ರಹ್ಮದ ಸಾಕ್ಷಾತ್ಕಾರವೇ ಆಗಿದೆ. ಈ ಸಾಕ್ಷಾತ್ಕಾರವೇ ಸಂಸಾರದಿಂದ ಮುಕ್ತಿಗೆ ಏಕೈಕ, ನೇರ ಮತ್ತು ಖಚಿತ ಸಾಧನವಾಗಿದೆ. ಮುಂಡಕ-ಉಪನಿಷತ್ತಿನಲ್ಲಿ ಬಹಳ ಗಂಭೀರವಾದ ಮತ್ತು ಆಗಾಗ್ಗೆ ಉಲ್ಲೇಖಿಸಲ್ಪಡುವ ಒಂದು ಮಂತ್ರವಿದೆ. ಪರವಸ್ತುವಿನ ಸಾಕ್ಷಾತ್ಕಾರದಿಂದ ಜೀವಿಯು ಜೀವಂತವಾಗಿರುವಾಗಲೇ ಬಂಧನದಿಂದ ಮುಕ್ತನಾಗುತ್ತಾನೆ

ಎಂಬುದನ್ನು ಸ್ಪಷ್ಟವಾಗಿ ಪ್ರಕಟಿಸುತ್ತದೆ. ಆ ಮಂತ್ರ ಹೀಗಿದೆ: 'ಭಿದ್ಯತೇ ಹೃದಯಗ್ರನ್ಥಿಶ್ಛಿದ್ಯನ್ತೇ ಸರ್ವ-ಸಂಶಯಾಃ । ಕ್ಷೀಯನ್ತೇ ಚಾಸ್ಯ ಕರ್ಮಾಣಿ ತಸ್ಮಿನ್ದೃಷ್ಟೇ ಪರಾವರೇ — ಉಭಯಥಾ (ಕಾರಣದ ರೂಪದಲ್ಲಿ) ಉತ್ಕೃಷ್ಟ ಹಾಗೂ (ಕಾರ್ಯದ ರೂಪದಲ್ಲಿ) ನಿಕೃಷ್ಟ ಪುರುಷನನ್ನು ಸಾಕ್ಷಾತ್ಕರಿಸಿಕೊಂಡಾಗ, ಅವನ ಹೃದಯದ ಕಗ್ಗಂಟು ಕಡಿದುಹೋಗುತ್ತದೆ, ಸಂದೇಹಗಳು ಎಲ್ಲವೂ ಛಿನ್ನವಾಗುತ್ತವೆ ಮತ್ತು ಕರ್ಮಗಳೆಲ್ಲವೂ ಕ್ಷೀಣಿಸಿಬಿಡುತ್ತವೆ.'[1]

ಈ ಅಕ್ಷರಮಾಲಾ-ಸ್ತೋತ್ರದ ಎರಡನೆಯ ಶ್ಲೋಕವು ಮೇಲ್ಕಂಡ ಮುಂಡಕ-ಉಪನಿಷತ್ತಿನ ಮಂತ್ರದ ಮೊದಲನೆಯ ಪಾದವಾದ 'ಭಿದ್ಯತೇ ಹೃದಯಗ್ರನ್ಥಿಃ (ಹೃದಯದ ಕಗ್ಗಂಟು ಕಡಿದುಹೋಗುತ್ತದೆ)' ಎಂಬುದನ್ನು ಅಕ್ಷರಶಃ ಒಳಗೊಂಡಿದೆ. ಅದರ ಮೂಲಕ, ಅದು ನಿಸ್ಸಂದಿಗ್ಧವಾಗಿ ಆ ಮಂತ್ರವನ್ನು ಉಲ್ಲೇಖಿಸುತ್ತದೆ. ಮಂತ್ರವು ಪರವಸ್ತುವನ್ನು 'ಪರಾವರ' ಎಂಬ ಪದದಿಂದ ಸೂಚಿಸುತ್ತದೆ. ಈ ಶ್ಲೋಕವು ಯಾವ ಪರಾವರ ವಸ್ತುವಿನ ಸಾಕ್ಷಾತ್ಕಾರದಿಂದ ಜೀವಿಯು ಜೀವನ್ಮುಕ್ತನಾಗುತ್ತಾನೋ ಆ ಪರವಸ್ತುವು ಗುರುಗಳೇ ಎಂಬುದನ್ನು ವಿಶದಪಡಿಸುತ್ತದೆ. ಅದು ಗುರುಗಳನ್ನು ಉಲ್ಲೇಖಿಸುವಾಗಲೂ 'ಪರಾವರ' ಎಂಬ ಅದೇ ಪದವನ್ನು ಬಳಸುತ್ತದೆ. ಈ ಮಂತ್ರದ ಪ್ರಕಾರ, ಯಾರ ಸಾಕ್ಷಾತ್ಕಾರವು ಹೃದಯದ ಕಗ್ಗಂಟನ್ನು ಕಡಿದುಬಿಡುತ್ತದೆಯೋ, ಎಲ್ಲ ಸಂದೇಹಗಳನ್ನು ನಾಶಗೊಳಿಸುತ್ತದೆಯೋ, ಮತ್ತು ಪುನರ್ಜನ್ಮಕ್ಕೆ ಕಾರಣವಾಗುವ ಎಲ್ಲ ಕರ್ಮಗಳನ್ನು ಕ್ಷಯಗೊಳಿಸುತ್ತದೆಯೋ, ಅವರೇ ಗುರುಗಳು. ಇದರಲ್ಲಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲ. ಈ ರೀತಿ, ಇಲ್ಲಿ ಗುರುಗಳಿಗೂ ಪರಬ್ರಹ್ಮಕ್ಕೂ ಭೇದವಿಲ್ಲ ಎಂಬುದು ನಿರ್ವಿವಾದವಾಗಿ ಸ್ಥಾಪಿತವಾಗುತ್ತದೆ.

ಮುಂಡಕ-ಉಪನಿಷತ್ತಿನ ಈ ಖಂಡದ ಆರಂಭದಲ್ಲಿ ಮತ್ತು ಅಂತ್ಯದಲ್ಲಿ ಪರಮಪುರುಷನನ್ನು ಹೊರತುಪಡಿಸಿ ಬೇರಾವುದೂ ಇಲ್ಲವೇ ಇಲ್ಲ ಎಂಬುದನ್ನು ಒತ್ತಿಹೇಳಲಾಗಿದೆ. ಇದಕ್ಕೆ ಅನುಗುಣವಾಗಿ, ಭಗವತ್ಪಾದರು 'ಪರಾವರ' ಎಂಬ ಪದವನ್ನು ಹೀಗೆ ವಿವರಿಸುತ್ತಾರೆ: 'ಪರಾವರೇ ಪರಂ ಚ ಕಾರಣಾತ್ಮನಾ ಅವರಂ ಚ ಕಾರ್ಯಾತ್ಮನಾ ತಸ್ಮಿನ್ — ಕಾರಣದ ರೂಪದಲ್ಲಿ ಉತ್ಕೃಷ್ಟನೂ, ಕಾರ್ಯದ ರೂಪದಲ್ಲಿ ನಿಕೃಷ್ಟನೂ, ಉಭಯಥಾ ಇರುವವನು.'[2] ಶ್ರೀ ವಿದ್ಯಾರಣ್ಯರು ತಮ್ಮ ಅನುಭೂತಿ-ಪ್ರಕಾಶದಲ್ಲಿ ಇದಕ್ಕೆ ಪರ್ಯಾಯವಾದ ವ್ಯಾಖ್ಯಾನವನ್ನು ನೀಡಿದ್ದಾರೆ. ಅವರ ಪ್ರಕಾರ, 'ಪರಾವರ' ಎಂದರೆ 'ಯಾರೊಂದಿಗೆ ಹೋಲಿಸಿದಾಗ ಅತ್ಯುತ್ಕೃಷ್ಟವಾದ ಅವ್ಯಾಕೃತವೂ ನಿಕೃಷ್ಟವಾದುದೋ, ಆ ಪುರುಷನು'[3] — ಅಂದರೆ, 'ಸಂಪೂರ್ಣವಾಗಿ ಸರ್ವೋತ್ಕೃಷ್ಟನಾದವನು' ಎಂದಾಗುತ್ತದೆ.

[1] ಮುಂಡಕ-ಉಪನಿಷತ್ 2.2.8

[2] ಮಂತ್ರದಲ್ಲಿ ಈ ಪದವು ಸಪ್ತಮೀ ವಿಭಕ್ತಿಯಲ್ಲಿದ್ದು, ಭಗವತ್ಪಾದರ ಭಾಷ್ಯವೂ ಅದನ್ನು ಪ್ರತಿಬಿಂಬಿಸುತ್ತದೆ. ಅನುವಾದದಲ್ಲಿ ಈ ವ್ಯಾಕರಣದ ಅಂಶವನ್ನು ಬಿಡಲಾಗಿದೆ.

[3] ಅನುಭೂತಿಪ್ರಕಾಶ 6.66

ಈ ಮಂತ್ರದಲ್ಲಿ ಉಲ್ಲೇಖಿಸಲಾದ 'ಹೃದಯ-ಗ್ರನ್ಥಿ'ಯ ಸ್ವರೂಪದ ಕುರಿತು ಗುರುಗಳು ಆಳವಾದ ಸ್ಪಷ್ಟತೆಯನ್ನು ನೀಡಿದ್ದಾರೆ. ಅವರ ವಿವರಣೆಯ ಸರಳ ನಿರೂಪಣೆ ಕೆಳಗಿನಂತಿದೆ.

'ಇಲ್ಲಿ ಉಲ್ಲೇಖಿಸಲಾದ ಹೃದಯಗ್ರಂಥಿಯನ್ನು ಮುಂಡಕ-ಉಪನಿಷತ್ತಿನಲ್ಲಿಯೇ ಹಿಂದೆ, "ಅವಿದ್ಯಾಗ್ರನ್ಥಿ — ಅಜ್ಞಾನದ ಕಗ್ಗಂಟು",[1] ಎಂದು ಕರೆಯಲಾಗಿದೆ. ಇದಕ್ಕೆ ಅನುಗುಣವಾಗಿ, ಬೃಹದಾರಣ್ಯಕ-ಉಪನಿಷತ್ತು ಹೀಗೆ ಹೇಳುತ್ತದೆ: "ಕಾಮಾ ಯೇಽಸ್ಯ ಹೃದಿ ಸ್ಥಿತಾಃ — ಅವನ (ಅಜ್ಞಾನಿಯ) ಹೃದಯದಲ್ಲಿರುವ ಕಾಮನೆಗಳು."[2]

'ಪರಬ್ರಹ್ಮಕ್ಕಿಂತ ಭಿನ್ನನಲ್ಲದ ಆತ್ಮನು ಶುದ್ಧ ಚೈತನ್ಯಸ್ವರೂಪನು ಮತ್ತು ಸದಾ ಸಂಪೂರ್ಣವಾಗಿ ವಿಕಾರರಹಿತನು. ಇದಕ್ಕೆ ಅತ್ಯಂತ ವಿರುದ್ಧವಾಗಿ, ಬುದ್ಧಿ-ಅಂತಃಕರಣವು[3] ಜಡವೂ, ಸದಾ ಅತ್ಯಂತ ಪರಿವರ್ತನಶೀಲವೂ ಆಗಿದೆ. ಆದಾಗ್ಯೂ, ಅವಿದ್ಯೆಯಿಂದಾಗಿ ಪ್ರತಿಯೊಬ್ಬ ಜೀವಿಯೂ ಆತ್ಮ ಮತ್ತು ಬುದ್ಧಿಯ ನಡುವೆ ಅನಾದಿಯಾದರೂ ಮಿಥ್ಯಾಭೂತವಾದ, ಪರಸ್ಪರ ಅಧ್ಯಾಸಕ್ಕೆ (ಪರಸ್ಪರ ಒಂದರ ಲಕ್ಷಣವನ್ನು ಇನ್ನೊಂದರ ಜೊತೆ ಸೇರಿಸಿ ವ್ಯವಹರಿಸುವುದಕ್ಕೆ) ತುತ್ತಾಗುತ್ತಾನೆ. ಆತ್ಮನ ಮೇಲೆ ಬುದ್ಧಿಯನ್ನು ತಪ್ಪಾಗಿ ಅಧ್ಯಾರೋಪಿಸಿ, ಜೀವಿಯು ತಾನೇ ಕರ್ತಾ ಮತ್ತು ಭೋಕ್ತಾ ಎಂದು ಎಣಿಸುತ್ತಾನೆ. ಆಗ ಅವನಲ್ಲಿ, "ನಾನು ಇದನ್ನು ಮಾಡುತ್ತೇನೆ", "ನಾನು ದುಃಖಿಯಾಗಿದ್ದೇನೆ", ಮುಂತಾದ ಭಾವನೆಗಳು ಮೂಡುತ್ತವೆ. ಇದಕ್ಕೆ ಪ್ರತಿಯಾಗಿ, "ನಾನು" ಎಂಬ ಭಾವನೆಯನ್ನು ಹೊತ್ತ ಬುದ್ಧಿಯು ಚೈತನ್ಯವುಳ್ಳದ್ದಾಗಿರುವಂತೆ ತೋರುತ್ತದೆ.

'ಈ ಪರಸ್ಪರ ಅಧ್ಯಾಸದ ಬಲದಿಂದ ಆತ್ಮವಸ್ತುವು ದೇಹ-ಅಂತಃಕರಣದ ಸಮಷ್ಟಿಯ ಉಳಿದ ಭಾಗದೊಂದಿಗೆ ಬೆರೆತಿರುವಂತೆ ತಪ್ಪಾಗಿ ಭಾಸವಾಗುತ್ತದೆ. ಇದರಿಂದ ಜಡವಾದ ದೇಹ-ಇಂದ್ರಿಯಗಳ ಸಂಘಾತಕ್ಕೆ ಸಂಬಂಧಿಸಿದ ಕಿವುಡುತನ, ಎತ್ತರ ಹಾಗೂ ಕಪ್ಪು ಬಣ್ಣ ಇತ್ಯಾದಿ ಲಕ್ಷಣಗಳನ್ನು ಶುದ್ಧ ಚೈತನ್ಯ ಲಕ್ಷಣವುಳ್ಳ ಆತ್ಮನ ಮೇಲೆ ಆರೋಪಿಸಿ "ನಾನು ಕಿವುಡ", "ನಾನು ಎತ್ತರವಾಗಿದ್ದೇನೆ ಮತ್ತು ಕಪ್ಪಾಗಿದ್ದೇನೆ" ಮುಂತಾದ ಭಾವನೆಗಳು ಹುಟ್ಟಿಕೊಳ್ಳುತ್ತವೆ. ಈ ಅಧ್ಯಾಸವು ಸಂಸಾರಬಂಧನಕ್ಕೆ ಕಾರಣವಾಗುತ್ತದೆ. ಇದಕ್ಕೆ ಆದಿಕಾರಣ ಆತ್ಮನನ್ನು ಆವರಿಸಿರುವ ಮೂಲ ಅವಿದ್ಯೆ. ಪರಸ್ಪರ ಅಧ್ಯಾಸವಿಲ್ಲದ ಸುಷುಪ್ತಿಯಲ್ಲೂ ಈ ಅವಿದ್ಯೆ ಉಳಿಯುತ್ತದೆ; ಮಹಾಪ್ರಳಯದಲ್ಲೂ ಅದು ಅಳಿಯುವುದಿಲ್ಲ.

'ತಾನೇ ಪರಬ್ರಹ್ಮವೆಂಬ ಸಾಕ್ಷಾತ್ಕಾರವೇ ಈ ಮೂಲಾವಿದ್ಯೆಯನ್ನೂ ಅದನ್ನು ಆಧರಿಸಿರುವ ಪರಸ್ಪರ ಅಧ್ಯಾಸವನ್ನೂ ನಾಶಮಾಡುವ ಏಕೈಕ ಸಾಧನ. ಪರಸ್ಪರ ಅಧ್ಯಾಸವು ಬುದ್ಧಿ-

---

[1] ಮುಂಡಕ-ಉಪನಿಷತ್ 2.1.10

[2] ಬೃಹದಾರಣ್ಯಕ-ಉಪನಿಷತ್ 4.4.7

[3] ಮನಸ್ಸು ಮತ್ತು ಬುದ್ಧಿಗಳ ನಡುವೆ ವ್ಯತ್ಯಾಸವನ್ನು ಮಾಡದೆ ಮಾತನಾಡುವಾಗ, ಗುರುಗಳು 'ಅಂತಃಕರಣ' ಎಂಬ ಪದವನ್ನು ಬಳಸುತ್ತಿದ್ದರು; ಬುದ್ಧಿಯನ್ನು ನಿರ್ದಿಷ್ಟವಾಗಿ ಸೂಚಿಸುವಾಗ 'ಬುದ್ಧಿ' ಎಂಬ ಪದವನ್ನು ಬಳಸುತ್ತಿದ್ದರು.

ಮನಸ್ಸಿನಲ್ಲಿ ಸಂಸ್ಕಾರಗಳನ್ನು ಉಂಟುಮಾಡುತ್ತದೆ; ಪ್ರತಿಯಾಗಿ ಈ ಸಂಸ್ಕಾರಗಳು, ಪರಸ್ಪರ ಅಧ್ಯಾಸವನ್ನು ಇನ್ನಷ್ಟು ಬಲಪಡಿಸುತ್ತವೆ. ಆತ್ಮ ಮತ್ತು ಬುದ್ಧಿಗಳ ಒಂದಕ್ಕೊಂದರ ಅಧ್ಯಾಸವು ಆಸೆಗಳ ಸಮೂಹಕ್ಕೆ ಆಧಾರವಾಗಿದೆ.

'ಇಲ್ಲಿ ಹೇಳಲ್ಪಟ್ಟ "ಹೃದಯದ ಕಗ್ಗಂಟು" (ಹೃದಯಗ್ರನ್ಥಿ) ಮತ್ತು ಮುಂಡಕ-ಉಪನಿಷತ್ತಿನಲ್ಲಿ ಈ ಹಿಂದೆ ಉಲ್ಲೇಖಿಸಲ್ಪಟ್ಟ "ಅಜ್ಞಾನದ ಕಗ್ಗಂಟು" (ಅವಿದ್ಯಾಗ್ರನ್ಥಿ) — ಇವೆರಡೂ ಒಂದೇ ಆಗಿದ್ದು, ಬುದ್ಧಿಯಲ್ಲಿ ಸಂಚಿತವಾಗಿರುವ ಸಂಸ್ಕಾರಗಳಿಂದ ಬಲಗೊಂಡಿರುವ ಆತ್ಮ ಮತ್ತು ಬುದ್ಧಿಯ ಮಿಥ್ಯಾಭೂತ ಅಧ್ಯಾಸವನ್ನೇ ಸೂಚಿಸುತ್ತವೆ. ಆತ್ಮ-ಅನಾತ್ಮಗಳ ತಪ್ಪು ತಾದಾತ್ಮ್ಯವನ್ನು ಈ ಸಂಸ್ಕಾರಗಳು ಅತಿ ಬಲವಾಗಿ ಕಟ್ಟಿಹಾಕುವುದರಿಂದ ಇದನ್ನು "ಕಗ್ಗಂಟು" ಎಂದು ಕರೆಯಲಾಗಿದೆ. ಈ ಸಂಸ್ಕಾರಗಳ ಸಮೂಹದಿಂದ ಪರಸ್ಪರ ಅಧ್ಯಾಸವು ಮತ್ತಷ್ಟು ಬಲಗೊಳ್ಳುತ್ತದೆ. ಆ ಅಧ್ಯಾಸವೇ ಬೃಹದಾರಣ್ಯಕ-ಉಪನಿಷತ್ತಿನಲ್ಲಿ ವಿವರಿಸಲಾದ ಅವಿದ್ಯೆಯ ಕಾರ್ಯವಾದ ಮನಸ್ಸಿನ ಬಯಕೆಗಳಾಗಿ ವ್ಯಕ್ತವಾಗುತ್ತದೆ.

'ಪರಬ್ರಹ್ಮವನ್ನು ತನ್ನ ಸ್ವರೂಪವೆಂದು ಸಾಕ್ಷಾತ್ಕರಿಸಿಕೊಂಡಾಗ — ಮತ್ತು ಹಾಗೆ ಸಾಕ್ಷಾತ್ಕರಿಸಿಕೊಂಡಾಗ ಮಾತ್ರ — ಈ ಹೃದಯದ ಕಗ್ಗಂಟು ಕಡಿದುಹೋಗುತ್ತದೆ. ಮಾತ್ರವಲ್ಲ, ಆತ್ಮ-ಬುದ್ಧಿಯ ಇತರೇತರ ಅಧ್ಯಾಸದಲ್ಲಿ ರೂಢವಾದ "ಅಹಂ"-ಭಾವನೆಯ ಆಶ್ರಯವಾಗಿರುವ ಮನಸ್ಸಿನ ಆಸೆಗಳೂ ಕ್ಷೀಣವಾಗುತ್ತವೆ.'

ಕೃಷ್ಣಪರಮಾತ್ಮನು ಉದ್ಧವಗೀತೆಯಲ್ಲಿ ಹೀಗೆ ಹೇಳುತ್ತಾನೆ: 'ಬ್ರಹ್ಮ ಮಾಂ ಪರಮಂ ಪ್ರಾಪುಃ — ಅವರು ನನ್ನನ್ನು, ಪರಬ್ರಹ್ಮವನ್ನು, ಹೊಂದಿದರು'[1]; ಮತ್ತು 'ಭಿದ್ಯತೇ ಹೃದಯಗ್ರಂಥಿಶ್ಛಿದ್ಯಂತೇ ಸರ್ವಸಂಶಯಾಃ । ಕ್ಷೀಯಂತೇ ಚಾಸ್ಯ ಕರ್ಮಾಣಿ ಮಯಿ ದೃಷ್ಟೇಽಖಿಲಾತ್ಮನಿ —ಎಲ್ಲರ ಆತ್ಮನಾದ ನನ್ನನ್ನು ಸಾಕ್ಷಾತ್ಕರಿಸಿದಾಗ, ಹೃದಯದ ಕಗ್ಗಂಟು ಕಡಿದುಹೋಗುತ್ತದೆ, ಅವನ (ಜೀವಿಯ) ಎಲ್ಲ ಸಂದೇಹಗಳೂ ಅಳಿದುಹೋಗುತ್ತವೆ ಮತ್ತು ಅವನ ಕರ್ಮಗಳೆಲ್ಲವೂ ಕ್ಷೀಣಿಸಿಬಿಡುತ್ತವೆ.'[2] ಹೀಗೆ ಕೃಷ್ಣನು ತನ್ನನ್ನು ಪರಬ್ರಹ್ಮವೆಂದು ಗುರುತಿಸಿಕೊಳ್ಳುತ್ತಾನೆ. ಪರವಸ್ತುವಿನ ಸಾಕ್ಷಾತ್ಕಾರವು ಹೃದಯದ ಕಗ್ಗಂಟು ಕಡಿದುಹೋಗಲು ಕಾರಣವಾಗುತ್ತದೆ ಎಂಬ ಮುಂಡಕ-ಉಪನಿಷತ್ತಿಗೆ ಸಂಬಂಧಪಟ್ಟ ಮಂತ್ರವನ್ನು ಕೃಷ್ಣನು ಉಲ್ಲೇಖಿಸುತ್ತಾನೆ. ಆದರೆ, ಅದು ಸಂಭವಿಸುವುದು ತನ್ನನ್ನು ಸಾಕ್ಷಾತ್ಕರಿಸಿಕೊಂಡಾಗ ಎಂಬುದನ್ನೂ ಅವನು ಸ್ಪಷ್ಟಪಡಿಸುತ್ತಾನೆ. ಅನೇಕ ಸಂದರ್ಭಗಳಲ್ಲಿ ಅವನು ತನ್ನನ್ನು ಈಶ್ವರನೆಂದೂ ಗುರುತಿಸಿ-ಕೊಂಡಿದ್ದಾನೆ. ಚತುರ್ಮುಖಬ್ರಹ್ಮ ಮುಂತಾದವರಿಂದ ಅವನು ಪರಬ್ರಹ್ಮವಾಗಿಯೂ ಈಶ್ವರನಾಗಿಯೂ ಸ್ತುತಿಸಲ್ಪಟ್ಟಿದ್ದಾನೆ. ಕೃಷ್ಣನನ್ನು ಪರಬ್ರಹ್ಮದೊಂದಿಗೆ ಮತ್ತು ಈಶ್ವರನೊಂದಿಗೆ ಶಾಸ್ತ್ರವು ಸ್ಪಷ್ಟವಾಗಿ ಸಮೀಕರಿಸಿದೆ. ಅದೇ ರೀತಿ, ಈ ಸ್ತೋತ್ರದ ಎರಡನೆಯ ಶ್ಲೋಕದಲ್ಲಿ

[1] ಭಾಗವತ-ಪುರಾಣ 11.12.13

[2] ಭಾಗವತ-ಪುರಾಣ 11.20.30

ಗುರುಗಳನ್ನು ಪರಬ್ರಹ್ಮದೊಂದಿಗೂ, ನಾಲ್ಕು, ಐದು ಮತ್ತು ಆರನೆಯ ಶ್ಲೋಕಗಳಲ್ಲಿ ಅವರನ್ನು ಈಶ್ವರನೊಂದಿಗೂ ನಿರ್ವಿವಾದವಾಗಿ ಸಮೀಕರಿಸಲಾಗಿದೆ.

ಮೊದಲನೆಯ ಶ್ಲೋಕದಲ್ಲಿ ಗುರುಗಳ ಭೌತಿಕ ರೂಪವನ್ನು ವಿವರಿಸಲಾಗಿತ್ತು. ಇಲ್ಲಿ ಅವರ ಮನಸ್ಸಿನ ಸ್ಥಿತಿಯನ್ನು — ಶಾನ್ತಮ್ — ಪ್ರಶಾಂತವಾದದ್ದು — ಎಂಬ ಪದದಿಂದ ಬಣ್ಣಿಸಲಾಗಿದೆ. 'ಪರಾವರಮ್' ಎಂಬ ಪದದ ಬೆನ್ನಲ್ಲೇ 'ಶಾನ್ತಮ್' ಎಂಬ ಪದವನ್ನು ಇರಿಸಿರುವುದು ಮಹತ್ವವುಳ್ಳದ್ದಾಗಿದೆ. ಬ್ರಹ್ಮವು ಸ್ವಭಾವತಃ ಪ್ರಶಾಂತವಾಗಿರುವಂತೆಯೇ, ಅದರಲ್ಲಿ ಸಂಪೂರ್ಣವಾಗಿ ಸ್ಥಿರವಾಗಿರುವ ಅವರ ಮನಸ್ಸೂ ಪ್ರಶಾಂತವಾಗಿದೆ. ಗೌಡಪಾದಾಚಾರ್ಯರು ಹೇಳುವಂತೆ — *'ವಿಪ್ರಾಣಾಮ್...ಏಷಃ ಶಮಃ ಪ್ರಾಕೃತ ಉಚ್ಯತೇ* — ಬ್ರಹ್ಮದೊಂದಿಗೆ ಏಕತ್ವದಲ್ಲಿ ಸ್ಥಿರವಾಗಿ ನೆಲೆಸಿರುವವರ ಈ ಪ್ರಶಾಂತತೆಯನ್ನು ಸ್ವಾಭಾವಿಕ ಎಂದು ಕರೆಯಲಾಗುತ್ತದೆ.'[1] ಮಾಂಡೂಕ್ಯ-ಉಪನಿಷತ್ತು ಮತ್ತು ಗೌಡಪಾದಾಚಾರ್ಯರ ಕಾರಿಕೆಗಳ ತಮ್ಮ ಭಾಷ್ಯದಲ್ಲಿ ಭಗವತ್ಪಾದರು ಹೀಗೆ ವಿವರಿಸುತ್ತಾರೆ: *'ಸ್ವಭಾವತ ಏವೋಪಶಾನ್ತತ್ವಾದ್ಬ್ರಹ್ಮಣಃ* — ಬ್ರಹ್ಮವು ಸ್ವಭಾವತಃ ಪ್ರಶಾಂತವಾಗಿರುವುದರಿಂದ ಇದು ಹೀಗಿದೆ.' ತಮ್ಮ ಎಲ್ಲ ಚಟುವಟಿಕೆಗಳ ಮತ್ತು ಇತರರೊಂದಿಗೆ ಮಾತುಕತೆಗಳ ಸಂದರ್ಭದಲ್ಲೂ ಗುರುಗಳ ಪ್ರಶಾಂತತೆಯು ತಳಪಾಯವಾಗಿತ್ತು. ವಸಿಷ್ಠಮಹರ್ಷಿಗಳು ರಾಮನಿಗೆ ಹೀಗೆ ಉಪದೇಶಿಸಿದರು: *'ಬಹಿಃ ಕೃತ್ರಿಮಸಂರಮ್ಭೋ ಹೃದಿ ಸಂರಮ್ಭವರ್ಜಿತಃ...ಲೋಕೇ ವಿಹರ ರಾಘವ* — ಓ ರಾಘವ, ಹೊರಗೆ ಆಸಕ್ತಿ, ಕೋಪ ಇತ್ಯಾದಿಗಳನ್ನು ತೋರ್ಪಡಿಸಿಕೊಂಡು, ಆದರೆ ಹೃದಯದಲ್ಲಿ ಯಾವುದೇ ನಿಜವಾದ ತಳಮಳವಿಲ್ಲದೆ ಜಗತ್ತಿನಲ್ಲಿ ವಿಹರಿಸು.'[2] ಗುರುಗಳು ತಮ್ಮ ಮನಸ್ಸಿನಲ್ಲಿ ಯಾವುದೇ ನಿಜವಾದ ತಳಮಳವಿಲ್ಲದೆ ಲೋಕವ್ಯವಹಾರದಲ್ಲಿ ವಿಹರಿಸಿದರು.

ಶ್ಲೋಕದಲ್ಲಿನ 'ಶಾನ್ತಮ್' ಎಂಬ ಪದದಲ್ಲಿ ಅಭಿಪ್ರೇತವಾದ ಪ್ರಶಾಂತತೆಯ ಮಟ್ಟಕ್ಕಿಂತ ಕೆಳಮಟ್ಟದ ಪ್ರಶಾಂತತೆಯ ವಿಷಯದಲ್ಲೂ ಯೋಗ-ವಾಸಿಷ್ಠವು ಹೀಗೆ ಹೇಳುತ್ತದೆ: *'ಮನೋ ಹಿ ಸರ್ವಭೂತಾನಾಂ ಪ್ರಸಾದಮಧಿಗಚ್ಛತಿ । ನ ತಥೇನ್ದ್ರೋರ್ಯಥಾ ಶಾನ್ತೇ ಜನೇ ಜನಿತಕೌತುಕಮ್ ॥*[3]*...ಮಾತರೀವ ಪರಂ ಯಾನ್ತಿ ವಿಷಮಾಣಿ ಮೃದೂನಿ ಚ । ವಿಶ್ವಾಸಮಿಹ ಭೂತಾನಿ ಸರ್ವಾಣಿ ಶಾಮಶಾಲಿನಿ ॥*[4]*...ನ ಚ ವ್ಯಾಪ್ರಭುಜಬ್ಯಾ ವಾ ದ್ವಿಷನ್ತಿ ಶಮಶಾಲಿನಮ್*[5] — ಪ್ರಶಾಂತನಾದವನತ್ತ ಆಕರ್ಷಿತವಾದ ಪ್ರತಿಯೊಂದು ಜೀವಿಯ ಮನಸ್ಸೂ ಅವನನ್ನು

[1] ಗೌಡಪಾದ-ಕಾರಿಕೆ 4.86

[2] ಯೋಗ-ವಾಸಿಷ್ಠ 5.18.22

[3] ಯೋಗ-ವಾಸಿಷ್ಠ 2.13.59

[4] ಯೋಗ-ವಾಸಿಷ್ಠ 2.13.61

[5] ಯೋಗ-ವಾಸಿಷ್ಠ 2.13.66

ಕಂಡಾಗ ಸಂತೋಷಗೊಳ್ಳುತ್ತದೆ. ಚಂದ್ರನನ್ನು ಕಂಡಾಗಲೂ ಅಷ್ಟು ಸಂತೋಷಗೊಳ್ಳುವುದಿಲ್ಲ ...ಹಾನಿಕಾರಕವಾದ ಹಾಗೂ ಸೌಮ್ಯವಾದ ಎಲ್ಲ ಜೀವಿಗಳೂ ತಮ್ಮ ತಾಯಿಯನ್ನು ನಂಬುವಂತೆ ಪ್ರಶಾಂತನಾದವನನ್ನು ಸಂಪೂರ್ಣವಾಗಿ ನಂಬುತ್ತವೆ...ಹುಲಿಗಳಾಗಲಿ, ಸರ್ಪಗಳಾಗಲಿ ಸ್ಥಿರವಾಗಿ ಪ್ರಶಾಂತನಾಗಿರುವವನಿಗೆ ವೈರ ತೋರುವುದಿಲ್ಲ.' ಗುರುಗಳ ನಿಜವಾದ ಪ್ರಶಾಂತ ಸಾನ್ನಿಧ್ಯವು ಮನುಷ್ಯರ ಹಾಗೂ ಪ್ರಾಣಿಗಳ ಮೇಲೆ ಬೀರಿದ ಗಾಢ ಪರಿಣಾಮದ ಕೆಲವು ನಿದರ್ಶನಗಳನ್ನು ಇಲ್ಲಿ ನೀಡಲಾಗಿದೆ.

ಕೆ. ಸಿ. ಮಹಾದೇವನ್ ಅವರು ಕೆಳಕಂಡಂತೆ ವಿವರಿಸಿದ್ದಾರೆ:

'ಒಮ್ಮೆ ಗುರುಗಳು ತಂಗಿದ್ದ ಸ್ಥಳಕ್ಕೆ ಒಬ್ಬ ವ್ಯಕ್ತಿಯು ಬಂದು, "ಈ ಸ್ವಾಮಿಗಳೆಲ್ಲ ಏತಕ್ಕಾಗಿ? ಈ ಪ್ರಪಂಚದಲ್ಲಿ ಅವರ ಪಾತ್ರವೇನು? ನಾನು ಈ ಸ್ವಾಮಿಯನ್ನು ನೋಡಿ ಅವರನ್ನು ಪ್ರಶ್ನಿಸಬೇಕು", ಎಂದು ಕೂಗತೊಡಗಿದನು. ಅವನ ಬಳಿ ಒಂದು ಪಿಸ್ತೂಲು ಇತ್ತು. ಈ ವಿಷಯವನ್ನು ಗುರುಗಳಿಗೆ ತಿಳಿಸಿದಾಗ ಅವರು ಶಾಂತವಾಗಿ, "ಅವನನ್ನು ಒಳಗೆ ಬರಲು ಬಿಡಿ", ಎಂದರು. ಅವನು ಗುರುಗಳ ಕೋಣೆಗೆ ಪ್ರವೇಶಿಸಿದಾಗ, ಅವರು ಮುಗುಳ್ನಗೆಯಿಂದ ಅವನನ್ನು ಸ್ವಾಗತಿಸಿದರು. ಅವನು ಗುರುಗಳನ್ನು ಕಂಡ ಅದೇ ಕ್ಷಣದಲ್ಲಿ, ಅನಿರೀಕ್ಷಿತವಾಗಿ ತನ್ನ ಕೈಗಳನ್ನು ಜೋಡಿಸಿ, ಬಳಿಕ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ಅವನು ಎದ್ದು ನಿಂತ ಬಳಿಕ ಗುರುಗಳು ಅವನೊಂದಿಗೆ ಮಾತನಾಡಿ ಅವನನ್ನು ಆಶೀರ್ವದಿಸಿದರು. ಪರಿವರ್ತನೆಗೊಂಡ ವ್ಯಕ್ತಿಯಾಗಿ ಅವನು ಅಲ್ಲಿಂದ ಹೊರಟನು.'

1984ರಲ್ಲಿ ಮೂವತ್ತಕ್ಕಿಂತ ಸ್ವಲ್ಪ ಕಡಿಮೆ ವಯಸ್ಸಿನ ಒಬ್ಬ ವ್ಯಕ್ತಿಯು ಶೃಂಗೇರಿಗೆ ಬಂದನು. ಗುರುಗಳ ನಿವಾಸವಾದ ಸಚ್ಚಿದಾನಂದ ವಿಲಾಸವನ್ನು ಪ್ರವೇಶಿಸಿದಾಗ, ಮುಂಭಾಗದ ಹಜಾರದಲ್ಲಿ ನಿಂತಿದ್ದ ನನಗೆ ತಾನು ವಕೀಲನೆಂದು ತಿಳಿಸಿದನು. ಮೇಲಾಗಿ, 'ನಾನು ಪ್ರೇಕ್ಷಣಾರ್ಥವಾಗಿ ಇಲ್ಲಿಗೆ ಬಂದಿದ್ದೇನೆ. ನಾನೊಬ್ಬ ನಾಸ್ತಿಕ; ಆದರೆ ಈ ಮಠದ ಅಧಿಪತಿಗಳು ಹೇಗಿದ್ದಾರೆ ಎಂಬುದನ್ನು ನೋಡುವ ಕುತೂಹಲ ನನಗಿದೆ. ಅವರನ್ನು ನೋಡಬಹುದೇ? ನನಗೆ ಸಂನ್ಯಾಸಿಗಳ ಬಗ್ಗೆ ಯಾವುದೇ ಗೌರವವಿಲ್ಲ; ಆದ್ದರಿಂದ ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದಿಲ್ಲ', ಎಂದನು. ನಾನು ಅವನಿಗೆ, 'ಗುರುಗಳು ಇನ್ನೇನು ಕೆಲವು ನಿಮಿಷಗಳಲ್ಲಿ ದರ್ಶನ ನೀಡಲಿದ್ದಾರೆ. ಯಾರಾದರೂ ಒಳಗೆ ಹೋಗಬಹುದು. ಹೋಗಬೇಕೋ ಬೇಡವೋ ನೀವೇ ಸ್ವತಃ ನಿರ್ಧರಿಸಬಹುದು', ಎಂದೆ. ಬಳಿಕ ನಾನು ಒಳಗೆ ಹೋಗಿ, ಕೆಲವು ನಿಮಿಷಗಳ ನಂತರ ಸಚ್ಚಿದಾನಂದ ವಿಲಾಸದ ಪೂರ್ವಭಾಗದಲ್ಲಿದ್ದ, ಗುರುಗಳು ಕುಳಿತಿದ್ದ ಕೋಣೆಗೆ ಜನರು ಪ್ರವೇಶಿಸಲು ಬಾಗಿಲು ತೆರೆದೆ. ವಕೀಲನು ಭಕ್ತರ ಗುಂಪಿನೊಂದಿಗೆ ಕೋಣೆಯನ್ನು ಪ್ರವೇಶಿಸಿ, ಎಲ್ಲರಿಗಿಂತಲೂ ಹಿಂಭಾಗದಲ್ಲಿ ನಿಂತನು. ಕೆಲವು ನಿಮಿಷಗಳ ಬಳಿಕ ಗುರುಗಳ ದೃಷ್ಟಿ ಅವನ ಮೇಲೆ ಬಿತ್ತು. ಅವರು ಕೈಯಲ್ಲಿ ಹಣ್ಣೊಂದನ್ನು ಹಿಡಿದು ಅವನನ್ನು ತಮ್ಮ ಬಳಿಗೆ ಬರಲು ಸೂಚಿಸಿದರು. ವಕೀಲನು ಮುಂದೆ ಬಂದು, ಹಠಾತ್ತನೆ ಸಾಷ್ಟಾಂಗ ನಮಸ್ಕಾರ ಮಾಡಿ,

ಹಾಗೆಯೇ ಉಳಿದನು. ಸ್ವಲ್ಪ ಸಮಯ ಕಳೆದರೂ ಎದ್ದೇಳುವ ಲಕ್ಷಣವೇ ತೋರಲಿಲ್ಲ. ಕೊನೆಗೆ ಗುರುಗಳು ಅವನಿಗೆ ಎದ್ದೇಳುವಂತೆ ಹೇಳಿದರು. ನೀರು ತುಂಬಿದ ಕಣ್ಣುಗಳೊಂದಿಗೆ ಅವನು ಎದ್ದು, ಗದ್ಗದ ಕಂಠದಿಂದ ಗುರುಗಳು ತನ್ನನ್ನು ಆಶೀರ್ವದಿಸಬೇಕೆಂದು ಕೋರಿದನು. ಗುರುಗಳು ಅವನಿಗೆ ಆಶೀರ್ವಾದವನ್ನೂ ಪ್ರಸಾದವನ್ನೂ ನೀಡಿದರು.

ವೆಂಕಟಸುಬ್ಬ ರಾವ್ ಅವರು ತಮ್ಮ ಒಂದು ಅನುಭವವನ್ನು ಹೀಗೆ ವಿವರಿಸಿದರು:

'ನಾನು ಗುರುಗಳ ಕುಂದಾಪುರ ಮೊಕ್ಕಾಮಿಗೆ ಅವರೊಂದಿಗೆ ಹೋಗಿದ್ದೆ. ಅವರ ವಾಹನದ ಮುಂದೆ ಹೋಗುತ್ತಿದ್ದ ಜೀಪಿನಲ್ಲಿ ನಾನು ಪ್ರಯಾಣಿಸುತ್ತಿದ್ದೆ. ಒಂದು ಸಂದರ್ಭದಲ್ಲಿ ಗುರುಗಳು ತಮ್ಮ ಕಾರನ್ನು ನಿಲ್ಲಿಸುವಂತೆ ಹೇಳಿರುವುದನ್ನು ಗಮನಿಸಿದೆ. ಅವರು ನನ್ನನ್ನು ತಮ್ಮ ಕಾರಿನ ಮುಂಭಾಗದ ಆಸನದಲ್ಲಿ ಕುಳಿತುಕೊಳ್ಳುವಂತೆ ಹೇಳಿ, ತಮ್ಮ ಆಪ್ತ ಪರಿಚಾರಕರಾದ ಮಹಾಬಲ ಅವರನ್ನು ಜೀಪಿಗೆ ಕಳುಹಿಸಿದರು. ಯಾವುದೇ ಸಂಭಾಷಣೆ ನಡೆಯಲಿಲ್ಲ. ಗುರುಗಳು ಆತ್ಮಾನುಸಂಧಾನದಲ್ಲಿ ಸಂಪೂರ್ಣವಾಗಿ ತಲ್ಲೀನರಾದರು. ಅವರ ಮೌನವಾದ ಆತ್ಮಾನುಸಂಧಾನವು ನನ್ನ ಮೇಲೆ ಬೀರಿದ ಪರಿಣಾಮ ಅಗಾಧವಾಗಿತ್ತು.'

1958ರಲ್ಲಿ ಗುರುಗಳು ಕಾಲಡಿಯಲ್ಲಿ ಚಾತುರ್ಮಾಸ್ಯವನ್ನು ಕೈಗೊಂಡಿದ್ದಾಗ, ಒಂದು ಮಧ್ಯಾಹ್ನ ಭಿಕ್ಷೆಯ ಬಳಿಕ ತಮ್ಮ ಕೋಣೆಗೆ ಪ್ರವೇಶಿಸಿದರು. ಒಳಗೆ ಒಂದು ದೊಡ್ಡ ಕಾಗೆ ಹಾರಾಡುತ್ತಿರುವುದನ್ನು ಕಂಡರು. ಒಂದು ಕಿಟಕಿಯು ತುಸು ತೆರೆದಿತ್ತು. ಆದರೆ ಆ ಪಕ್ಷಿಯು ಮತ್ತೊಂದು ಕಿಟಕಿಯತ್ತ ಹಾರುತ್ತಲೇ ಇತ್ತು. ಗುರುಗಳು ಸ್ವಲ್ಪ ತೆರೆದಿದ್ದ ಕಿಟಕಿಯನ್ನು ಪೂರ್ತಿಯಾಗಿ ತೆರೆದರು. ಆದರೂ ಕಾಗೆಯು ಅದರ ಮೂಲಕ ಹೊರಗೆ ಹಾರಿಹೋಗಲಿಲ್ಲ. ಒಮ್ಮೆ ಅದು ಮುಚ್ಚಿದ್ದ ಕಿಟಕಿಗೆ ಮೆಲ್ಲಗೆ ಬಡಿದುಕೊಂಡಿದ್ದ ಕಾರಣ ಅದಕ್ಕೆ ಬಹುಶಃ ದಿಕ್ಕುತಪ್ಪಿದ್ದಿರಬೇಕು. ಕೊನೆಗೆ ಅದು ಅಲ್ಲಿ ಒಂದರಮೇಲೊಂದು ಜೋಡಿಸಿಟ್ಟಿದ್ದ ಪುಸ್ತಕಗಳ ರಾಶಿಯ ಮೇಲೆ ಕುಳಿತುಕೊಂಡಿತು. ಗುರುಗಳು ನಿಧಾನವಾಗಿ ಅದರತ್ತ ನಡೆದರು. ಕಾಗೆಯು ಅವರನ್ನು ಗಮನಿಸಿತು; ಆದರೆ ಪ್ರತಿಕ್ರಿಯೆ ನೀಡಲಿಲ್ಲ. ಅವರು ಅದರ ಸಮೀಪಕ್ಕೆ ಬಂದಾಗ, ಅದನ್ನು ಮೆಲ್ಲಗೆ ಹಿಡಿದು ಎತ್ತಿಕೊಂಡರು. ಅದು ಅವರನ್ನು ಸುಲಭವಾಗಿ ಕೊಕ್ಕಬಹುದಾಗಿತ್ತು; ಆದರೂ ಕೊಕ್ಕಲು ಪ್ರಯತ್ನಿಸಲಿಲ್ಲ. ಅವರನ್ನು ನೋಡುತ್ತಾ, ಏನೂ ಮಾಡದೆ ಸುಮ್ಮನೆ ಇತ್ತು. ಅವರು ತೆರೆದ ಕಿಟಕಿಯ ಬಳಿಗೆ ಅದನ್ನು ಕೊಂಡೊಯ್ದು, ಹೊರಗೆ ಬಿಟ್ಟುಬಿಟ್ಟರು. ಅದು ಹಾರಿ ಹೋಗಿ ಸಮೀಪದ ಮರವೊಂದರ ಮೇಲೆ ಕುಳಿತುಕೊಂಡಿತು. ತಿನ್ನಲು ಯೋಗ್ಯವಾದ ಯಾವುದನ್ನಾದರೂ ತರುವಂತೆ ಗುರುಗಳು ತಮ್ಮ ಪರಿಚಾರಕನಿಗೆ ಹೇಳಿದರು. ಬಳಿಕ ತಮ್ಮ ಎಡಗೈಯನ್ನು ತೆರೆದ ಕಿಟಕಿಯ ಮೂಲಕ ಹೊರಗೆ ಚಾಚಿ ಅಂಗೈಯನ್ನು ಮೇಲ್ಮುಖವಾಗಿ ಇರಿಸಿದರು. ಅದರ ಮೇಲೆ ತಮ್ಮ ಕರವಸ್ತ್ರವನ್ನು ಹರಡಿಕೊಂಡರು. ತಂದ ತಿನಿಸನ್ನು ತಮ್ಮ ಬಲಗೈಯ ಮೇಲ್ಮುಖವಾದ ಅಂಗೈಯಲ್ಲಿ ಇಟ್ಟು, ಆ ಕೈಯನ್ನು ಎಡಗೈಯ ಸಮೀಪಕ್ಕೆ ತಂದರು. ಕಾಗೆಯು ತಕ್ಷಣ ಅವರ ಕಡೆಗೆ ಹಾರಿ ಬಂದು ಅವರ ಎಡಗೈ ಮೇಲೆ ಕುಳಿತುಕೊಂಡಿತು.

ಮೊದಲು ಅವರ ಕಡೆ ತಿರುಗಿ ನೋಡಿತು. ಬಳಿಕ ಆಹಾರದ ಕಡೆ ತಿರುಗಿ, ಅದನ್ನು ತಿನ್ನತೊಡಗಿತು. ತಿಂದಮೇಲೆ ಹಾರಿಹೋಯಿತು. 1978ರಲ್ಲಿ ಗುರುಗಳು ಈ ಘಟನೆಯನ್ನೆಲ್ಲ ನನಗೆ ವಿವರಿಸಿದಾಗ, ಆ ಕಾಗೆಯನ್ನು ಮತ್ತೆ ಅಲ್ಲಿ ಕಂಡಿದ್ದ ನೆನಪು ತಮಗಿಲ್ಲವೆಂದು ಹೇಳಿದರು.

1935ರ ಡಿಸೆಂಬರ್ 5ರಂದು, ಬೆಟ್ಟವೊಂದರ ಶಿಖರದಲ್ಲಿ ಗುರುಗಳು ಸಮಾಧಿಯಿಂದ ಬಹಿರ್ಮುಖರಾದಾಗ, ತಮ್ಮ ಕುತ್ತಿಗೆಯನ್ನು ಸುತ್ತಿಕೊಂಡಿದ್ದ ಒಂದು ದೊಡ್ಡ ನಾಗರಹಾವನ್ನು ಗಮನಿಸಿದರು. ಅದರ ಹೆಡೆಯು ತಮ್ಮ ಕೆನ್ನೆಯ ಬಳಿ ತಮಗೆ ವಿಮುಖವಾಗಿತ್ತು. ಅವರು ಅದನ್ನು ನವಿರಾಗಿ ಸವರಿದರು. ಅದು ತನ್ನ ಹೆಡೆಯ ಹಿಂಭಾಗವನ್ನು ಅವರ ಕೆನ್ನೆಯ ಮೇಲೆ ಮೃದುವಾಗಿ ಇರಿಸಿತು. ಕೆಲವು ನಿಮಿಷಗಳ ಬಳಿಕ ಅದು ಸುತ್ತುಬಿಡಿಸಿಕೊಂಡು ಅಲ್ಲಿಂದ ಸರಿದುಹೋಯಿತು.

ಶ್ಲೋಕ 3

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಶ್ರೇಷ್ಠತಮ ಜ್ಞಾನಿಗಳು, ನಿಷ್ಕಳಂಕ ವಾಕ್ಪಟುಗಳು ಮತ್ತು ಪೀಡೆಗಳನ್ನು ಶಮನಗೊಳಿಸುವವರು

***ನ*ಟತ್ಯಾನನರಙ್ಗೇ ಹಿ ಯಸ್ಯ ಸಾಕ್ಷಾತ್ಸರಸ್ವತೀ ।**
ನತಾರ್ತಿಶಮನೇ ದಕ್ಷಂ ತಂ ವಿದ್ಯಾತೀರ್ಥಮಾಶ್ರಯೇ ॥ 3 ॥

[ನಮಿಸುವವರ ಪೀಡೆಗಳನ್ನು ನೀಗಿಸುವಲ್ಲಿ ದಕ್ಷರಾದ ಮತ್ತು ಯಾರ ವದನವೆಂಬ ರಂಗಮಂಚದಲ್ಲಿ ಸಾಕ್ಷಾತ್ ಸರಸ್ವತೀದೇವಿಯೇ ನರ್ತಿಸುತ್ತಾಳೋ, ಆ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ಆಶ್ರಯಿಸುತ್ತೇನೆ.]

ಗುರುಗಳ ಭೌತಿಕ ರೂಪವನ್ನು ಮೊದಲನೆಯ ಶ್ಲೋಕದಲ್ಲಿ ಮತ್ತು ಅವರ ಸಹಜವಾದ ಮನಃಸ್ಥಿತಿಯನ್ನು ಎರಡನೆಯ ಶ್ಲೋಕದಲ್ಲಿ ವಿವರಿಸಲಾಗಿತ್ತು. ಈ ಮೂರನೆಯ ಶ್ಲೋಕದ ಪೂರ್ವಾರ್ಧವು ಸಾಕ್ಷಾತ್ ಸರಸ್ವತೀದೇವಿಯೇ ಅವರ ಬಾಯಿಯೆಂಬ ರಂಗಮಂಚದಲ್ಲಿ ನರ್ತಿಸುತ್ತಾಳೆ ಎಂದು ಹೇಳುತ್ತದೆ. ಇದರ ಮೂಲಕ, ಅವರ ವ್ಯಾಪಕವೂ ಅಗಾಧವೂ ಆದ ಜ್ಞಾನವನ್ನೂ, ನಿಷ್ಕಳಂಕ ವಾಕ್ಪಟುತ್ವವನ್ನೂ ಸೂಚಿಸಲಾಗಿದೆ.

ಸರಸ್ವತೀ-ರಹಸ್ಯ-ಉಪನಿಷತ್ತಿನಲ್ಲಿ ಹತ್ತು ಶ್ಲೋಕಗಳ ಪ್ರಾರ್ಥನೆಯ ಅಂಗವಾಗಿ ಕೆಳಕಂಡಂತೆ ಇದೆ: 'ಮಹಾಸರಸ್ವತೀ ದೇವೀ ಜಿಹ್ವಾಗ್ರೇ ಸನ್ನಿವೇಶ್ಯತಾಮ್ — ಮಹಾಸರಸ್ವತೀದೇವಿಯು

ನನ್ನ ನಾಲಿಗೆಯ ತುದಿಯಲ್ಲಿ ನೆಲೆಸಿರಲಿ'[1]; 'ವಾಚಿ ತಿಷ್ಠತು ಮೇ ಸದಾ — ಅವಳು ಸದಾ ನನ್ನ ಮಾತಿನಲ್ಲಿ ನೆಲೆಸಿರಲಿ.'[2] ಭಕ್ತನ ಪ್ರಾರ್ಥನೆಯು ಈಡೇರಿದಾಗ, 'ತತಃ ಪ್ರವರ್ತತೇ ವಾಣೀ ಸ್ವೇಚ್ಛಯಾ ಲಲಿತಾಕ್ಷರಾ । ಗದ್ಯಪದ್ಯಾತ್ಮಕೈಃ ಶಬ್ದೈರಪ್ರಮೇಯೈರ್ವಿವಕ್ಷಿತೈಃ ॥ ಅಶ್ರುತೋ ಬುಧ್ಯತೇ ಗ್ರಂಥಃ ಪ್ರಾಯಃ ಸಾರಸ್ವತಃ ಕವಿಃ — ಆಗ ಅವನಿಂದ ವಾಣಿಯು ಯಾವುದೇ ಪ್ರಯತ್ನವಿಲ್ಲದೆ, ಲಲಿತವಾದ ಅಕ್ಷರಗಳೊಂದಿಗೆ, ಗದ್ಯ ಮತ್ತು ಪದ್ಯಗಳಲ್ಲಿ, ಅಪಾರ ಗಹನತೆಯಿಂದಲೂ, ಹೇಳಲಿಚ್ಛಿಸುವ ವಿಷಯವನ್ನು ಪರಿಪೂರ್ಣವಾಗಿ ಅರುಹುವ ರೀತಿಯಲ್ಲೂ ಹೊರಹೊಮ್ಮುತ್ತದೆ. ಸರಸ್ವತಿಯಿಂದ ಪ್ರೇರಿತನಾದ ಈ ಜ್ಞಾನಿಯು ತಾನು ಕೇಳಿಲ್ಲದ ಗ್ರಂಥಗಳನ್ನೂ ಪ್ರಾಯಿಕವಾಗಿ ಅರ್ಥಮಾಡಿಕೊಳ್ಳುತ್ತಾನೆ',[3] ಎಂದು ಉಪನಿಷತ್ತು ಬೋಧಿಸುತ್ತದೆ. ಹೀಗೆ, ಸರಸ್ವತೀದೇವಿಯು ಒಬ್ಬ ವ್ಯಕ್ತಿಯ ನಾಲಿಗೆಯ ತುದಿಯಲ್ಲಿ, ಅಂದರೆ ಅವನ ವಾಣಿಯಲ್ಲಿ ನೆಲೆಸಿರುವಾಗ, ಅವನು ಅತ್ಯಂತ ಜ್ಞಾನವುಳ್ಳವನೂ ವಾಕ್ಪಟುವೂ ಆಗಿರುತ್ತಾನೆ.

ಸ್ಕಂದ-ಪುರಾಣದಲ್ಲಿ ವಾಲ್ಮೀಕಿ ಋಷಿಗಳು ಹಿಂದೆ ಕಳ್ಳನಾಗಿದ್ದದ್ದು, ಹಲವು ಋಷಿಗಳು ಅವರಿಗೆ ಸುಧಾರಿಸಲು ಸಹಾಯ ಮಾಡಿದ್ದು ಮತ್ತು ಅವರು ತಪಸ್ಸಿನಲ್ಲಿ ತೊಡಗಿದ್ದುದನ್ನು ಕುರಿತು ಒಂದು ಪ್ರಸಂಗವಿದೆ. ಇದಾದ ಬಳಿಕ, ಋಷಿಗಳು ಅವರಿಗೆ ಆಶೀರ್ವದಿಸಿ ಹೀಗೆ ಹೇಳಿದರು: 'ಸ್ವಚ್ಛಂದಾ ಭಾರತೀ ದೇವೀ ಜಿಹ್ವಾಗ್ರೇ ತೇ ಭವಿಷ್ಯತಿ । ಕೃತ್ವಾ ರಾಮಾಯಣಂ ಕಾವ್ಯಂ ತತೋ ಮೋಕ್ಷಂ ಗಮಿಷ್ಯಸಿ — ಸ್ವೇಚ್ಛೆಯಿಂದ ಕಾರ್ಯನಿರ್ವಹಿಸುವ ದೇವಿ ಭಾರತೀ (ಸರಸ್ವತೀ) ನಿನ್ನ ನಾಲಿಗೆಯ ತುದಿಯಲ್ಲಿ ನೆಲೆಸುವಳು; ನೀನು ರಾಮಾಯಣವೆಂಬ ಕಾವ್ಯವನ್ನು ರಚಿಸಿ, ಅನಂತರ ಮೋಕ್ಷವನ್ನು ಹೊಂದುವೆ.'[4] ಸರಸ್ವತೀದೇವಿಯು ವಾಲ್ಮೀಕಿ ಋಷಿಗಳ ನಾಲಿಗೆಯ ತುದಿಯಲ್ಲಿ ನೆಲೆಸಿರುವುದಕ್ಕೂ ಅವರು ಪವಿತ್ರವೂ ಸ್ಫೂರ್ತಿಪ್ರದವೂ ಆದ ರಾಮಾಯಣ ಮಹಾಕಾವ್ಯವನ್ನು ರಚಿಸುವುದಕ್ಕೂ ಇರುವ ಸಂಬಂಧವನ್ನು ಇಲ್ಲಿ ಸ್ಪಷ್ಟವಾದ ತೋರಿಸಲಾಗಿದೆ.

ಸರಸ್ವತೀದೇವಿಯು ಒಬ್ಬ ವ್ಯಕ್ತಿಯ ನಾಲಿಗೆಯ ತುದಿಯಲ್ಲಿ ಅಥವಾ ಬಾಯಿಯಲ್ಲಿ ನೆಲೆಸಿರುವಳೆಂದು ಹೇಳುವಂತೆಯೇ, ಅವಳು ಅಲ್ಲಿ ನರ್ತಿಸುತ್ತಾಳೆ ಎಂದೂ ಹೇಳಲಾಗುತ್ತದೆ. ಈ ಎರಡೂ ವಿವರಣೆಗಳಲ್ಲಿ ಹೀಗೆ ಅನುಗ್ರಹಿಸಲ್ಪಟ್ಟ ವ್ಯಕ್ತಿಯು ವ್ಯಾಪಕವೂ ಗಹನವೂ ಆದ ಜ್ಞಾನವನ್ನೂ, ತನ್ನ ವಿಚಾರಗಳನ್ನು ಅತ್ಯುತ್ತಮವಾದ ವಾಕ್ಪಟುತ್ವದಿಂದ ವ್ಯಕ್ತಪಡಿಸುವ ಸಾಮರ್ಥ್ಯವನ್ನೂ ಹೊಂದಿರುತ್ತಾನೆ ಎಂಬುದೇ ಸೂಚಿಸಲ್ಪಡುತ್ತದೆ. ಅಗಸ್ತ್ಯ ಋಷಿಗಳ

---

[1] ಸರಸ್ವತೀ-ರಹಸ್ಯ-ಉಪನಿಷತ್ 39

[2] ಸರಸ್ವತೀ-ರಹಸ್ಯ-ಉಪನಿಷತ್ 38

[3] ಸರಸ್ವತೀ-ರಹಸ್ಯ-ಉಪನಿಷತ್ 44–45

[4] ಸ್ಕಂದ-ಪುರಾಣ 7.297.58

ಸರಸ್ವತೀ-ಸ್ತೋತ್ರದಲ್ಲೂ ಇದೇ ಭಾವನೆಯು ಕಂಡುಬರುತ್ತದೆ. ಒಂದು ಶ್ಲೋಕದಲ್ಲಿ ಸರಸ್ವತೀದೇವಿಯು ಅವರ ಬಾಯಿಯಲ್ಲಿ ಸದಾ ನೆಲೆಸಿರಬೇಕೆಂದು ಪ್ರಾರ್ಥಿಸಲಾಗಿದೆ. ಅದರ ಮುಂದಿನ ಶ್ಲೋಕದಲ್ಲಿ ಅವಳು ಅಲ್ಲಿ ನರ್ತಿಸಬೇಕೆಂದು ಪ್ರಾರ್ಥಿಸಲಾಗಿದೆ: 'ಸಾ ಮೇ ವಾಗ್ದೇವತೇಯಂ ನಿವಸತು ವದನೇ ಸರ್ವದಾ ಸುಪ್ರಸನ್ನಾ — ವಾಗ್ದೇವತೆಯು (ಸರಸ್ವತೀ-ದೇವಿಯು) ಸುಪ್ರಸನ್ನಳಾಗಿ ಸದಾ ನನ್ನ ಬಾಯಿಯಲ್ಲಿ ನೆಲೆಸಿರಲಿ'[1]; 'ಸರಸ್ವತೀ ನೃತ್ಯತು ವಾಚಿ ಮೇ ಸದಾ — ಸರಸ್ವತೀ-ದೇವಿಯು ಸದಾ ನನ್ನ ವಾಣಿಯಲ್ಲಿ ನರ್ತಿಸಲಿ.'[2]

ಗುರುಗಳ ಪರಿಪೂರ್ಣ ವಾಕ್ಪಟುತ್ವಕ್ಕೆ ಅಸಂಖ್ಯಾತ ಜನರು ಪ್ರತ್ಯಕ್ಷವಾಗಿ ಕೇಳಿರುವ ಅವರ ಅನುಗ್ರಹ ಭಾಷಣಗಳು ಸಾಕ್ಷಿಯಾಗಿವೆ. ಆ ಅನುಗ್ರಹ ಭಾಷಣಗಳಲ್ಲಿ ಅನೇಕವು ಈಗ ಧ್ವನಿಮುದ್ರಿತ ರೂಪದಲ್ಲೂ ಲಭ್ಯವಿವೆ.[3] ಗುರುಗಳು ಅತ್ಯಂತ ಸಂಕೀರ್ಣ ವಿಷಯಗಳನ್ನೂ ಎಲ್ಲರೂ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ವಿವರಿಸುತ್ತಿದ್ದರು. ಅದೇ ಸಮಯದಲ್ಲಿ, ನಿಖರತೆಯಲ್ಲಿ ಕಿಂಚಿತ್ತೂ ರಾಜಿ ಮಾಡಿಕೊಳ್ಳದೆ, ಕರಾರುವಾಕ್ಕಾಗಿ, ಸ್ಪಷ್ಟವಾಗಿ ಮತ್ತು ಅನುಪಮವಾಗಿ ತಿಳಿಹೇಳುತ್ತಿದ್ದರು. ಅವರ ಆಳವಾದ ಮತ್ತು ವ್ಯಾಪಕ ಜ್ಞಾನಕ್ಕೆ ಸಾಕ್ಷಿಯಾಗುವ ಕೆಲವು ನಿದರ್ಶನಗಳು ಇಲ್ಲಿವೆ.

1977ರ 'ಶಂಕರ ಕೃಪಾ' ಮಾಸಪತ್ರಿಕೆಯ ವಿಶೇಷಾಂಕದಲ್ಲಿ ಪ್ರಕಟವಾದ ಕೆ. ಎಸ್. ವೆಂಕಟರಾಮ ಶಾಸ್ತ್ರೀ ಎಂಬ ವಿದ್ವಾಂಸರ ಒಂದು ತಮಿಳು ಲೇಖನವನ್ನು ಆಧರಿಸಿದ ನಿರೂಪಣೆ ಹೀಗಿದೆ:

'ಸ್ವತಃ ನ್ಯಾಯಶಾಸ್ತ್ರ ಪ್ರವೀಣರಾದ ಕೊಚ್ಚಿನ್ ಮಹಾರಾಜರು ನ್ಯಾಯಶಾಸ್ತ್ರಕ್ಕೆ ಸಂಬಂಧಿಸಿದ ತಮ್ಮ ಸಂದೇಹವೊಂದನ್ನು ಪರಿಹರಿಸುವಂತೆ ಗುರುಗಳಲ್ಲಿ ಒಮ್ಮೆ ಪ್ರಾರ್ಥಿಸಿದ್ದರು. ತಮ್ಮ ಪ್ರಶ್ನೆಯನ್ನು ವಿವರಿಸಿ ಅವರು ಗುರುಗಳಿಗೆ ಪತ್ರ ಬರೆದು, ಅದನ್ನು ಕೇರಳದ ವಿದ್ವಾಂಸರೊಬ್ಬರ ಮೂಲಕ ಕಳುಹಿಸಿದರು. ಆ ಸಮಯದಲ್ಲಿ ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ವಿದ್ವತ್ಸಭೆ ನಡೆಯುತ್ತಿತ್ತು. ಪತ್ರವನ್ನು ಸಲ್ಲಿಸಿದಾಗ, ಗುರುಗಳು ವಿದ್ವತ್ಸಭೆಯಲ್ಲಿ ಸೇರಿದ್ದ ವಿದ್ವಾಂಸರ ಮುಂದೆ ಅದನ್ನು ಎಲ್ಲರಿಗೂ ಕೇಳುವಂತೆ ಓದಲು ಅವರಲ್ಲೊಬ್ಬರನ್ನು ನಿರ್ದೇಶಿಸಿದರು. ಇದರಿಂದ ವಿದ್ವಾಂಸರ ನಡುವೆ ಚರ್ಚೆ ಆರಂಭವಾಯಿತು. ಒಬ್ಬೊಬ್ಬರಾಗಿ ವಿದ್ವಾಂಸರು ಆ ಸಮಸ್ಯೆಗೆ ಪರಿಹಾರವನ್ನು ಮಂಡಿಸಲು ಮುಂದಾದರು. ಆದರೆ ಆ ಸಮಾಧಾನಗಳು ಸಮರ್ಪಕವಾಗಿ ಕಂಡುಬರಲಿಲ್ಲ; ಅವರಲ್ಲೇ ಮತ್ತೊಬ್ಬರು ಅದನ್ನು ಕೂಡಲೇ ಖಂಡಿಸಿಬಿಟ್ಟರು.

[1] ಅಗಸ್ತ್ಯ ಋಷಿಗಳ ಸರಸ್ವತೀ-ಸ್ತೋತ್ರ 2

[2] ಅಗಸ್ತ್ಯ ಋಷಿಯ ಸರಸ್ವತೀಸ್ತೋತ್ರ 3

[3] ಗುರುಗಳ ಅನುಗ್ರಹ ಭಾಷಣಗಳು ಸಂಪೂರ್ಣವಾಗಿಯೂ ತುಣುಕುಗಳಾಗಿಯೂ ವೀಡಿಯೊ ರೂಪದಲ್ಲೂ ಧ್ವನಿಮುದ್ರಿತ ರೂಪದಲ್ಲೂ ಇಲ್ಲಿ ಉಚಿತವಾಗಿ ಲಭ್ಯ: https://centreforbrahmavidya.org/acharyas/sri-abhinava-vidyatheertha-mahaswamiji.html?v=3.8

ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಬಳಿಯೇ ವಿದ್ಯಾಭ್ಯಾಸ ಮಾಡಿದ್ದ ಮತ್ತು ಅನಂತರ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾದ ವೆಂಕಟೇಶ್ವರ ಶಾಸ್ತ್ರಿಗಳು, ಕೊಲ್ಕತ್ತಾದ ಸುಪ್ರಸಿದ್ಧರಾದ ನ್ಯಾಯಶಾಸ್ತ್ರ ವಿದ್ವಾಂಸರಾದ ಮಧುಸೂದನ ಭಟ್ಟಾಚಾರ್ಯರು ಮುಂತಾದ ವಿದ್ವಾಂಸ ವಾಗ್ಮಿಗಳೂ ತಮ್ಮ ತಮ್ಮ ಪರಿಹಾರಗಳನ್ನು ಮಂಡಿಸಿದರು. ಆದರೆ ಅವುಗಳನ್ನೂ ಇತರ ವಿದ್ವಾಂಸರು ಖಂಡಿಸಿಬಿಟ್ಟರು. ಚರ್ಚೆ ಮುಂದುವರಿಯುತ್ತಲೇ ಇತ್ತು; ತೀರ್ಮಾನಕ್ಕೆ ಬರಲು ಅನಂತಕಾಲ ಬೇಕಾಗಬಹುದೇನೋ ಎಂಬಂತಿತ್ತು. ಸಭೆಯ ಸಮಾಪನ ಅಧಿವೇಶನದ ವೇಳೆಗೆ ಸಮರ್ಪಕವಾದ ನಿರ್ಣಯವನ್ನು ಮಂಡಿಸಲು ಎಲ್ಲರೂ ಆ ವಿಷಯವನ್ನು ಕುರಿತು ಮತ್ತಷ್ಟು ಚಿಂತಿಸಬೇಕೆಂದು ಗುರುಗಳು ವಿದ್ವಾಂಸರಿಗೆ ಸೂಚಿಸಿದರು.

'ಆದರೆ, ಸಮಾಪನದ ದಿನವೂ ಯಾರೊಬ್ಬ ವಿದ್ವಾಂಸರಿಗೂ ಸಭೆಗೆ ತೃಪ್ತಿಕರವಾದ ಸಮಾಧಾನವನ್ನು ಮಂಡಿಸಲು ಸಾಧ್ಯವಾಗಲಿಲ್ಲ. ಈ ಸಂದರ್ಭದಲ್ಲಿ ಗುರುಗಳೇ ಸ್ವತಃ ಮಧ್ಯಪ್ರವೇಶಿಸಿ, ತಮ್ಮ ಅನುಪಮವಾದ ಲಲಿತ ಮತ್ತು ಸ್ಪಷ್ಟ ಶೈಲಿಯಲ್ಲಿ ಸೂಕ್ತ ಉತ್ತರವನ್ನು ನೀಡಿದರು. ಗುರುಗಳು ನೀಡಿದ ಅದ್ಭುತ ಉತ್ತರದಿಂದ ವಿದ್ವಾಂಸರು ಬೆರಗಾದರು. ವೆಂಕಟೇಶ್ವರ ಶಾಸ್ತ್ರಿಗಳು ಮುಕ್ತಕಂಠದಲ್ಲಿ, "ಯಾವುದೇ ಸಂದೇಹವನ್ನು ನಿವಾರಿಸಲು ಗುರುಗಳಿಂದ ಮಾತ್ರ ಸಾಧ್ಯ. ಅಷ್ಟಕ್ಕೂ, ಅವರು ಮಾನುಷರೂಪವನ್ನು ತಾಳಿರುವ ಶಾರದಾಂಬೆಯಲ್ಲವೇ?" ಎಂದು ಹೇಳಿದರು. ಅದು ವಿದ್ವಾಂಸರಿಗೆ ಸ್ಮರಣೀಯವಾದ ಸದಸ್ಸಾಯಿತು. ಗುರುಗಳು ನೀಡಿದ ಸ್ಪಷ್ಟೀಕರಣದಿಂದ ಮಹಾರಾಜರಿಗಾದ ಸಂತೋಷಕ್ಕೆ ಎಲ್ಲೆಯೇ ಇರಲಿಲ್ಲ. ಅವರು ಕೂಡಲೆ ಗುರುಗಳಿಗೆ ಪತ್ರ ಬರೆದು, ತಮ್ಮ ಗೌರವಪೂರ್ವಕ ನಮಸ್ಕಾರಗಳನ್ನು ಹಾಗೂ ತಮಗೆ ದೊರೆತ ಮಾರ್ಗದರ್ಶನಕ್ಕಾಗಿ ಕೃತಜ್ಞತೆಯನ್ನೂ ಸಲ್ಲಿಸಿದರು.'

ತುಂಗಾ ನದಿಯ ದಕ್ಷಿಣತೀರದಲ್ಲಿ ಗುರುಗಳು ವಾಸಿಸುತ್ತಿದ್ದ ನರಸಿಂಹವನವಿದೆ. ಅನೇಕ ವರ್ಷಗಳ ಕಾಲ, ನದಿಯ ಉತ್ತರದಲ್ಲಿರುವ ಶೃಂಗೇರಿ ಮಠದ ಶಾರದಾಂಬಾ ದೇವಾಲಯದ ಕಡೆಯಿಂದ ನರಸಿಂಹವನಕ್ಕೆ ಜನರು ಮರದ ಸೇತುವೆಯ ಮೂಲಕ ತೆರಳಬೇಕಾಗಿತ್ತು. ಆ ತಾತ್ಕಾಲಿಕ ಸೇತುವೆಯನ್ನು ಪ್ರತಿವರ್ಷ ಮಳೆಗಾಲದ ಆರಂಭದಲ್ಲಿ ತೆರವುಗೊಳಿಸಿ, ಕೆಲವು ತಿಂಗಳುಗಳ ಬಳಿಕ ನದಿಯಲ್ಲಿ ನೀರಿನ ಮಟ್ಟ ಇಳಿದಾಗ ಮತ್ತೆ ನಿರ್ಮಿಸಲಾಗುತ್ತಿತ್ತು. ಮಳೆಗಾಲದಲ್ಲಿ ಜನರಿಗೆ ನದಿಯನ್ನು ದಾಟಲು ಕಷ್ಟವಾಗುತ್ತಿತ್ತು; ಮಾತ್ರವಲ್ಲ, ಒಮ್ಮೆ ದೋಣಿಯೊಂದು ಮಗುಚಿಬಿದ್ದ ದುರ್ಘಟನೆಯೂ ಸಂಭವಿಸಿತ್ತು. ಆದ್ದರಿಂದ 1980ರ ದಶಕದ ಆರಂಭದಲ್ಲಿ ಗುರುಗಳು ಅಲ್ಲಿ ಒಂದು ಸ್ಥಾಯಿ ಸೇತುವೆಯನ್ನು ನಿರ್ಮಿಸಲು ನಿರ್ಧರಿಸಿದರು. ಭಾರತದಲ್ಲೂ ವಿದೇಶಗಳಲ್ಲೂ ಇದ್ದ ವಿವಿಧ ಸೇತುವೆಗಳ ವಿವರಗಳನ್ನು ಅವರು ಅತ್ಯಂತ ಕೂಲಂಕುಷವಾಗಿ ಸಂಗ್ರಹಿಸಿದರು. ತಾವು ಕಲ್ಪಿಸಿಕೊಂಡಿದ್ದ ಸೇತುವೆಯ ನಿರ್ಮಾಣದ ಜವಾಬ್ದಾರಿಯನ್ನು ಗ್ಯಾಮನ್ ಇಂಡಿಯಾ ಎಂಬ ಸಂಸ್ಥೆಗೆ ವಹಿಸಿದರು. ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಟಿ. ಎನ್. ಸುಬ್ಬ ರಾವ್ ಅವರು ಗುರುಗಳನ್ನು ಭೇಟಿಯಾದರು. ಆಗ ಗುರುಗಳು

ಋಷಿಕೇಶದ ಲಕ್ಷ್ಮಣ ಝೂಲಾ, ಕೊಲ್ಕತ್ತಾದ ಹೌರಾ ಸೇತುವೆ, ಸಿಡ್ನಿಯ ಸಿಡ್ನಿ ಹಾರ್ಬರ್ ಸೇತುವೆ ಮತ್ತು ಸ್ಯಾನ್ ಫ್ರಾನ್ಸಿಸ್ಕೋದ ಗೋಲ್ಡನ್ ಗೇಟ್ ಸೇತುವೆ ಮುಂತಾದ ವಿವಿಧ ಸೇತುವೆಗಳ ಕುರಿತು ಅತ್ಯಂತ ತಿಳುವಳಿಕೆಯುಳ್ಳವರಾಗಿ ಮಾತನಾಡುತ್ತಿರುವುದನ್ನು ಕಂಡು ಸುಬ್ಬ ರಾವ್ ಅವರು ಬೆರಗಾದರು. ತಮ್ಮೊಂದಿಗೆ ಬಂದಿದ್ದ ಗುರುಗಳ ಶಿಷ್ಯರಾದ ಎಚ್. ಎಸ್. ನಾಗೇಶ್ವರನ್ ಅವರಿಗೆ ಸುಬ್ಬ ರಾವ್ ಅವರು, 'ಇವರು ಇಡೀ ಜಗತ್ತನ್ನೇ ಸುತ್ತಿಬಂದಿದ್ದಾರೆಂದು ನನಗೆ ಅನಿಸುತ್ತದೆ!' ಎಂದು ಉದ್ಗರಿಸಿದರು. ಗುರುಗಳು ನದಿಯ ಮಧ್ಯದಲ್ಲಿ ಕಂಬಗಳನ್ನು ಹಾಕುವುದನ್ನು ತಪ್ಪಿಸುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಏಕೆಂದರೆ ತಾವೇ ಹೇಳಿದಂತೆ, ಸೇತುವೆಯ ನಿರ್ಮಾಣ ಕಾರ್ಯದ ನಿಮಿತ್ತ, ನದಿಯ ಮೀನುಗಳಿಗೆ ತೊಂದರೆಯಾಗಬಾರದು ಎಂದು ಅವರು ಬಯಸಿದರು. ಅಂತಿಮವಾಗಿ, ವಿವಿಧ ಅಂಶಗಳನ್ನು ಪರಿಗಣಿಸಿದ ಬಳಿಕ, ಗ್ಯಾಮನ್ ಇಂಡಿಯಾದ ಪ್ರಸ್ತಾವನೆಯಂತೆ ನದಿಯ ಮಧ್ಯದಲ್ಲಿ ಒಂದೇ ಒಂದು ಕಂಬವಿರುವ ಸೇತುವೆಯ ನಿರ್ಮಾಣವನ್ನು ಅವರು ಅನುಮೋದಿಸಿದರು. ನಿರ್ಮಾಣ ಕಾರ್ಯವನ್ನು ಆಗಾಗ್ಗೆ ಅವಲೋಕಿಸುತ್ತಿದ್ದರು.

ಟಿ. ಎಂ. ನಾಗರಾಜನ್ ಅವರ ಬೆಂಗಳೂರಿನ ಮನೆಯ ಮೇಲ್ಚಾವಣಿಯಲ್ಲಿ ಹಲವು ವಿವಿಧ ಗುಲಾಬಿ ಗಿಡಗಳಿದ್ದವು. ಅವರಿಗೆ ಯು.ಕೋ. ಬ್ಯಾಂಕಿನ ಮತ್ತೊಂದು ಶಾಖೆಗೆ ವರ್ಗಾವಣೆ-ಯಾಯಿತು. ಬೆಂಗಳೂರನ್ನು ತೊರೆದಾಗ, ಗುಲಾಬಿ ಗಿಡದ ಬಗ್ಗೆ ಗುರುಗಳಿಗೆ ಇದ್ದ ಆಸಕ್ತಿ ಮತ್ತು ಅಕ್ಕರೆಯನ್ನು ಅರಿತಿದ್ದ ಅವರು ತಮ್ಮ ಎಲ್ಲ ಗಿಡಗಳನ್ನೂ ಶೃಂಗೇರಿಗೆ ಕೊಂಡೊಯ್ದು ಗುರುಗಳಿಗೆ ಸಮರ್ಪಿಸಿದರು. ಕೆಲಕಾಲ ಬಳಿಕ ಅವರು ದರ್ಶನಕ್ಕಾಗಿ ಶೃಂಗೇರಿಗೆ ಹೋದಾಗ, ಗುರುಗಳು ಅವರಿಗೆ ಮೂರು ಬಣ್ಣಗಳ ಗುಲಾಬಿಗಳಿಂದ ಕೂಡಿದ್ದ ಒಂದು ಸುಂದರ ಗುಲಾಬಿಗಿಡವನ್ನು ತೋರಿಸಿ, ಅವರು ನೀಡಿದ್ದ ಹಳದಿ ಗುಲಾಬಿಗಳ ಗಿಡವೇ ಇದಾಗಿದೆ ಎಂದು ಹೇಳಿದರು. ಗುರುಗಳು ತಾವೇ ಮಾಡಿದ್ದ ಕಸಿಯ ಪರಿಣಾಮವಾಗಿ, ಹಳದಿ ಹೂವುಗಳನ್ನು ಬಿಡುತ್ತಿದ್ದ ಆ ಗಿಡವು ಇನ್ನಷ್ಟು ಸುಂದರವಾಗಿ, ಮತ್ತೆರಡು ಬಣ್ಣಗಳ ಗುಲಾಬಿಗಳನ್ನೂ ಬಿಡುತ್ತಿದ್ದುದು ಮನೋಹರ ದೃಶ್ಯವಾಗಿತ್ತು.

1975ರ ಜೂನ್ ತಿಂಗಳ ಮೊದಲನೆಯ ವಾರದ ಒಂದು ಸಂಜೆ, ಶೃಂಗೇರಿಯಲ್ಲಿ ಗುರುಗಳು ನನ್ನನ್ನು ತಮ್ಮ ಬಳಿಗೆ ಕರೆಸಿಕೊಂಡರು. ಅವರು ಸಾಮಾನ್ಯವಾಗಿ ಖಾಸಗಿ ದರ್ಶನ ನೀಡುತ್ತಿದ್ದ ಶೃಂಗೇರಿಯಲ್ಲಿ ತಮ್ಮ ನಿವಾಸವಾದ ಸಚ್ಚಿದಾನಂದ ವಿಲಾಸದ ನೆಲಮಹಡಿಯಲ್ಲಿರುವ ಕೋಣೆಯಲ್ಲಿ ಕುಳಿತಿದ್ದರು. ಅವರ ಮುಂದೆ ಸುಮಾರು ನಲವತ್ತರ ವಯಸ್ಸಿನ ಒಬ್ಬರು ಕುಳಿತಿದ್ದರು. ಅವರು 'ಬಿಹಾರದ ಭೌತಶಾಸ್ತ್ರದ ಪ್ರಾಧ್ಯಾಪಕರು' ಎಂದು ಗುರುಗಳು ನನಗೆ ತಿಳಿಸಿದರು. ನನ್ನನ್ನು 'ನನ್ನ ಶಿಷ್ಯ' ಎಂದು ಅವರಿಗೆ ಪರಿಚಯಿಸಿದರು. ಅನಂತರ ನಡೆದ ಸಂಭಾಷಣೆಯಲ್ಲಿ ಪ್ರಾಧ್ಯಾಪಕರು ಹಿಂದಿಯಲ್ಲಿ ಮಾತನಾಡುತ್ತಿದ್ದರೂ, ಹಿಂದಿಯ ಸಮಾನಾರ್ಥಕ ಪದಗಳ ಬದಲು, 'gravity' ಮುಂತಾದ ಪದಗಳನ್ನು ಬಳಸುತ್ತಿದ್ದರು. ಗುರುಗಳೂ ಸಹ ಅವರ ಅನುಕೂಲಕ್ಕಾಗಿ ಹಾಗೆಯೇ ಮಾತನಾಡಿದರು. ತಮ್ಮ ವಿಚಾರವನ್ನು

ಮಂಡಿಸುತ್ತಾ ಪ್ರಾಧ್ಯಾಪಕರು — ಭಗವದ್ಗೀತೆ ಮತ್ತು ಪುರಾಣಗಳು ಬ್ರಹ್ಮಾಂಡವು ಕೊನೆಯಿಲ್ಲದ, ಒಂದೇ ರೀತಿಯಯಾದ ಪುನರಾವರ್ತಿತ ವಿಸ್ತರಣ-ಸಂಕೋಚನ ಚಕ್ರಗಳಿಗೆ (endless, similar cycles of contraction and expansion) ಒಳಗಾಗುತ್ತದೆ ಎಂಬುದನ್ನು ಸಾರಿವೆ; ಬಹಳ ಹಿಂದೆಯೇ ಅವು ಬೋಧಿಸಿದ್ದುದನ್ನೇ ಆಧುನಿಕ ವಿಜ್ಞಾನ ಈಗ ಹೇಳುತ್ತಿದೆ ಎಂದರು. ಬ್ರಹ್ಮಾಂಡದ ಆರಂಭ ಮತ್ತು ಅಂತ್ಯದ ಬಗೆಗಿನ ಶಾಸ್ತ್ರ-ವಿಜ್ಞಾನದ ಪರಸ್ಪರ ಸಂಬಂಧದ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಬೇಕೆಂಬ ಉದ್ದೇಶ ಅವರಿಗಿತ್ತು. ಆದ್ದರಿಂದ ಗುರುಗಳು ಹಲವು ಪ್ರಶ್ನೆಗಳನ್ನು ಕೇಳುವ ಮೂಲಕ ಅವರ ನಿಲುವಿನಲ್ಲಿ ಇರುವ ಕೆಲವು ತೊಡಕುಗಳನ್ನು ಎತ್ತಿ ಅವರನ್ನು ಸೌಮ್ಯವಾಗಿ ಎಚ್ಚರಿಸಿದರು. ಮೊದಲಿಗೆ, ಗುರುತ್ವಾಕರ್ಷಣೆಯ ಕಾರಣ, ವಿಸ್ತರಿಸುತ್ತಿರುವ ಬ್ರಹ್ಮಾಂಡವು ಅನಂತರ ಸಂಕೋಚನ-ಗೊಳ್ಳಲು ಆರಂಭಿಸುತ್ತದೆ ಎಂಬ ಅವರ ಅನಿಸಿಕೆಗೆ ಆಧಾರವಾಗಿ ಸಮರ್ಥಕವಾದ ಯಾವ ದತ್ತಾಂಶವೂ ಇಲ್ಲ ಎಂಬುದನ್ನು ಗುರುಗಳು ಮನವರಿಕೆ ಮಾಡಿಕೊಟ್ಟರು. ಪ್ರಾಧ್ಯಾಪಕರು ತಾವು ಕಲ್ಪಿಸಿಕೊಂಡಿದ್ದ ಶಾಸ್ತ್ರಬೋಧನೆಯನ್ನು ಆ ಕಾಲದಲ್ಲಿ ಇನ್ನೂ ಊಹೆಯ ಹಂತದಲ್ಲಿದ್ದ ವೈಜ್ಞಾನಿಕ ಅಭಿಪ್ರಾಯದೊಂದಿಗೆ ಜೋಡಿಸುವ ಮೂಲಕ ಶಾಸ್ತ್ರದ ಹಿರಿಮೆ-ಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಿದ್ದರು; ಆ ಪ್ರಯತ್ನದಲ್ಲಿನ ತೊಡಕನ್ನು ಅವರಿಗೆ ಮನವರಿಕೆ ಮಾಡಿಕೊಡುವುದೇ ಗುರುಗಳ ಉದ್ದೇಶವಾಗಿತ್ತು. ಶಾಸ್ತ್ರ ಮತ್ತು ವಿಜ್ಞಾನದ ಸಂಬಂಧದ ಕುರಿತು ಪ್ರಾಧ್ಯಾಪಕರು ನೀಡಿದ ನಿರೂಪಣೆ ಸರಿಯಾಗಿರಬೇಕಾದರೆ, ವಿಸ್ತರಣ-ಸಂಕೋಚನ ಚಕ್ರಗಳು ಇರಬೇಕಷ್ಟೇ ಅಲ್ಲದೆ, ಆ ಚಕ್ರಗಳು ಪರಸ್ಪರ ಸದೃಶವಾಗಿರಬೇಕು ಎಂದು ಗುರುಗಳು ಸೂಚಿಸಿದರು. ಅದಕ್ಕೆ ಪ್ರಾಧ್ಯಾಪಕರು, ಅಂತಹ ಚಕ್ರಗಳು ಪರಸ್ಪರ ಭಿನ್ನವಾಗಿವೆ ಎಂದು ಒಪ್ಪಿಕೊಳ್ಳಬೇಕಾದುದು ಅನಿವಾರ್ಯವಾದರೆ, ಶಾಸ್ತ್ರವು ಅದನ್ನು ಹೇಗೆ ಬೋಧಿಸಿದೆ ಎಂಬುದನ್ನು ತಾವು ಮತ್ತೆ ಪರಿಶೀಲಿಸುವುದಾಗಿ ಹೇಳಿದರು. ಆಗ ಗುರುಗಳು ಹಾಗಾದರೆ ಆಧುನಿಕ ವಿಜ್ಞಾನದ ಆಧಾರದ ಮೇಲೆ ಶಾಸ್ತ್ರವನ್ನು ಮರುವ್ಯಾಖ್ಯಾನಿಸಿ, ವಿಜ್ಞಾನವು ಕಂಡು-ಹಿಡಿಯುತ್ತಿರುವುದನ್ನು ಶಾಸ್ತ್ರವು ಮೊದಲೇ ಪ್ರಕಟಿಸಿತ್ತು ಎಂದು ಹೇಳುವಂತಾಗುತ್ತದೆ ಎಂದು ಅವರಿಗೆ ತಿಳಿಸಿದರು. ವಿಜ್ಞಾನವು ದತ್ತಾಂಶವನ್ನು ಅವಲಂಬಿಸುತ್ತದೆ. ಅನಂತರದಲ್ಲಿ (1975ರ ಬಳಿಕ) ಒಂದು ವೇಳೆ ಬ್ರಹ್ಮಾಂಡದ ವಿಸ್ತರಣೆಯು ವೇಗವರ್ಧಿತವಾಗಿದೆ (accelerated expansion) ಎಂಬುದನ್ನು ದತ್ತಾಂಶವು ಸಮರ್ಥಿಸಿದರೆ, ಆಗ ಶಾಸ್ತ್ರವು ನಿರ್ದಿಷ್ಟಪಡಿಸುವುದು ಆವರ್ತಕ ಬ್ರಹ್ಮಾಂಡವನ್ನು (cyclic universe ಅನ್ನು) ಅಲ್ಲ, ಬದಲಿಗೆ ವಿಸ್ತರಣೆಯ ವೇಗವು ಹೆಚ್ಚುತ್ತಲೇ ಇರುವ ಬ್ರಹ್ಮಾಂಡವನ್ನು ಎಂಬುದಾಗಿ ಹೇಳುವಂತೆ ಶಾಸ್ತ್ರವನ್ನು ಮರುವ್ಯಾಖ್ಯಾನಿಸುವಿರಾ, ಎಂದು ಪ್ರಶ್ನಿಸಿದರು.

ತಾವು ಕಲ್ಪಿಸಿಕೊಂಡಿದ್ದ ಶಾಸ್ತ್ರ ಮತ್ತು ವಿಜ್ಞಾನದ ಸಂಬಂಧದ ನ್ಯೂನತೆಯನ್ನು ಮನಗಂಡು, ಪ್ರಾಧ್ಯಾಪಕರು ತಮ್ಮ ಮೂಲ ಉದ್ದೇಶವು ಭಾರತದ ಭೂತಕಾಲದ ಗರಿಮೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವುದಷ್ಟೇ ಎಂದು ತಿಳಿಸಿದರು. ಅದಕ್ಕೆ ಸ್ಪಂದಿಸಿ ಗುರುಗಳು ಗಣಿತ, ವೈದ್ಯಕೀಯ ಮತ್ತು ಎಂಜಿನಿಯರಿಂಗ್ ಕ್ಷೇತ್ರಗಳಲ್ಲಿ ಪ್ರಾಚೀನ ಭಾರತದ ಸಾಧನೆಗಳ ಕುರಿತು

ವಿವಾದಾತೀತವಾದ ಉದಾಹರಣೆಗಳನ್ನು ನೀಡುವ ಮೂಲಕ ಅವರನ್ನು ಸಂತೋಷ-ಪಡಿಸಿದರು. ಬೋಧಾಯನ ಋಷಿಗಳ ಕೆಲವು ಶುಲ್ಬ-ಸೂತ್ರಗಳನ್ನು ಯಾವುದೇ ಪೂರ್ವ-ಸಿದ್ಧತೆಯಿಲ್ಲದೆ ಉಲ್ಲೇಖಿಸಿದರು. ಆಯತದ ಕರ್ಣ ಮತ್ತು ಅದರ ಬಾಹುಗಳ ಉದ್ದದ ನಡುವಿನ ಸಂಬಂಧವನ್ನು ವಿವರಿಸಿದರು. ಅದು ಪೈಥಾಗೋರಸ್ ಪ್ರಮೇಯಕ್ಕೆ ಸಮಾನವಾದುದು; ಆದರೆ ಸ್ವತಂತ್ರವಾಗಿ ಮತ್ತು ಪೈಥಾಗೋರಸ್‌ಗಿಂತ ಪೂರ್ವದಲ್ಲಿಯೇ ಸಾಧಿಸಲಾಗಿತ್ತು. ಜೊತೆಗೆ, 2ರ ವರ್ಗಮೂಲವನ್ನು ಗಣಿಸುವ ಒಂದು ವಿಧಾನವನ್ನೂ ವಿವರಿಸಿದರು. ತಮ್ಮ ವಿವರಣೆಯ ಸಂದರ್ಭದಲ್ಲಿ ಶುಲ್ಬ-ಸೂತ್ರಗಳ ಮೇಲಿನ ಆಪಸ್ತಂಬ ಋಷಿಗಳ ಎರಡು ವ್ಯಾಖ್ಯಾನಗಳನ್ನೂ ಆಧಾರವಾಗಿ ಥಟ್ಟನೆ ಬಳಸಿದರು. ವೈದಿಕ ಕರ್ಮಗಳಿಗೆ ಯಜ್ಞವೇದಿಗಳನ್ನು ನಿರ್ಮಿಸುವುದಕ್ಕೆ ಸಂಬಂಧಿಸಿದ ಪ್ರಾಚೀನ ಶುಲ್ಬ-ಸೂತ್ರಗಳ ಗಣಿತೀಯ ಕೊಡುಗೆಗಳನ್ನು ವಿವರಿಸಿದ ಬಳಿಕ, 'ಸಂಖ್ಯೆಯಾಗಿ ಶೂನ್ಯದ ಪರಿಕಲ್ಪನೆಯೂ ನಾವು ಹೆಮ್ಮೆಪಡಬಹುದಾದ ಮತ್ತೊಂದು ಉದಾಹರಣೆ. ಅದನ್ನು ಅರ್ಥಮಾಡಿಕೊಂಡು ವಿವರಿಸಿದ ಪ್ರಥಮ ದೇಶ ನಮ್ಮದು', ಎಂದರು. ಶೂನ್ಯವನ್ನು ಎಷ್ಟು ಶ್ಲಾಘನೀಯವಾಗಿ ಅರ್ಥಮಾಡಿಕೊಳ್ಳಲಾಗಿತ್ತು ಎಂಬುದನ್ನು ಎತ್ತಿ ತೋರಿಸಲು, ಬ್ರಹ್ಮಗುಪ್ತರ ಬ್ರಹ್ಮ-ಸ್ಫುಟ-ಸಿದ್ಧಾಂತದ ಹಲವು ಶ್ಲೋಕಗಳನ್ನು ನೆನಪಿನಿಂದ ಉಲ್ಲೇಖಿಸಿ ವಿವರಿಸಿದರು. ನಿಖರತೆ ಮತ್ತು ಸತ್ಯನಿಷ್ಠೆಗೆ ಅತ್ಯಂತ ಬದ್ಧರಾಗಿದ್ದ ಗುರುಗಳು, ಬ್ರಹ್ಮಗುಪ್ತರ, 'ಖಂ ಖಭಕ್ತಂ ಖಮ್ — ಶೂನ್ಯವನ್ನು ಶೂನ್ಯದಿಂದ ಭಾಗಿಸಿದರೆ ಶೂನ್ಯ', ಎಂಬ ತಪ್ಪಾದ ಪ್ರತಿಪಾದನೆಯೊಂದನ್ನು ಪ್ರಸ್ತಾಪಿಸಿದರು. ಅನಂತರ ಅವರು ಸ್ಪಷ್ಟಪಡಿಸಿದರು: 'ಪ್ರಾಚೀನ, ಶ್ಲಾಘನೀಯ, ಭಾರತೀಯ ಸಾಧನೆಯ ಒಂದು ಉದಾಹರಣೆ-ಯನ್ನು ನೀಡುವಾಗಲೂ, ನಾನು ಉದ್ದೇಶಪೂರ್ವಕವಾಗಿ ಒಂದು ದೋಷವನ್ನು ಸೂಚಿಸಿದೆ. ನನ್ನ ಅಭಿಪ್ರಾಯವೇನೆಂದರೆ, ಪ್ರತಿಕೂಲ ದತ್ತಾಂಶವನ್ನು ನಿರ್ಲಕ್ಷಿಸದೆ ವಾಸ್ತವಾಂಶಗಳಿಗೆ ಬದ್ಧರಾಗಿರುವುದು, ಹಾಗೂ ಕಾಲ್ಪನಿಕ ಪ್ರತಿಪಾದನೆಗಳು ಮತ್ತು ವ್ಯಾಖ್ಯಾನಗಳ ಬಗ್ಗೆ ಎಚ್ಚರಿಕೆಯನ್ನು ವಹಿಸುವುದು ಉತ್ತಮ.' ಅನಂತರ ಅವರು ಬಹಳ ಹಿಂದೆಯೇ ನಮ್ಮ ದೇಶವು ವೈದ್ಯಕೀಯ ಕ್ಷೇತ್ರದಲ್ಲಿ ಸಾಧಿಸಿದ್ದ ಎರಡು ಮುಂಚೂಣಿ ಸಾಧನೆಗಳನ್ನು ಉಲ್ಲೇಖಿಸಿದರು. ಸುಶ್ರುತ-ಸಂಹಿತೆಯ ಶ್ಲೋಕಗಳನ್ನು ಉದ್ಧರಿಸಿ, ಕಣ್ಣಿನ ಪೊರೆಯ ಶಸ್ತ್ರಚಿಕಿತ್ಸೆ ಹೇಗೆ ಮಾಡಲಾಗುತ್ತಿತ್ತು ಮತ್ತು ಕತ್ತರಿಸಿದ ಮೂಗುಗಳನ್ನು ಹೇಗೆ ಪುನರ್ನಿರ್ಮಿಸಲಾಗುತ್ತಿತ್ತು ಎಂಬುದನ್ನು ವಿವರಿಸಿದರು. ಕೊನೆಗೆ, ಎಂಜಿನಿಯರಿಂಗ್ ಕ್ಷೇತ್ರದಲ್ಲಿ ನಮ್ಮ ರಾಷ್ಟ್ರದ ಭೂತಕಾಲದ ದೊಡ್ಡ ಸಾಧನೆಗಳನ್ನು ಉದಾಹರಿಸುವ ಸಲುವಾಗಿ, ದೆಹಲಿಯ ಕಬ್ಬಿಣದ ಸ್ತಂಭ ಮತ್ತು ಎಲ್ಲೋರಾದ ಕೈಲಾಸ ದೇವಾಲಯದ ಕುರಿತು ಮಾತನಾಡಿದರು.[1]

[1] Scientific Evidence – Vedantic Light ಎಂಬ ಪುಸ್ತಕವು ಪ್ರಾಧ್ಯಾಪಕರು ಗುರುಗಳೊಂದಿಗೆ ನಡೆಸಿದ ಸಂಭಾಷಣೆಯ ವಿವರವಾದ ದಾಖಲೆಯನ್ನು ಒಳಗೊಂಡಿದೆ. ಈ ಪುಸ್ತಕದ ಡಿಜಿಟಲ್ ಆವೃತ್ತಿಯನ್ನು ಉಚಿತವಾಗಿ ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು:
https://www.centreforbrahmavidya.org/acharyas/sri-abhinava-vidyatheertha-mahaswamiji/scientific-evidence-vedantic-light.html?v=3.9

1984ರ ಜನವರಿಯ ಕೊನೆಯ ವಾರದಲ್ಲಿ ನಾನು ಗುರುಗಳಲ್ಲಿ ವಿನಯಪೂರ್ವಕವಾಗಿ ಈ ಕೆಳಕಂಡ ಪ್ರಾರ್ಥನೆಯನ್ನು ಸಲ್ಲಿಸಿದೆ. 'ಗುರುಗಳು ಅನುಮತಿಸಿದರೆ, ತಮಗೆ ಅನುಕೂಲವಾದ ಸಮಯದಲ್ಲಿ, ಮೆದುಳಿನ ಕುರಿತಾದ ಮಾಹಿತಿಯನ್ನು ಮತ್ತು ಅದು ಮನಸ್ಸು ಹಾಗೂ ಚೈತನ್ಯದ ಮೇಲೆ ಬೀರುವ ವ್ಯಾಪಕ ಪರಿಣಾಮವನ್ನೂ ಸಂಕ್ಷೇಪವಾಗಿ 30—45 ನಿಮಿಷಗಳಲ್ಲಿ ವಿವರಿಸುತ್ತೇನೆ. ಅನಂತರ ಮನಸ್ಸು ಮತ್ತು ಚೈತನ್ಯದ ಕುರಿತು ಶಾಸ್ತ್ರದ ಬೋಧನೆಯಲ್ಲಿ ಆ ದತ್ತಾಂಶಕ್ಕೆ ಅವಕಾಶವಿದೆಯೇ ಅಥವಾ ಅದಕ್ಕೆ ಹೊಂದಿಕೆಯಾಗುವುದಿಲ್ಲವೇ ಎಂಬುದರ ಕುರಿತು ಗುರುಗಳು ಬೆಳಕು ಚೆಲ್ಲುವಂತೆ ವಿನಂತಿಸಿಕೊಳ್ಳುತ್ತೇನೆ.' ಅದಕ್ಕೆ ಗುರುಗಳು, 'ಯಾವಾಗ ಹೇಳಬೇಕೆಂದು ನಿನಗೆ ತಿಳಿಸುತ್ತೇನೆ', ಎಂದರು. ಜನವರಿ 30ರಂದು ಅವರು ಬೆಂಗಳೂರಿನ ಸಮೀಪದ ಸೊಂಡೆಕೊಪ್ಪಕ್ಕೆ ತೆರಳಿದರು. ಫೆಬ್ರವರಿ 3ರಂದು ಮಧ್ಯಾಹ್ನ ಸುಮಾರು 3 ಗಂಟೆಗೆ ಅವರು ನನ್ನನ್ನು ತಮ್ಮ ಕೋಣೆಗೆ ಕರೆಸಿಕೊಂಡರು. 'ಈಗ ಮೆದುಳಿನ ಬಗ್ಗೆ ಹೇಳು', ಎಂದು ಅವರು ನನಗೆ ಹೇಳಿ, ಮೇಲಾಗಿ, 'ನೀನು ಮೆದುಳಿನ ಚಿತ್ರಗಳನ್ನು ಸೊಂಡೆಕೊಪ್ಪಕ್ಕೆ ನಿನ್ನೊಡನೆ ತಂದಿದ್ದೀಯಲ್ಲವೇ? ಹೋಗಿ ಅವುಗಳನ್ನು ತಂದುಕೊ', ಎಂದರು. ನಾನು ತಕ್ಷಣವೇ ಪುಸ್ತಕಗಳಿಂದ ಮೆದುಳಿನ ಚಿತ್ರಗಳ ಛಾಯಾಪ್ರತಿಗಳಿದ್ದ ಮೂರು ಹಾಳೆಗಳನ್ನು ಹಿಡಿದು ಬಂದೆ. ಗುರುಗಳು ಅವುಗಳನ್ನು ನನ್ನಿಂದ ಪಡೆದು, ಚಿತ್ರಗಳನ್ನು ನೋಡಿ, ಚಿತ್ರವೊಂದರಲ್ಲಿದ್ದ ಬಲಪಾರ್ಶ್ವದ ಪೆರೈಟಲ್ ಲೋಬ್-ಅನ್ನು (parietal lobe-ಅನ್ನು) ತೋರಿಸಿ, 'ಇದಕ್ಕೆ ಹಾನಿಯಾದರೆ ಉಂಟಾಗುವ ಒಂದು ಪರಿಣಾಮವನ್ನು ಮೊದಲು ಹೇಳು', ಎಂದರು. ಅದಕ್ಕೆ ನಾನು ಉತ್ತರಿಸುತ್ತ, ಒಂದು ವೇಳೆ ಪಾರ್ಶ್ವವಾಯುವಿನಂತಹ ಕಾರಣದಿಂದ ಬಲಪಾರ್ಶ್ವದ ಪೆರೈಟಲ್ ಲೋಬ್-ಗೆ ಹಾನಿಯಾದರೆ, ಒಬ್ಬ ವ್ಯಕ್ತಿಯು ತನ್ನ ದೇಹದ ಎಡಭಾಗವನ್ನೂ ಎಡಪಾರ್ಶ್ವದ ದೃಶ್ಯಕ್ಷೇತ್ರವನ್ನೂ ನಿರ್ಲಕ್ಷಿಸಬಹುದು ಎಂದು ಹೇಳಿದೆ. ಅವನು ತನ್ನ ಮುಖದ ಬಲಪಾರ್ಶ್ವವನ್ನಷ್ಟೇ ಕ್ಷೌರ ಮಾಡಬಹುದು. ತನ್ನ ಕೂದಲಿನ ಅರ್ಧಭಾಗವನ್ನು ಬಾಚಿಕೊಳ್ಳದೆ ಬಿಡಬಹುದು. ತನ್ನ ತಟ್ಟೆಯ ಅರ್ಧಭಾಗದಿಂದ ಮಾತ್ರ ಊಟ ಮಾಡಬಹುದು. ಹೂವಿನಂತಹ ಒಂದು ಚಿತ್ರವನ್ನು ನಕಲು ಮಾಡಲು ಹೇಳಿದರೆ, ಅದರ ಬಲಭಾಗವನ್ನಷ್ಟೇ ಚಿತ್ರಿಸಬಹುದು. ಒಂದು ರೇಖೆಯನ್ನು ಅರ್ಧಕ್ಕೆ ವಿಭಜಿಸಲು ಹೇಳಿದರೆ, ತನ್ನ ಗುರುತನ್ನು ಅದರ ಬಲಪಾರ್ಶ್ವದ ಕಡೆಗೆ ಹಾಕಬಹುದು. ತನ್ನ ಎಡಕ್ಕೆ ಇರುವ ಪರೀಕ್ಷಕನು ಪ್ರಶ್ನಿಸಿದರೆ, ಎಡಕ್ಕೆ ತಿರುಗದೆ ಅಥವಾ ನೋಡದೆ ಉತ್ತರಿಸಬಹುದು. ಒಂದು ನಿರ್ದಿಷ್ಟ, ಪ್ರಸಿದ್ಧ ಸ್ಥಳವನ್ನು ಮನಸ್ಸಿನಲ್ಲಿ ಕಲ್ಪಿಸಿಕೊಂಡು, ಅಲ್ಲಿನ ನಿರ್ದಿಷ್ಟ ಸ್ಥಾನದಿಂದ ತಾನು ಕಂಡಿದ್ದನ್ನು ವಿವರಿಸಲು ಹೇಳಿದರೆ, ಎದುರು ಮತ್ತು ಬಲಭಾಗದಲ್ಲಿರುವ ರಚನೆಗಳನ್ನು ಉಲ್ಲೇಖಿಸ-ಬಹುದು; ಆದರೆ, ಮೆದುಳಿಗೆ ಹಾನಿಯಾಗದ ವ್ಯಕ್ತಿಯು ಉಲ್ಲೇಖಿಸುವ ಎಡಭಾಗದ ರಚನೆಗಳನ್ನು ಅವನು ಉಲ್ಲೇಖಿಸದೆ ಬಿಡಬಹುದು. ಇಂತಹ ವ್ಯಕ್ತಿಗಳಿಗೆ ಯಾವುದನ್ನಾದರೂ ತಾವು ನಿರ್ಲಕ್ಷಿಸುತ್ತಿದ್ದೇವೆ ಎಂಬ ಅರಿವು ಇರುವುದಿಲ್ಲ. ಈ ರೀತಿಯ ಒಂದು ಪಾರ್ಶ್ವದ ನಿರ್ಲಕ್ಷ್ಯಕ್ಕೆ ನೀಡಲಾಗುವ ಒಂದು ವಿವರಣೆಯೆಂದರೆ, ಸುತ್ತಮುತ್ತಲಿನ ಸ್ಥಳಕ್ಕೆ ಸಂಬಂಧಪಟ್ಟ ಗಮನವನ್ನು

ನಿರ್ದೇಶಿಸುವುದರಲ್ಲಿ ಪೆರೈಟಲ್ ಲೋಬ್-ಗಳು ಪಾತ್ರ ವಹಿಸುತ್ತವೆ ಮತ್ತು ಬಲಭಾಗದ ಪೆರೈಟಲ್ ಲೋಬ್-ಗೆ ಹಾನಿಯಾದಾಗ ಸುತ್ತಮುತ್ತಲಿನ ಎಡಪಾರ್ಶ್ವದತ್ತ ಗಮನವನ್ನು ನಿರ್ದೇಶಿಸುವ ಸಾಮರ್ಥ್ಯವು ಕುಂಠಿತವಾಗುತ್ತದೆ ಎಂಬುದು. ಆಗ ಗುರುಗಳು ಬಲಭಾಗದ ಮೆದುಳಿನ ಹಾನಿಯಿಂದ ಉಂಟಾಗುವಂತೆ, ಎಡಭಾಗದ ಮೆದುಳಿನ ಭಾಗಕ್ಕೆ ಹಾನಿಯಾದರೆ ಬಲಪಾರ್ಶ್ವದ ನಿರ್ಲಕ್ಷ್ಯವೂ ಉಂಟಾಗುತ್ತದೆಯೇ ಎಂದು ಕೇಳಿದರು. ಅದಕ್ಕೆ ನಾನು, 'ಬಹುತೇಕ ಸಂದರ್ಭಗಳಲ್ಲಿ ಹಾಗಾಗುವುದಿಲ್ಲ', ಎಂದೆ. ಅದಕ್ಕೆ ನೀಡಲಾಗಿರುವ ಒಂದು ಕಾರಣವನ್ನು ಹೀಗೆ ವಿವರಿಸಿದೆ: ಬಲಗೈಯನ್ನು ಪ್ರಧಾನವಾಗಿ ಬಳಸುವ ವ್ಯಕ್ತಿಯಲ್ಲಿ ಎಡಪಾರ್ಶ್ವದ ಸುತ್ತಮುತ್ತಲಿನ ಪ್ರದೇಶವು ಮೂಲಭೂತವಾಗಿ ಮೆದುಳಿನ ಬಲಭಾಗದ ವ್ಯಾಪ್ತಿಯಲ್ಲಿಯೇ ಇದ್ದರೂ, ಬಲಪಾರ್ಶ್ವದ ಸುತ್ತಮುತ್ತಲಿನ ಪ್ರದೇಶವನ್ನು ಬಲಭಾಗದ ಮೆದುಳೂ ಸಂಸ್ಕರಿಸುತ್ತದೆ. ಗುರುಗಳು ತಲೆಯಾಡಿಸಿದರು. ನಾನು ನನ್ನ ದತ್ತಾಂಶದ ನಿರೂಪಣೆಯನ್ನು ಮುಂದುವರಿಸಿ, 45 ನಿಮಿಷಗಳಲ್ಲಿ ಮುಗಿಸಿದೆ.

ಅನಂತರ ಪೂಜ್ಯ ಜಗದ್ಗುರುಗಳು ತಮ್ಮ ಉತ್ತರವನ್ನು ಹೀಗೆ ಆರಂಭಿಸಿದರು.

'ಮೆದುಳಿನ ಅವಸ್ಥೆಗಳಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಎಲ್ಲ ಬಗೆಯ ಯೋಚನೆ, ಭಾವನೆ, ಗ್ರಹಿಕೆ, ಸಚೇತನ (conscious) ಅನುಭವ, ಹಾಗೂ ಸಚೇತನ ಮತ್ತು ಅಸಚೇತನ ವರ್ತನೆಗಳನ್ನು (unconscious behaviour) ಉಂಟುಮಾಡಬಹುದು, ಅಥವಾ ಮಾರ್ಪಡಿಸಬಹುದು ಅಥವಾ ತಡೆಹಿಡಿಯಬಹುದು ಎಂಬುದು ಸ್ಥಾಪಿತವಾಗಿದೆ ಎಂದೇ ಇಟ್ಟುಕೊಳ್ಳೋಣ. ಆದರೂ, ಇದರಿಂದ ಮನಸ್ಸು ಮತ್ತು ಚೈತನ್ಯದ ಕುರಿತ ಶಾಸ್ತ್ರದ ಬೋಧನೆ ಯಾವುದೇ ರೀತಿಯಲ್ಲೂ ಸಡಿಲವಾಗುವುದಿಲ್ಲ.[1] ಇದಕ್ಕೆ ಕಾರಣವೇನೆಂದರೆ, ದೈಹಿಕ ಕಾರಕಗಳು ಮನಸ್ಸಿನ ಮೇಲೆ ಪರಿಣಾಮ ಬೀರಲಾರವು ಎಂದು ಶಾಸ್ತ್ರವು ಎಲ್ಲೂ ಹೇಳುವುದಾಗಲಿ, ಸೂಚಿಸುವುದಾಗಲಿ ಇಲ್ಲ. ಇದಕ್ಕೆ ವಿರುದ್ಧವಾಗಿ, ಸೇವಿಸಲ್ಪಡುವ ಆಹಾರ ವಸ್ತುಗಳಂತಹ ಭೌತಿಕ ಕಾರಕಗಳಿಂದ ಮನಸ್ಸು ವ್ಯಾಪಕವಾಗಿ ಪ್ರಭಾವಿತವಾಗುತ್ತದೆ ಎಂಬುದನ್ನೇ ಅದು ಸ್ಪಷ್ಟವಾಗಿ ತಿಳಿಸುತ್ತದೆ. ಉದಾಹರಣೆಯಾಗಿ ಹೇಳುವುದಾದರೆ, ದೇಹಕ್ಕೆ ಸಂಬಂಧಿಸಿದ ಅಂಶಗಳು ಸ್ಮರಣೆಯ ಮೇಲೆ ಯಾವುದೇ ಪ್ರಭಾವ ಬೀರುವುದಿಲ್ಲ ಎಂಬುದಾಗಿ ಶಾಸ್ತ್ರಗಳಲ್ಲಿ ಒಂದು ವೇಳೆ ಹೇಳಿದ್ದೇ ಆದರೆ, ಆಗ ಮೆದುಳಿಗೆ ಉಂಟಾಗುವ ಹಾನಿಯು ಸ್ಮರಣಾಶಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಲ್ಲುದು ಎಂದು ತಿಳಿದುಬರುವ ವಾಸ್ತವಾಂಶವು ಶಾಸ್ತ್ರಕ್ಕೆ ವಿರುದ್ಧವಾಗಿರುತ್ತಿತ್ತು. ಆದರೆ ಶಾಸ್ತ್ರವು ಈ ರೀತಿಯಾಗಿ ಹೇಳುವುದಿಲ್ಲ. ಮಾತ್ರವಲ್ಲ, ಯಾವುದೇ ಮಾನಸಿಕ ಕ್ರಿಯೆಯ ಮೇಲೆ ಎಷ್ಟರ ಮಟ್ಟಿನ ಪ್ರಭಾವ ಬೀರಬಹುದು ಎಂಬುದಕ್ಕೆ ಅದು ಯಾವುದೇ ಮಿತಿಯನ್ನೂ ಹೇಳುವುದಿಲ್ಲ. ದೇಹದಿಂದ ಭಿನ್ನವಾದ ನಿತ್ಯ

[1] ತಮಿಳಿನಲ್ಲಿ ಗುರುಗಳು ಹೇಳಿದ, ನಿಸ್ಸಂದಿಗ್ಧ, ನೇರ ಹಾಗೂ ಸಂಕ್ಷಿಪ್ತವಾದ ಆರಂಭಿಕ ವಾಕ್ಯದ ಅಕ್ಷರಶಃ ಅನುವಾದವಿದು.

ಜೀವಿಯೊಬ್ಬನಿದ್ದಾನೆ ಎಂದು ಶಾಸ್ತ್ರವು ಬೋಧಿಸುತ್ತದೆ. ಅವನು ಅವಿದ್ಯೆಯಿಂದಾಗಿ ಮನಸ್ಸು, ಇಂದ್ರಿಯಗಳು ಮತ್ತು ಪ್ರಾಣಗಳೊಂದಿಗೆ ಸಂಬಂಧವನ್ನು ಕಲ್ಪಿಸಿಕೊಂಡು, ತನ್ನ ಕರ್ಮಕ್ಕೆ ಅನುಗುಣವಾಗಿ ಒಂದು ದೇಹದಿಂದ ಮತ್ತೊಂದು ದೇಹಕ್ಕೆ ಸಂಚರಿಸುತ್ತಾನೆ. ಆದರೆ, ಅವನು ಸ್ವಭಾವತಃ ನಿರ್ವಿಕಾರಿ, ಅನಂತ ಚೈತನ್ಯಸ್ವರೂಪನು ಎಂದೂ ಶಾಸ್ತ್ರದಿಂದ ತಿಳಿದುಬರುತ್ತದೆ. ಶಾಸ್ತ್ರದ ಈ ಎಲ್ಲ ಬೋಧನೆಯು ಪ್ರತ್ಯಕ್ಷ ಮತ್ತು ಅನುಮಾನಗಳ ಪರಿಧಿಯನ್ನು ಮೀರಿದ ವಿಷಯಕ್ಕೆ ಸಂಬಂಧಿಸಿದೆ.[1] ಮೇಲಾಗಿ, ಶಾಸ್ತ್ರದ ಈ ಬೋಧನೆಯು ಈ ಎರಡು ಪ್ರಮಾಣಗಳ ವ್ಯಾಪ್ತಿಯನ್ನು ಮೀರಿರುವುದರಿಂದ, ಮೆದುಳಿಗೆ ಸಂಬಂಧಿಸಿದ ದತ್ತಾಂಶವು ಈ ಬೋಧನೆಯನ್ನು ನಿರಾಕರಿಸಲೂ ಸಾಧ್ಯವಿಲ್ಲ, ಸ್ಥಾಪಿಸಲೂ ಸಾಧ್ಯವಿಲ್ಲ. ಶಾಸ್ತ್ರದ ದೃಷ್ಟಿಯಲ್ಲಿ ನಾನು ಪರಿಗಣಿಸಬೇಕೆಂದು ನೀನು ಬಯಸಿದ್ದು ಮನಸ್ಸಿನ ಮೇಲೆ ಮೆದುಳಿನ ಪರಿಣಾಮಕ್ಕೆ ಸಂಬಂಧಿಸಿದ ದತ್ತಾಂಶವನ್ನು; ಆದ್ದರಿಂದ, ದೇಹದ ಮೇಲೆ ಮನಸ್ಸಿನ ಪರಿಣಾಮ ಹೇಗಿರುತ್ತದೆ ಎಂಬುದು ಇಲ್ಲಿ ಪ್ರಸಕ್ತವಲ್ಲ.'

ಈ ಪ್ರಾಸ್ತಾವಿಕ ಅಭಿಪ್ರಾಯಗಳನ್ನು ತಮಿಳಿನಲ್ಲಿ ನುಡಿದ ಬಳಿಕ ಗುರುಗಳು ಸಂಸ್ಕೃತದಲ್ಲಿ ತಮ್ಮ ಮಾತನ್ನು ಮುಂದುವರಿಸಿದರು. ಶಾಸ್ತ್ರವಾಕ್ಯಗಳು ಮತ್ತು ಭಗವತ್ಪಾದರ ಭಾಷ್ಯಗಳ ಉಲ್ಲೇಖಗಳ ಮೂಲಕ ಅವರು ಈ ಕೆಳಕಂಡ ಅಂಶಗಳನ್ನು ಶಾಸ್ತ್ರಕ್ಕೆ ಅನುಸಾರವಾಗಿ ಸ್ಥಾಪಿಸಿದರು: ಒಂದು ಜನ್ಮದಿಂದ ಮತ್ತೊಂದಕ್ಕೆ ಜೀವಿಯೊಂದಿಗೆ ಪಯಣಿಸುವ ಸೂಕ್ಷ್ಮವಾದ ಮನಸ್ಸಿನ ಚಟುವಟಿಕೆಗೆ ದೇಹದ ಅವಶ್ಯಕತೆಯಿದೆ; ಮನಸ್ಸಿನ ಚಟುವಟಿಕೆಯ ಮೇಲೆ ಸೇವಿಸಲ್ಪಡುವ ಆಹಾರದ ಪ್ರಭಾವವಿದೆ; ಮನಸ್ಸಿನ ಸ್ಥಿತಿಗಳಾದ ಕನಸುಗಳ ಮತ್ತು ಕನಸಿಲ್ಲದ ಗಾಢ ನಿದ್ರೆಯ ಆರಂಭದಲ್ಲಿ ದೈಹಿಕ ಕಾರಕಗಳ ಪಾತ್ರವಿದೆ; ದೈಹಿಕ ಕಾರಕಗಳು ಮನಸ್ಸಿನ ವಿಕೃತಿಗೂ ಕಾರಣವಾಗಬಲ್ಲವಾಗಿದ್ದು ಶರೀರಕ್ಕೆ ಕೊಟ್ಟ ಔಷಧಿಗಳು ಅಸ್ತವ್ಯಸ್ತಗೊಂಡ ಮನಸ್ಸಿನ ಮೇಲೆ ಅನುಕೂಲಕರ ಪರಿಣಾಮವನ್ನು ಬೀರಬಲ್ಲವು; ಮತ್ತು ಅನುಭವಗಳು ಉಂಟುಮಾಡುವ ಮಾನಸಿಕ ಸಂಸ್ಕಾರಗಳ ಅಭಿವ್ಯಕ್ತಿಯು ದೇಹ ಮತ್ತು ಅದರ ಸ್ಥಿತಿಯನ್ನು ಅವಲಂಬಿಸಿದೆ. ಮೇಲ್ಕಂಡ ಈ ಐದು ರೀತಿಯ ನಿದರ್ಶನಗಳಿಂದ ಗುರುಗಳು ದೈಹಿಕ ಕಾರಕಗಳಿಂದ ಮನಸ್ಸು ವ್ಯಾಪಕವಾಗಿ ಪ್ರಭಾವಿತವಾಗಬಹುದು; ಹಾಗೆ ಪ್ರಭಾವಿತವಾಗುವುದು ಶಾಸ್ತ್ರಸಮ್ಮತವೂ ಆಗಿದೆ ಎಂಬುದನ್ನು ತೋರಿಸಿಕೊಟ್ಟರು.

ಗುರುಗಳು ಬಳಿಕ ಮನಸ್ಸು, ಶುದ್ಧಚೈತನ್ಯಸ್ವರೂಪನಾದ ಆತ್ಮ, ಜೀವ, ಅವಿದ್ಯೆಯ ಕಾರಣ ಚೈತನ್ಯ ಮತ್ತು ಮನಸ್ಸುಗಳ ತಪ್ಪಾದ ತಾದಾತ್ಮ್ಯ, ಹಾಗೂ ಸುಷುಪ್ತಿಯಲ್ಲಿ ಚೈತನ್ಯ — ಇವುಗಳ ಕುರಿತು ಶಾಸ್ತ್ರದ ನಿರೂಪಣೆಯನ್ನು ಆಳವಾಗಿ ವಿವರಿಸಿದರು. ಆ ನಂತರ, ಮೆದುಳಿಗೆ ಸಂಬಂಧಪಟ್ಟ ಯಾವುದೇ ದತ್ತಾಂಶವೂ ಮನಸ್ಸು ಮತ್ತು ಚೈತನ್ಯದ ಕುರಿತ ಶಾಸ್ತ್ರಬೋಧನೆಗೆ ವಿರುದ್ಧವಾಗಿಲ್ಲ ಎಂಬುದನ್ನು ಸ್ಥಾಪಿಸಲು ಚೌಕಟ್ಟನ್ನು ರೂಪಿಸಿ ತಳಹದಿಯನ್ನು ನಿರ್ಮಿಸಿದರು.

[1] ಭಗವತ್ಪಾದರು ತಮ್ಮ ಬೃಹದಾರಣ್ಯಕ-ಉಪನಿಷತ್ತಿನ ಭಾಷ್ಯದಲ್ಲಿ ಇದನ್ನು ತೋರಿಸಿದ್ದಾರೆ.

ಮುಂದುವರಿಸಿ, ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳಿಗೆ, ಅವುಗಳ ಉಪವಿಭಾಗಗಳಿಗೆ ಹಾಗೂ ಸೆಳೆತಗಳೊಂದಿಗೆ (convulsions) ಅಥವಾ ಅವುಗಳಿಲ್ಲದೆ ಉಂಟಾಗುವ ಅಚೇತನ ಸ್ಥಿತಿಗಳಿಗೆ ಸಂಬಂಧಪಟ್ಟ ಶಾಸ್ತ್ರಪಂಕ್ತಿಗಳನ್ನು ಪರಿಗಣಿಸಿದರು. ಇದರ ಮೂಲಕ, ನಿದ್ರೆಯಲ್ಲಿ ನಡೆಯುವಿಕೆ (sleepwalking) ಮುಂತಾದ ಸ್ಥಿತಿಗಳನ್ನೂ ಒಳಗೊಂಡಿರುವಷ್ಟು ವ್ಯಾಪಕವಾಗಿ ಸ್ಥಿತಿಗಳ ವರ್ಗೀಕರಣ ಶಾಸ್ತ್ರದಲ್ಲಿದೆ ಎಂಬುದನ್ನು ತೋರಿಸಿದರು. ಮೂರು ಶಾಸ್ತ್ರೀಯ ನಿರೂಪಣೆಗಳನ್ನು ಉಲ್ಲೇಖಿಸಿ, ಅವುಗಳ ಬೆಳಕಿನಲ್ಲಿ ದೈಹಿಕ ಕಾರಣಗಳಿಂದ ಮನಸ್ಸಿನ ಮೇಲಿನ ಪ್ರತಿಕೂಲ ಪರಿಣಾಮಗಳು, ಮೇಲಾಗಿ ಆ ಬಳಿಕ ಅವುಗಳ ನೆನಪು ಉಳಿಯದ ಅಸಹಜ ವರ್ತನೆಗಳು ಶಾಸ್ತ್ರದ ಬೋಧನೆಗೆ ವಿರುದ್ಧವಲ್ಲ ಎಂಬುದನ್ನು ತೋರಿಸಿದರು. ನಂತರ, ಪ್ರಾಣದ ಪಾತ್ರವನ್ನು ವಿವರವಾಗಿ ಪರಿಗಣಿಸಿ, ಸಚೇತನ ಅರಿವು (conscious awareness) ಇಲ್ಲದ ಕ್ರಿಯೆಗಳನ್ನು ಶಾಸ್ತ್ರವು ಗುರುತಿಸುತ್ತದೆ ಎಂಬುದನ್ನು ಶಾಸ್ತ್ರವಾಕ್ಯಗಳ ಬೆಳಕಿನಲ್ಲಿ ತೋರಿಸಿದರು. ಅನಂತರ, ಗ್ರಹಿಕೆ, ಹೆಮಿ-ನೆಗ್ಲೆಕ್ಟ್ (ಮೆದುಳಿನ ಒಂದು ಬದಿಯ ಹಾನಿಯಿಂದ ಉಂಟಾಗುವ ವ್ಯಕ್ತಿಯ ಒಂದು ಪಾರ್ಶ್ವದ ನಿರ್ಲಕ್ಷ್ಯ) ಮತ್ತು ಮೆದುಳಿನ ಎಡ-ಬಲ ಅರ್ಧಗಳನ್ನು ಬೇರ್ಪಡಿಸಿದ ಸ್ಥಿತಿಗೆ ಸಂಬಂಧಿಸಿದ ದತ್ತಾಂಶವು ಶಾಸ್ತ್ರಕ್ಕೆ ವಿರುದ್ಧವಾಗಿಲ್ಲ ಎಂಬುದನ್ನೂ ತೋರಿಸಿದರು.[1]

ಈ ಮೂರನೆಯ ಶ್ಲೋಕದ ಮೂರನೆಯ ಪಾದವು ಗುರುಗಳು ತಮ್ಮನ್ನು ನಮಿಸುವವರ ಪೀಡೆಗಳನ್ನು ನೀಗಿಸುವಲ್ಲಿ ದಕ್ಷರು ಎಂಬುದನ್ನು ಸೂಚಿಸುತ್ತದೆ — ಒಮ್ಮೆಯಾದರೂ ದೂರದಿಂದಲೇ ಆಗಲಿ ಮನಸ್ಸಿನಲ್ಲಿ ಅವರಿಗೆ ನಮಸ್ಕರಿಸುವುದೇ ಅವರ ಕೃಪೆಯಿಂದ ಕ್ಲೇಶಮುಕ್ತರಾಗಲು ಪರ್ಯಾಪ್ತವಾಗಿದೆ. ಅತ್ಯಂತ ಸೂಕ್ತವಾಗುವ ರೀತಿಯಲ್ಲಿ ನಾನಾ ಸಂದರ್ಭಗಳಲ್ಲಿ ಅವರನ್ನು ಬೇಡಿಕೊಂಡವರ ದೈಹಿಕ ಮತ್ತು ಮಾನಸಿಕ ಸಮಸ್ಯೆಗಳನ್ನು ಅವರು ದೂರಮಾಡಿದ ಹಲವು ಉದಾಹರಣೆಗಳು ಇಲ್ಲಿವೆ.

ಸೈನ್ಯದಲ್ಲಿ ಸೇವೆ ಸಲ್ಲಿಸಿದ್ದ ಒಬ್ಬ ವ್ಯಕ್ತಿ ಗುರುಗಳ ದರ್ಶನಕ್ಕೆ ಬಂದನು. ತನ್ನಿಂದ ಜನರ ಸಾವು ಸಂಭವಿಸಿದೆ ಎಂಬ ಭಾವನೆಯಿಂದ ಅವನು ಪೀಡಿತನಾಗಿದ್ದನು. ಅತ್ಯಂತ ತೀವ್ರವಾದ ಮಾನಸಿಕ ಯಾತನೆಯನ್ನು ಅನುಭವಿಸುತ್ತಿದ್ದನು. ಸಾಂಪ್ರದಾಯಿಕ ಹಿಂದೂ ಕುಟುಂಬಕ್ಕೆ ಸೇರಿದ ಅವನು ಲಕ್ಷ್ಮೀನೃಸಿಂಹ-ಕರಾವಲಂಬ-ಸ್ತೋತ್ರವನ್ನು ಕಂಠಸ್ಥ ಮಾಡಿಕೊಂಡಿದ್ದನು ಮತ್ತು ಗುರುಗಳ ಕೋಣೆಗೆ ಪ್ರವೇಶಿಸುವಾಗ ಅದನ್ನು ಗಟ್ಟಿಯಾಗಿ ಪಠಿಸಿದನು. ಗುರುಗಳು ಅವನೊಂದಿಗೆ ಕರುಣೆಯಿಂದ ಮಾತನಾಡಿದರು. ಅದಕ್ಕೆ ಪ್ರತಿಯಾಗಿ ಅವನು, "ಸ್ವಾಮೀಜಿ, ನಾನು ಜನರನ್ನು ಕೊಂದು ತನ್ಮೂಲಕ ಕ್ಷಮಿಸಲಾಗದ ಪಾಪವನ್ನು ಎಸಗಿದ್ದೇನೆ. ನಾನು ಸಾಯಲು ಅರ್ಹ", ಎಂದು ಗೋಳಿಟ್ಟನು. ಅವನು ತನ್ನ ಮನದಾಳದ ನೋವನ್ನು ತೋಡಿಕೊಂಡು ಮುಗಿಸಿದ ಬಳಿಕ ಗುರುಗಳು ಅನಿರೀಕ್ಷಿತವಾದುದನ್ನು ಮಾಡಿದರು. ಅವರು

[1] Scientific Evidence – Vedantic Light ಎಂಬ ಪುಸ್ತಕದಲ್ಲಿ ಗುರುಗಳಿಗೆ ಪ್ರಸ್ತುತಪಡಿಸಲಾದ ಮೆದುಳಿಗೆ ಸಂಬಂಧಪಟ್ಟ ದತ್ತಾಂಶಗಳನ್ನು ಮತ್ತು ಅವುಗಳಲ್ಲಿ ಯಾವುದೂ ಶಾಸ್ತ್ರದ ಬೋಧನೆಗೆ ವಿರುದ್ಧವಾಗಿಲ್ಲ ಎಂಬುದನ್ನು ಅವರು ಸ್ಥಾಪಿಸಿದುದನ್ನು ವಿಸ್ತಾರವಾಗಿ ವಿವರಿಸಲಾಗಿವೆ.

ತಮ್ಮ ಎರಡೂ ಕೈಗಳನ್ನು ಆ ವ್ಯಕ್ತಿಯ ತಲೆಯ ಮೇಲಿಟ್ಟು, "ನೀನು ಮನೋವ್ಯಥೆಯಿಂದ ಮುಕ್ತನಾಗುವೆ; ಚಿಂತಿಸಬೇಡ", ಎಂದರು. ಅವನು ಈ ಅನಿರೀಕ್ಷಿತ ಅನುಗ್ರಹದಿಂದ ಅತಿ ಹರ್ಷಿತನಾದನು. ಅದೇ ಕ್ಷಣದಲ್ಲಿ ದೀರ್ಘಕಾಲದಿಂದ ಅವನನ್ನು ಕಾಡುತ್ತಿದ್ದ ಯಾತನೆ ಶಮನವಾಯಿತು. ಮನಸ್ಸಿನಲ್ಲಿ ಶಾಂತಿಯನ್ನು ಪಡೆದು ಅವನು ತೆರಳಿದನು.

1977ರಲ್ಲಿ ಕೆ. ವಿ. ಸಂತಾನಗೋಪಾಲಾಚಾರಿಯರ್ ಅವರು ಬರೆದ ಹಾಗೂ ಆ ಬಳಿಕ ಒಂದು ಸ್ಮರಣಸಂಚಿಕೆಯರಲ್ಲಿ ಪ್ರಕಟಿಸಲ್ಪಟ್ಟ ಲೇಖನವು ಮುಂದಿನ ವೃತ್ತಾಂತಕ್ಕೆ ಮೂಲವಾಗಿದೆ.

ಗುರುಗಳು ರಾಮೇಶ್ವರ ಕ್ಷೇತ್ರದ ಪ್ರವಾಸದಲ್ಲಿದ್ದಾಗ ಅವರ ದರ್ಶನಕ್ಕೆ ಅಲ್ಲಾ ಪಾಷಾ ಮತ್ತು ಇಬ್ರಾಹಿಂ ಎಂಬಿಬ್ಬರು ಮುಸಲ್ಮಾನರು ಬಂದರು. ಅಲ್ಲಾ ಪಾಷಾ ಅವರ ಪತ್ನಿಗೆ ಆರು ಬಾರಿ ಗರ್ಭಪಾತವಾಗಿತ್ತು ಮತ್ತು ಆ ದಂಪತಿಗೆ ಮಕ್ಕಳಿರಲಿಲ್ಲ. ಸಂತಾನವನ್ನು ಪಡೆಯುವ ಬಯಕೆಯಿಂದ ಅವನು ಗುರುಗಳ ಆಶೀರ್ವಾದವನ್ನು ಪಡೆಯಲು ಬಂದಿದ್ದನು. ಗುರುಗಳು ಅವನಿಗೆ, "ನಿನಗೊಂದು ಒಳ್ಳೆಯ ಗಂಡು ಮಗು ಹುಟ್ಟುತ್ತದೆ", ಎಂದು ಆಶೀರ್ವದಿಸಿದರು. ಕಾಲಕ್ರಮೇಣ ಆ ದಂಪತಿಗೆ ಪುತ್ರಸಂತಾನವಾಯಿತು ಎಂದು ಹೇಳಬೇಕಿಲ್ಲವಷ್ಟೆ.

ಅಲ್ಲಿದ್ದ ಇಬ್ರಾಹಿಂ ತನ್ನ ವ್ಯಾಪಾರದಲ್ಲಿ ಯಾರೋ ತನಗೆ ಬಹಳ ತೊಂದರೆ ಮಾಡುತ್ತಿದ್ದಾರೆ ಎಂದು ಗುರುಗಳಲ್ಲಿ ನಿವೇದಿಸಿದನು. ಅವನು ಅತ್ಯಂತ ನಿರಾಶನಾಗಿದ್ದನು ಮತ್ತು ತನ್ನ ಉದ್ಯಮವನ್ನು ಮುಚ್ಚಬೇಕಾದ ಪರಿಸ್ಥಿತಿಯ ಅಂಚಿಗೆ ತಲುಪಿದ್ದನು. ಗುರುಗಳು, "ನಿನ್ನ ಎಲ್ಲ ಸಮಸ್ಯೆಗಳೂ ನಿವಾರಣೆಯಾಗುತ್ತವೆ ಮತ್ತು ನೀನು ಸಂತೋಷವಾಗಿರುವೆ", ಎಂದು ಹೇಳಿದರು. ತೊಂದರೆ ಕೊಡುತ್ತಿದ್ದ ವ್ಯಕ್ತಿ ಶೀಘ್ರದಲ್ಲೇ ದೂರವಾದನು. ಹಾಗಾಗಿ ಇಬ್ರಾಹಿಂನ ಉದ್ಯಮವು ಯಾವುದೇ ಅಡೆತಡೆಗಳಿಲ್ಲದ್ದಾಗಿ ಚೇತರಿಸಿಕೊಂಡಿತು; ಮೇಲಾಗಿ ಅದು ಬೆಳೆಯಲು ದಾರಿ ಸುಗಮವಾಯಿತು.

ತಮ್ಮ ಪ್ರಾರ್ಥನೆಗಳು ಈಡೇರಿದ ಬಳಿಕ, ಅಲ್ಲಾ ಪಾಷಾ ಮತ್ತು ಇಬ್ರಾಹಿಂ ಇಬ್ಬರೂ ಶೃಂಗೇರಿಗೆ ಹೋಗಿ ಪಾದಪೂಜೆಯನ್ನು (ಪರಮಗುರುಗಳ — ಗುರುಗಳ ಗುರುಗಳ — ಪಾದುಕೆಗಳಿಗೆ ಪೂಜೆಯನ್ನು) ಸಲ್ಲಿಸಲು ಗುರುಗಳ ಅನುಮತಿಯನ್ನು ಕೋರಿದರು. ಆಗ ಗುರುಗಳು, ಇಸ್ಲಾಂ ಧರ್ಮದ ತತ್ತ್ವಗಳಿಗೆ ಆ ಪೂಜಾವಿಧಾನವು ಹೊಂದಿಕೆಯಾಗುವುದಿಲ್ಲವಾದ ಕಾರಣ, ಪಾದಪೂಜೆ ಮಾಡಬಾರದೆಂದು ಅವರಿಗೆ ಸಲಹೆಯಿತ್ತರು. ಆಗ ಅವರು ಮಠಕ್ಕೆ ಕಾಣಿಕೆಯನ್ನು ಸಲ್ಲಿಸಲು ಅನುಮತಿ ನೀಡಬೇಕೆಂದು ವಿನಂತಿಸಿದರು. ಗುರುಗಳು ಅವರ ಭಕ್ತಿಪೂರ್ವಕ ಪ್ರಾರ್ಥನೆಯನ್ನು ಮನ್ನಿಸಿ, ಅವರನ್ನು ಆಶೀರ್ವದಿಸಿದರು.

ಒಮ್ಮೆ ಗುರುಗಳು ಮಂಗಳೂರಿನ ಬಳಿಯ ಕೋಟೆಕಾರಿನಲ್ಲಿ ಮೊಕ್ಕಾಮು ಮಾಡುತ್ತಿದ್ದರು. ಮಧ್ಯಾಹ್ನ 2.30ರ ಸುಮಾರಿಗೆ ತಮ್ಮ ಖಾಸಗಿ ಕೋಣೆಯಲ್ಲಿ ಕುಳಿತಿದ್ದರು. ಒಂದು ವೃತ್ತಾಂತದ ಬಗ್ಗೆ ನನಗೆ ಹೇಳುತ್ತಿದ್ದ ಅವರು ಥಟ್ಟನೆ ಎದ್ದು, ಕಟ್ಟಡದ ಮುಂಭಾಗದಲ್ಲಿರುವ ತೆರೆದ

ಅಂಗಳಕ್ಕೆ ಹೋಗುವ ಬಾಗಿಲಿನತ್ತ ನಡೆದು ಅದನ್ನು ತೆರೆದರು. ಕ್ಷಣಗಳಲ್ಲಿ ಒಬ್ಬ ವ್ಯಕ್ತಿ ಅಲ್ಲಿಗೆ ಓಡೋಡಿ ಬಂದ. ಆತ ಬೆವರುತ್ತಿದ್ದ; ಅವನ ಅಂಗಿ ಮತ್ತು ಷರಾಯಿ ಕೊಳಕಾಗಿದ್ದವು; ಅವನ ಹಣೆಯಲ್ಲಿ ಗಾಯದ ಪಟ್ಟಿ ಕಟ್ಟಿತ್ತು. ಗುರುಗಳು ಮೃದುವಾಗಿ ಅವನನ್ನು, 'ಯಾರಪ್ಪ ನೀನು? ಏನು ಬೇಕು?' ಎಂದು ಕೇಳಿದರು. ಆತ, 'ದಯವಿಟ್ಟು ಕಾಪಾಡಿ...', ಎಂದು ಗೋಗರೆದ; ಆದರೆ ಅವನು ಬಿಕ್ಕಿ ಬಿಕ್ಕಿ ಅಳಲು ಪ್ರಾರಂಭಿಸಿದ್ದರಿಂದ ಮುಂದೇನೂ ಹೇಳಲು ಅವನಿಗೆ ಸಾಧ್ಯವಾಗಲಿಲ್ಲ. ಅವನು ಇನ್ನೇನನ್ನೂ ಹೇಳದಿದ್ದರೂ, ಗುರುಗಳು ತಾವಾಗಿಯೇ ಅವನಿಗೆ, 'ನಿನ್ನ ಮಗ ಶೀಘ್ರದಲ್ಲೇ ಸುಧಾರಿಸುತ್ತಾನೆ. ಚಿಂತಿಸಬೇಡ', ಎಂದರು. ನಂತರ ಅವನಿಗೆ ಕಾಯುವಂತೆ ಸನ್ನೆ ಮಾಡಿ, ಗುರುಗಳು ಒಳಗೆ ಹೋಗಿ ಎರಡು ದೊಡ್ಡ ಪ್ಯಾಕೆಟ್ ಗೋಡಂಬಿ ಮತ್ತು ಒಂದು ದೊಡ್ಡ ಪ್ಯಾಕೆಟ್ ಬಾದಾಮಿಯನ್ನು ತಂದು, ಅವುಗಳನ್ನು ಅವನಿಗೆ ಕೊಟ್ಟು, 'ಕೆಲವು ದಿನಗಳ ಬಳಿಕ, ಇವುಗಳಲ್ಲಿ ಸ್ವಲ್ಪವನ್ನು ಪ್ರತಿದಿನ ನಿನ್ನ ಮಗನಿಗೆ ಕೊಡು', ಎಂದು ಹೇಳಿದರು. ಅವುಗಳನ್ನು ಗೌರವದಿಂದ ತೆಗೆದುಕೊಂಡ ಆತ ಗುರುಗಳಿಗೆ, 'ನನ್ನ ಮಗ ಆಸ್ಪತ್ರೆಯಲ್ಲಿದ್ದಾನೆ. ಅವನು ಕ್ಯಾನ್ಸರಿನಿಂದ ಬಳಲುತ್ತಿದ್ದಾನೆಂದು ವೈದ್ಯರು ಇಂದು ನನಗೆ ಹೇಳಿದರು', ಎಂದು ಹೇಳಿದ. 'ಇಲ್ಲಪ್ಪ, ಅವನಿಗೆ ಕ್ಯಾನ್ಸರ್ ಇಲ್ಲ. ಆಸ್ಪತ್ರೆಯಿಂದ ಶೀಘ್ರದಲ್ಲೇ ಮನೆಗೆ ಬರುತ್ತಾನೆ ಮತ್ತು ಆರೋಗ್ಯವಾಗುತ್ತಾನೆ', ಎಂದು ಗುರುಗಳು ಒತ್ತಿ ಹೇಳಿದರು. ಆತ ಕೈಜೋಡಿಸಿ, ಗುರುಗಳಿಗೆ ಧನ್ಯವಾದ ಹೇಳಿ ಅಲ್ಲಿಂದ ಹೊರಟುಹೋದನು. ಗುರುಗಳು ಬಾಗಿಲು ಮುಚ್ಚಿ, ತಮ್ಮ ಆಸನದಲ್ಲಿ ಮತ್ತೆ ಕುಳಿತು, ನನ್ನೊಂದಿಗೆ ಮಾತನ್ನು ಎಲ್ಲಿ ನಿಲ್ಲಿಸಿದ್ದರೋ ಅಲ್ಲಿಂದಲೇ ಮುಂದುವರಿಸಿದರು.

ಮರುದಿನ ಸಂಜೆ ಗುರುಗಳು ತಮ್ಮ ಸಂಜೆಯ ವಿಹಾರವನ್ನು ಪೂರ್ಣಗೊಳಿಸುತ್ತಿರುವಾಗ, ದೂರದಲ್ಲಿ ಆತ ಕೈಮುಗಿದು ನಿಂತಿದ್ದನ್ನು ಅವರು ನೋಡಿದರು. ಗುರುಗಳು ಅವನನ್ನು ನೋಡಿ ಮುಗುಳ್ನಕ್ಕು ಕಟ್ಟಡದೊಳಗೆ ಹೋದರು. ಆತ ನಿಂತಲ್ಲಿಯೇ ಇದ್ದನು. ಗುರುಗಳು ತಮ್ಮ ಸಾಯಂಕಾಲದ ಸ್ನಾನಕ್ಕಾಗಿ ಹೋದ ನಂತರ, ನಾನು ಹೊರಗೆ ಬಂದಾಗ, ಆ ವ್ಯಕ್ತಿ ನನ್ನ ಬಳಿ ಬಂದು, 'ನಿನ್ನೆ ಸಂಜೆ ನಾನು ಇಲ್ಲಿಂದ ಆಸ್ಪತ್ರೆಗೆ ಮರಳಿದ ಮೇಲೆ, ವೈದ್ಯರು ಬಂದು, "ಏನೋ ತಪ್ಪಾಗಿದೆ; ವೈದ್ಯಕೀಯ ತಪಾಸಣೆ ವರದಿಗಳು ಅದಲುಬದಲಾಗಿವೆ. ನಿನ್ನ ಮಗನಿಗೆ ಕ್ಯಾನ್ಸರ್ ಇಲ್ಲ. ಅವನನ್ನು ಎರಡು ದಿನಗಳಲ್ಲಿ ಆಸ್ಪತ್ರೆಯಿಂದ ಬಿಡುಗಡೆ ಮಾಡಬಹುದು. ಅವನನ್ನು ಮನೆಗೆ ಕರೆದೊಯ್ದ ಬಳಿಕ ಅವನಿಗೆ ಉತ್ತಮ ಪೌಷ್ಟಿಕ ಆಹಾರವನ್ನು ಕೊಡು", ಎಂದು ಹೇಳಿದರು. ನಾನು ಸ್ವಾಮಿಗೆ ಅತ್ಯಂತ ಕೃತಜ್ಞನಾಗಿದ್ದೇನೆ. ನಾನು ಇಂದು ಅವರಿಗೆ ತೊಂದರೆ ಕೊಡಲು ಬಯಸದಿದ್ದ ಕಾರಣ, ದೂರದಲ್ಲಿದ್ದೆ', ಎಂದು ಹೇಳಿದ. ನಿರಾತಂಕನಾಗಿ ಹೀಗೆಂದು ನನಗೆ ಹೇಳಿ ದಯವಿಟ್ಟು ಇದನ್ನು ಸ್ವಾಮಿಗೆ ತಿಳಿಸಿ ಎಂದನು. ಅವನ ವಿಷಯವನ್ನು ಗುರುಗಳಿಗೆ ನಿವೇದಿಸುತ್ತೇನೆ ಎಂದು ನಾನು ಉತ್ತರಿಸಿದೆ. ನಾನು ಹೊರಡಲು ಪ್ರಾರಂಭಿಸುತ್ತಿದ್ದಂತೆ, ಆತ ಮಾತು ಮುಂದುವರಿಸಿದ: 'ನಾನೊಬ್ಬ ಕ್ರೈಸ್ತಮತದವನು. ನನ್ನ ಮಗನಿಗೆ ಕ್ಯಾನ್ಸರ್ ಇದೆ ಎಂದು ಕೇಳಿಬಂದ ಮೇಲೆ ನನಗೆ ಆಘಾತವಾದಾಗ, ನನ್ನ ಹಿಂದೂ ಸ್ನೇಹಿತನೊಬ್ಬ ಆಶೀರ್ವಾದಕ್ಕಾಗಿ

ಸ್ವಾಮಿಯ ಬಳಿ ಹೋಗೆಂದು ಹೇಳಿದ. ಅದಕ್ಕಾಗಿಯೇ ನಾನು ನಿನ್ನೆ ಇಲ್ಲಿಗೆ ಧಾವಿಸಿದೆ. ನಾನು ಹಾಗೆ ಮಾಡಿದ್ದಕ್ಕೆ ನನಗೆ ಸಂತೋಷವಾಗಿದೆ.' ತರುವಾಯ ನಾನು ಈ ವಿಷಯವನ್ನು ಗುರುಗಳಿಗೆ ನಿವೇದಿಸಿದಾಗ, ಅವರು ಮೌನವಾಗಿ ಕೇಳಿಸಿಕೊಂಡರು.



ಶ್ಲೋಕ 4 ಮತ್ತು 5

ಭಗವಾನ್ ದಕ್ಷಿಣಾಮೂರ್ತಿ ಮತ್ತು
ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಪರಸ್ಪರ ಅಭಿನ್ನ

ವಟಮೂಲಂ ಪರಿತ್ಯಜ್ಯ ಶೃಙ್ಗಾದ್ರೌ ನಿವಸನ್ನಿಯಃ ।
ತತ್ತ್ವಂ ಬೋಧಯತೇ ಭಕ್ತಾನ್ದಕ್ಷಿಣಾಸ್ಯಂ ತಮಾಶ್ರಯೇ ॥ 4 ॥

[ಆಲದ ಮರದ ಬುಡದಲ್ಲಿನ (ತನ್ನ ಸ್ಥಾನವನ್ನು) ತೊರೆದು ಈಗ ಶೃಂಗೇರಿಯಲ್ಲಿ ನೆಲೆಸಿ ಭಕ್ತರಿಗೆ ಪರತತ್ತ್ವವನ್ನು (ಬ್ರಹ್ಮಜ್ಞಾನವನ್ನು) ಬೋಧಿಸುತ್ತಿರುವ ಭಗವಾನ್ ದಕ್ಷಿಣಾಮೂರ್ತಿ-ಯಾಗಿರುವ (ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು) ಅವರನ್ನು ಆಶ್ರಯಿಸುತ್ತೇನೆ.]

ವಿಷಯಾಶಾಂ ಪರಿತ್ಯಜ್ಯ ವೈರಾಗ್ಯಂ ಪರಮಂ ಶ್ರಿತಾಃ ।
ಮುನಯೋ ಯತ್ಕೃಪಾಭಾಜಸ್ತಂ ವಿದ್ಯಾತೀರ್ಥಮಾಶ್ರಯೇ ॥ 5 ॥

[ವಿಷಯಗಳ ಎಲ್ಲ ಬಯಕೆಗಳನ್ನೂ ತೊರೆದು ಪರಮವೈರಾಗ್ಯದಲ್ಲಿ ಸ್ಥಿತರಾದ ಧ್ಯಾನನಿರತ ಮುನಿಗಳನ್ನು (ದಕ್ಷಿಣಾಮೂರ್ತಿಯಾಗಿ) ಯಾರು ಅನುಗ್ರಹಿಸಿದರೋ, ಆ (ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ) ವಿದ್ಯಾತೀರ್ಥರನ್ನು ಆಶ್ರಯಿಸುತ್ತೇನೆ.]

ಭಗವಾನ್ ದಕ್ಷಿಣಾಮೂರ್ತಿಯು ತನ್ನ ವಾಸಸ್ಥಾನವಾದ ವಟವೃಕ್ಷದ ಬುಡವನ್ನು ತೊರೆದು ಈಗ ಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ರೂಪದಲ್ಲಿ ಶೃಂಗೇರಿಯಲ್ಲಿ ನೆಲೆಸಿ, ಅಲ್ಲಿ ಭಕ್ತರಿಗೆ ಪರಬ್ರಹ್ಮದ ಜ್ಞಾನವನ್ನು ಬೋಧಿಸುತ್ತಿದ್ದಾನೆ ಎಂಬುದನ್ನು ನಾಲ್ಕನೆಯ ಶ್ಲೋಕವು ತಿಳಿಸುತ್ತದೆ. ಮೇಲಾಗಿ, ಗುರುಗಳೇ ಆಲದ ಮರದ ಬುಡದಲ್ಲಿ ದಕ್ಷಿಣಾಮೂರ್ತಿಯಾಗಿ ಪರಮವೈರಾಗ್ಯಶಾಲಿಗಳಾದ ಧ್ಯಾನನಿರತ ಮುನಿಗಳಿಗೆ ತತ್ತ್ವವನ್ನು ಬೋಧಿಸಿದವರು ಎಂಬುದನ್ನು ಐದನೆಯ ಶ್ಲೋಕವು ಸೂಚಿಸುತ್ತದೆ. ಅಂದಮೇಲೆ, ಈಗ

ದಕ್ಷಿಣಾಮೂರ್ತಿಯೇ ಗುರುಗಳ ರೂಪದಲ್ಲಿ ಜ್ಞಾನವನ್ನು ಬೋಧಿಸುತ್ತಿರುವುದು; ಪೂರ್ವದಲ್ಲಿ, ಅವರೇ ದಕ್ಷಿಣಾಮೂರ್ತಿಯ ರೂಪದಲ್ಲಿ ಬೋಧಿಸಿದ್ದರು — ಎಂದು ಸೂಚಿಸಿದಂತಾಗುತ್ತದೆ. ಈ ಎರಡು ಶ್ಲೋಕಗಳು ಸೇರಿ ಹೀಗೆ ಭಗವಾನ್ ದಕ್ಷಿಣಾಮೂರ್ತಿ ಮತ್ತು ಗುರುಗಳು ಅಭಿನ್ನರು ಎಂಬುದನ್ನು ಸ್ಪಷ್ಟವಾಗಿ ಪ್ರತಿಪಾದಿಸುತ್ತವೆ.

ನಾಲ್ಕನೆಯ ಶ್ಲೋಕದಲ್ಲಿ ಆಲದ ಮರದ ಹಾಗೂ ಐದನೆಯ ಶ್ಲೋಕದಲ್ಲಿ ಧ್ಯಾನನಿರತ ಮುನಿಗಳ ಉಲ್ಲೇಖವು ಮಹತ್ವವುಳ್ಳದ್ದಾಗಿದೆ; ಏಕೆಂದರೆ, ಶಾಸ್ತ್ರವಚನಗಳು ಭಗವಾನ್ ದಕ್ಷಿಣಾ-ಮೂರ್ತಿಯನ್ನು ಆ ಮುನಿಗಳೊಂದಿಗೆ ಸಂಬಂಧಿಸಿ ನಿರೂಪಿಸಿವೆ; ಭಗವತ್ಪಾದರು ಕೂಡ ದಕ್ಷಿಣಾಮೂರ್ತಿಯನ್ನು ಅದೇ ರೂಪದಲ್ಲಿ ಸ್ತುತಿಸಿದ್ದಾರೆ; ಮಾತ್ರವಲ್ಲ, ದೇವಾಲಯಗಳಲ್ಲಿನ ವಿಗ್ರಹಗಳು ದಕ್ಷಿಣಾಮೂರ್ತಿಯನ್ನು ಹೀಗೆಯೇ ಚಿತ್ರಿಸುತ್ತವೆ. ಭಗವಾನ್ ದಕ್ಷಿಣಾಮೂರ್ತಿಯ ಕುರಿತ ಧ್ಯಾನವನ್ನು ಉಪದೇಶಿಸುವ ದಕ್ಷಿಣಾಮೂರ್ತಿ-ಉಪನಿಷತ್ತು ಹೀಗೆ ಹೇಳುತ್ತದೆ: 'ಫಣೀಂದ್ರಕಕ್ಷ್ಯಂ ಮುನಿಭಿಃ ಶುಕಾದ್ಯೈಃ ಸೇವ್ಯಂ ವಟಾಧಃ ಕೃತನೀಡಮೀಡೇ — ಸರ್ಪವನ್ನು ಒಡ್ಯಾಣವಾಗಿ ಧರಿಸಿರುವ, ಶುಕಾದಿ ಧ್ಯಾನನಿರತ ಮುನಿಗಳಿಂದ ಪೂಜಿಸಲ್ಪಡುವ ಹಾಗೂ ಆಲದ ಮರದಡಿಯಲ್ಲಿ ನೆಲೆಸಿರುವ ಭಗವಂತನನ್ನು ನಾನು ಸ್ತುತಿಸುತ್ತೇನೆ.'[1] ಅದೇ ರೀತಿ, ದಕ್ಷಿಣಾಮೂರ್ತಿಗೆ ಸಂಬಂಧಿಸಿದ ಒಂದು ಮಂತ್ರವನ್ನು ಕುರಿತು ನಾರದ-ಪುರಾಣವು ಹೀಗೆನ್ನುತ್ತದೆ: 'ಹಿಮಾಚಲತಟೇ ರಮ್ಯೇ.../...ಆದ್ಯೈಃ ಶುಕಾದ್ಯೈರ್ಮುನಿಭಿರಜಸ್ರ-ಸುಖಸೇವಿತೇ.../...ವಟವೃಕ್ಷಂ ಮಹೋಚ್ಛ್ರಾಯಂ.../...ತಸ್ಯ ಮೂಲೇ ಸುಸಂಕ್ಲೃಪ್ತ-ರತ್ನಸಿಂಹಾಸನೇ ಶುಭೇ ॥ ಆಸೀನಂ...ಸುಪ್ರಸನ್ನಂ ಹರಂ ಸ್ಮರೇತ್...ದಕ್ಷಿಣಾಮೂರ್ತಿ-ಸನ್ಜ್ಞಾನಾಚ್ಛಾಸ್ತ್ರವ್ಯಾಖ್ಯಾನಕೃದ್ಭವೇತ್ — ಮನೋಹರವಾದ ಹಿಮಾಲಯದ ಒಂದು ಶಿಖರದಲ್ಲಿ...ಶುಕಾದಿ ಮಹಾಮುನಿಗಳು ಆನಂದದಿಂದ ನಿರಂತರವಾಗಿ ಆಶ್ರಯಿಸುವ ಸ್ಥಳದಲ್ಲಿ...ಒಂದು ಬೃಹತ್ ಆಲದ ಮರವಿದೆ. ಅದರ ಬುಡದಲ್ಲಿ ಮಂಗಳಮಯವಾದ ರತ್ನಖಚಿತ ಸಿಂಹಾಸನದಲ್ಲಿ ಶಿವನು ಆಸೀನನಾಗಿದ್ದಾನೆ. ಸುಪ್ರಸನ್ನನಾದ ಅವನನ್ನು ಧ್ಯಾನಿಸಬೇಕು...ದಕ್ಷಿಣಾಮೂರ್ತಿಯನ್ನು ಹೀಗೆ ಧ್ಯಾನಿಸುವವನು ಶಾಸ್ತ್ರಗಳ ವ್ಯಾಖ್ಯಾನಕಾರನು ಆಗುತ್ತಾನೆ.'[2] ಭಗವಾನ್ ದಕ್ಷಿಣಾಮೂರ್ತಿಯ ಮತ್ತೊಂದು ಶಾಸ್ತ್ರೀಯ ನಿರೂಪಣೆಯಾದ, ಸ್ಕಂದ-ಪುರಾಣದ ಒಂದು ಭಾಗವೆಂದು ಪರಿಗಣಿಸಲ್ಪಡುವ ಸೂತ-ಸಂಹಿತೆ ಹೀಗೆ ಹೇಳುತ್ತದೆ: '...ವೇದಪಾರಗೈಃ । ಮುನಿಭಿಃ ಸಂವೃತಂ ಮಾಯಾವಟಮೂಲಾಶ್ರಿತಮ್ — ವೇದಗಳಲ್ಲಿ ಪಾರಂಗತರಾದ ಮುನಿಗಳಿಂದ ಸುತ್ತುವರೆಯಲ್ಪಟ್ಟವನು, ಮಾಯೆಯೆಂಬ ಆಲದ ಮರದ ಬುಡವನ್ನು ಆಶ್ರಯಿಸಿರುವವನು.'[3]

[1] ದಕ್ಷಿಣಾಮೂರ್ತಿ-ಉಪನಿಷತ್ 10

[2] ನಾರದ-ಪುರಾಣ 1.3.91.133; 137–138; 140–141; 143; 146

[3] ಸೂತ-ಸಂಹಿತಾ 3.4.42.26

ಆಲದ ಮರದ ಬುಡವನ್ನು ಮಾತ್ರವೇ ಭಗವಾನ್ ದಕ್ಷಿಣಾಮೂರ್ತಿಯ ವಾಸಸ್ಥಳವಾಗಿ ಮೇಲೆ ಉಲ್ಲೇಖಿಸಿದಂಥ ಶಾಸ್ತ್ರವಾಕ್ಯಗಳಲ್ಲಿ ಹೇಳಿರುವುದರಿಂದ, ಈ ನಾಲ್ಕನೆಯ ಶ್ಲೋಕವು, 'ವಟಮೂಲಂ ಪರಿತ್ಯಜ್ಯ — ಆಲದ ಮರದ ಬುಡವನ್ನು ತೊರೆದು', ಎಂದು ಹೇಳಿ, ತದನಂತರ ಗುರುಗಳ ರೂಪದಲ್ಲಿ, 'ಶೃಂಗಾದ್ರೌ ನಿವಸನ್ — ಶೃಂಗೇರಿಯಲ್ಲಿ ನೆಲೆಸಿ', ಎಂದು ಹೇಳುತ್ತದೆ. ಕಾಶಿಯ ನಿವಾಸಿ ಎಂದೆನಿಸಿಕೊಂಡ ವ್ಯಕ್ತಿಯೊಬ್ಬ ಬೇರೆ ಬೇರೆ ಸಂದರ್ಭಗಳಲ್ಲಿ ರಾಮೇಶ್ವರ, ಮಥುರಾ ಅಥವಾ ಸೋಮನಾಥಕ್ಕೆ ಪ್ರಯಾಣಿಸಿ, ಪ್ರತಿ ಬಾರಿಯೂ ತನ್ನ ಕಾಶಿಯ ನಿವಾಸಕ್ಕೆ ಹಿಂದಿರುಗಿದರೆ ಅವನನ್ನು ಕಾಶಿಯ ನಿವಾಸಿ ಎನ್ನುವುದು ಅಸಮಂಜಸವಲ್ಲ. ಅದೇ ರೀತಿ, ಭಗವಾನ್ ದಕ್ಷಿಣಾಮೂರ್ತಿಯು ಶೃಂಗೇರಿಯಲ್ಲಿ 'ನೆಲೆಸಿದ್ದಾರೆ' ಎಂಬ ಮಾತೂ ಮುಂದಿನ ವಾಸ್ತವ ಸಂಗತಿಗಳೊಂದಿಗೆ ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. 1954ರಿಂದ 1989ರವರೆಗೆ 35 ವರ್ಷಗಳ ಕಾಲ ಗುರುಗಳು 'ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾ ಪೀಠ'ವನ್ನು ಅದರ 35ನೆಯ 'ಜಗದ್ಗುರು ಶಂಕರಾಚಾರ್ಯ'ರಾಗಿ ಅಲಂಕರಿಸಿದ್ದರು; ಆ ಅವಧಿಯಲ್ಲಿ ಅವರು ಒಟ್ಟು 35 ವಿಜಯಯಾತ್ರೆಗಳನ್ನು ಕೈಗೊಂಡರು. ಈ ಯಾತ್ರೆಗಳ ಒಟ್ಟು ಅವಧಿ 16 ವರ್ಷಗಳಿಗಿಂತ ಹೆಚ್ಚಾಗಿತ್ತು. ಈ ಸ್ತೋತ್ರದ ರಚನೆಗೂ ಮುನ್ನವೇ ಅವರು 13.5 ವರ್ಷಗಳಿಗಿಂತಲೂ ಹೆಚ್ಚು ಕಾಲದ ವಿಜಯಯಾತ್ರೆಗಳನ್ನು ಕೈಗೊಂಡಿದ್ದರು. ಅವುಗಳಲ್ಲಿ ದಕ್ಷಿಣ ಭಾರತದ ಆರು ವರ್ಷ ನಾಲ್ಕು ತಿಂಗಳ ವಿಜಯಯಾತ್ರೆ, ನೇಪಾಳವನ್ನೂ ಒಳಗೊಂಡಿದ್ದ ಸುಮಾರು ನಾಲ್ಕು ವರ್ಷಗಳ ಅಖಿಲ-ಭಾರತ ವಿಜಯಯಾತ್ರೆ ಮತ್ತು ಒಂದು ವರ್ಷ ಎರಡು ತಿಂಗಳ ಮತ್ತೊಂದು ಅಖಿಲ-ಭಾರತ ವಿಜಯಯಾತ್ರೆ ಸೇರಿದ್ದವು. ಈ ಪ್ರವಾಸಗಳ ಸಂದರ್ಭದಲ್ಲಿ ಅವರು ಭಕ್ತರಿಗೆ ತತ್ತ್ವದ ಕುರಿತು ಪ್ರಭಾವಶಾಲಿ ಮತ್ತು ಸುಲಲಿತ ವಿವರಣೆ-ಗಳನ್ನು ಅನುಗ್ರಹಿಸಿದರು. ಇದರ ಎರಡು ಉದಾಹರಣೆಗಳು: 1966ರಲ್ಲಿ ಉಜ್ಜಯಿನಿಯಲ್ಲಿ ಚಾತುರ್ಮಾಸ್ಯವನ್ನು ಆಚರಿಸುತ್ತಿದ್ದಾಗ, ಅವರು ತೈತ್ತಿರೀಯ-ಉಪನಿಷತ್ತನ್ನು ಭಗವತ್ಪಾದರ ಭಾಷ್ಯ ಮತ್ತದರ 'ವನಮಾಲಾ' ಎಂಬ ಟೀಕೆಯೊಂದಿಗೆ ಸಂಪೂರ್ಣವಾಗಿ ಬೋಧಿಸಿದರು; ಮತ್ತು 1977ರಲ್ಲಿ ಚೆನ್ನೈಯಲ್ಲಿ ಮೊದಲೆರಡು ಬ್ರಹ್ಮಸೂತ್ರಗಳನ್ನು ಹಾಗೂ ಅವುಗಳ ಮೇಲಿನ ಭಗವತ್ಪಾದರ ಭಾಷ್ಯವನ್ನು ಆಧರಿಸಿ ಎರಡು ಅನುಗ್ರಹ ಭಾಷಣಗಳನ್ನು ನೀಡಿದರು. ಶೃಂಗೇರಿಯಲ್ಲಿ ತತ್ತ್ವವನ್ನು ಬೋಧಿಸಿದುದಕ್ಕೆ ಉದಾಹರಣೆಯಾಗಿ, 1979ರಲ್ಲಿ ಅವರು ಭಗವದ್ಗೀತೆಯನ್ನು ಭಗವತ್ಪಾದರ ಭಾಷ್ಯ ಮತ್ತು ಆನಂದಗಿರಿಗಳ ವ್ಯಾಖ್ಯಾನದೊಂದಿಗೆ ವಿವರಿಸಿದರು. ತದನಂತರ ಬ್ರಹ್ಮಸೂತ್ರಗಳನ್ನು ಭಗವತ್ಪಾದರ ಭಾಷ್ಯ ಮತ್ತು ರತ್ನಪ್ರಭಾ ವ್ಯಾಖ್ಯಾನದೊಂದಿಗೆ ಬೋಧಿಸಿದರು. ಅಂತೆಯೇ ನಾಲ್ಕನೆಯ ಶ್ಲೋಕವು ಭಗವಾನ್ ದಕ್ಷಿಣಾಮೂರ್ತಿಯ ನೂತನ ವಾಸಸ್ಥಳ ಮತ್ತು ರೂಪವನ್ನು ತಿಳಿಸಲೆಂದೇ 'ವಟಮೂಲಂ ಪರಿತ್ಯಜ್ಯ — ಆಲದ ಮರದ ಬುಡವನ್ನು ತೊರೆದು' ಮತ್ತು 'ಶೃಂಗಾದ್ರೌ ನಿವಸನ್ — ಶೃಂಗೇರಿಯಲ್ಲಿನೆಲೆಸಿ' ಎಂಬ ಸೂಕ್ತ ಪದಗಳನ್ನು ಬಳಸುತ್ತದೆ. ಅರ್ಥಾತ್ ಹಿಂದೆ ಯಾರು ಆಲದ ಮರದ ಬುಡದಲ್ಲಿ ಇದ್ದು ತತ್ತ್ವವನ್ನು ಬೋಧಿಸಿದರೋ ಅವರೇ ಈಗ ಶೃಂಗೇರಿಯಲ್ಲಿನೆಲೆನಿಂತು

ಗುರುಗಳಾಗಿ ಭಕ್ತರಿಗೆ ತತ್ತ್ವವನ್ನು ಬೋಧಿಸುತ್ತಿದ್ದಾರೆ. ಶ್ಲೋಕದಲ್ಲಿನ ಈ ಹೇಳಿಕೆಗೆ ಗುರುಗಳು ಪ್ರವಾಸಗಳನ್ನು ಕೈಗೊಂಡು ಇತರ ಸ್ಥಳಗಳಲ್ಲೂ ತತ್ತ್ವವನ್ನು ಬೋಧಿಸಿದರು ಎಂಬ ಸಂಗತಿಯು ಖಂಡಿತವಾಗಿಯೂ ವಿರುದ್ಧವಲ್ಲ.

ದಕ್ಷಿಣಾಮೂರ್ತಿ-ಉಪನಿಷತ್ತಿನಲ್ಲಿರುವ ಈ ಹಿಂದೆ ಉಲ್ಲೇಖಿಸಲ್ಪಟ್ಟಂತಹ ವಚನದಲ್ಲಿ ಭಗವಾನ್ ದಕ್ಷಿಣಾಮೂರ್ತಿಯನ್ನು ಶುಕಾದಿ ಧ್ಯಾನನಿರತ ಮುನಿಗಳಿಂದ ಸೇವಿತರಾದವರು ಎಂದು ತಿಳಿಸಲಾಗಿದೆ. ಶುಕಮಹರ್ಷಿಗಳನ್ನು ಶಾಸ್ತ್ರಗ್ರಂಥಗಳು ಏಕಕಂಠದಲ್ಲಿ ಅತ್ಯಂತ ವೈರಾಗ್ಯಶಾಲಿಗಳೆಂದು ವರ್ಣಿಸುತ್ತವೆ. ಉದಾಹರಣೆಗೆ, ಮಹಾಭಾರತವು ಅವರನ್ನು, 'ಸ್ಥಿರಬುದ್ಧಿರಲೋಲುಪಃ — ಸ್ಥಿರವಾದ ಬುದ್ಧಿಯುಳ್ಳವರೂ, ವಿಷಯಗಳ ಬಗೆಗೆ ಆಸಕ್ತಿ-ಯಿಲ್ಲದವರೂ',[1] ಎಂದು ವರ್ಣಿಸುತ್ತದೆ; ಭಾಗವತ-ಪುರಾಣವು, 'ಸ ವೈ ನಿವೃತ್ತಿನಿರತಃ ಸರ್ವತ್ರೋಪೇಕ್ಷಕೋ ಮುನಿಃ — ಅವರು ವಾಸ್ತವವಾಗಿ ನಿವೃತ್ತಿಯಲ್ಲಿ ನಿರತರಾದ, ಎಲ್ಲ ವಿಷಯಗಳಲ್ಲೂ ಉದಾಸೀನರಾಗಿದ್ದ ಮುನಿಗಳು',[2] ಎಂದು ಹೇಳುತ್ತದೆ. ಇದಲ್ಲದೆ, ದೇವಾಲಯಗಳಲ್ಲಿನ ದಕ್ಷಿಣಾಮೂರ್ತಿಯ ವಿಗ್ರಹಗಳಲ್ಲಿ ಬ್ರಹ್ಮನ ಮಾನಸಪುತ್ರರಾದ ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರರು ದಕ್ಷಿಣಾಮೂರ್ತಿಯ ಶಿಷ್ಯರಾಗಿ ಚಿತ್ರಿಸಲ್ಪಟ್ಟಿದ್ದಾರೆ. ಈ ನಾಲ್ಕು ಮುನಿಗಳೂ ಶಾಸ್ತ್ರಗ್ರಂಥಗಳಲ್ಲಿ ಅತ್ಯಂತ ವೈರಾಗ್ಯಶಾಲಿಗಳೆಂದು ವರ್ಣಿಸಲ್ಪಟ್ಟಿದ್ದಾರೆ. ಹೀಗಾಗಿ, ಭಗವಾನ್ ದಕ್ಷಿಣಾಮೂರ್ತಿಯ ಶಿಷ್ಯರು ಸಂಪೂರ್ಣವಾಗಿ ವೈರಾಗ್ಯಶಾಲಿಗಳಾಗಿದ್ದರು. ಇದನ್ನು ಒತ್ತಿಹೇಳುತ್ತಾ ಭಗವತ್ಪಾದರು ದಕ್ಷಿಣಾಮೂರ್ತಿಯ ಕುರಿತ ಒಂದು ಶ್ಲೋಕದಲ್ಲಿ ಹೀಗೆ ಹೇಳಿದ್ದಾರೆ: 'ಉಪಾಸತೇ ಯಂ ಮುನಯಶ್ಶುಕಾದ್ಯಾ ನಿರಾಶಿಷೋ ನಿರ್ಮಮತಾಧಿವಾಸಾಃ — ಯಾವುದೇ ಬಯಕೆಗಳಿಲ್ಲದವರೂ, (ತಮ್ಮ ದೇಹದ ಮೇಲೂ ಮಮಕಾರವಿಲ್ಲದ) ಶುಕರೇ ಮುಂತಾದ ಮುನಿಗಳು ಯಾರನ್ನು ಉಪಾಸಿಸುತ್ತಾರೋ.'[3] ಹೀಗೆ, ಆಲದ ಮರದ ಬುಡದಲ್ಲಿ ದಕ್ಷಿಣಾಮೂರ್ತಿಯ ರೂಪದಲ್ಲಿದ್ದ ಗುರುಗಳ ಅನುಗ್ರಹವನ್ನು ಪಡೆದವರು, 'ವೈರಾಗ್ಯಂ ಪರಮಂ ಶ್ರಿತಾಃ — ಪರಮವೈರಾಗ್ಯ-ಶಾಲಿಗಳಾದ ಧ್ಯಾನನಿರತ ಮುನಿಗಳು', ಎಂಬುದಾಗಿ ಐದನೆಯ ಶ್ಲೋಕವು ಅತ್ಯಂತ ಸೂಕ್ತವಾಗಿ ತಿಳಿಸುತ್ತದೆ.

ಪರಮವೈರಾಗ್ಯದ ಸ್ವರೂಪವೇನು? ಗಾಢನಿದ್ರೆಯಲ್ಲಿದ್ದಾಗ ಯಾರೂ ಯಾವುದನ್ನೂ ಬಯಸುವುದಿಲ್ಲ. ಅತ್ಯಂತ ಆಪ್ತನೂ ಪ್ರಿಯನೂ ಆದ ವ್ಯಕ್ತಿಯೊಬ್ಬನು ನಿಧನನಾದಾಗ, ಒಬ್ಬ ವ್ಯಕ್ತಿಯು ಕೆಲಕಾಲ ಎಲ್ಲ ವಿಷಯಗಳಲ್ಲೂ ಆಸಕ್ತಿಯನ್ನು ಕಳೆದುಕೊಂಡು ವಿರಕ್ತನಂತೆ ತೋರಬಹುದು. ಅಂತೆಯೇ, ಪ್ರಸವವೇದನೆಯಿಂದ ಬಳಲುತ್ತಿರುವ ಮಹಿಳೆಯೂ ಯಾವುದೇ

[1] ಮಹಾಭಾರತ (BORI ವಿಮರ್ಶಾತ್ಮಕ ಆವೃತ್ತಿ) 12.313.47

[2] ಭಾಗವತ-ಪುರಾಣ 1.7.9

[3] ದಕ್ಷಿಣಾಮೂರ್ತಿ-ಸ್ತೋತ್ರ 12

ಭೋಗವಸ್ತುಗಳಲ್ಲಿ ಆಸಕ್ತಿಯಿಲ್ಲದೆ ವಿರಕ್ತಳಂತೆ ಕಾಣಬಹುದು. ಆದರೆ ನಿಜಕ್ಕೂ ಇಂತಹ ಸಂದರ್ಭಗಳಲ್ಲಿ ಆಸೆಯಿಲ್ಲದಿರುವುದು ಕೇವಲ ತಾತ್ಕಾಲಿಕ. ಜ್ಞಾನ ಮತ್ತು ಮೋಕ್ಷವನ್ನು ಪಡೆಯಲು ಇಂತಹ ಕ್ಷಣಿಕ, ಪರಿಸ್ಥಿತಿಗಳನ್ನನುಸರಿಸಿ ಕಾಣಬರುವ ವೈರಾಗ್ಯವನ್ನು ಶಾಸ್ತ್ರವು ಅಗತ್ಯವಾದ ಪ್ರಮುಖ ಸಾಧನವೆಂದು ವಿಧಿಸುವುದಿಲ್ಲ. ವಿವೇಕದಿಂದ ಹುಟ್ಟಿದ ಸ್ಥಿರವಾದ ವೈರಾಗ್ಯವು ಮಾತ್ರ ಆಧ್ಯಾತ್ಮಿಕವಾಗಿ ಮಹತ್ವಪೂರ್ಣವಾದುದೆಂದು ಶಾಸ್ತ್ರವು ಹೇಳುತ್ತದೆ. ಆಲದ ಮರದ ಬುಡದಲ್ಲಿ ಭಗವಾನ್ ದಕ್ಷಿಣಾಮೂರ್ತಿಯ ಆಶ್ರಯ ಪಡೆದಿದ್ದ ಧ್ಯಾನನಿರತ ಮುನಿಗಳ ವೈರಾಗ್ಯವು ಇದೇ ರೀತಿಯದಾಗಿತ್ತು. ಮುಂಡಕ-ಉಪನಿಷತ್ತು ಇದನ್ನು ಹೀಗೆ ಬೋಧಿಸುತ್ತದೆ: 'ಪರೀಕ್ಷ್ಯ ಲೋಕಾನ್ಕರ್ಮಚಿತಾನ್ಬ್ರಾಹ್ಮಣೋ ನಿರ್ವೇದಮಾಯಾತ್ — ಕರ್ಮದಿಂದ ಪಡೆಯಬಹುದಾದ ಲೋಕಗಳನ್ನು (ಪ್ರತ್ಯಕ್ಷ, ಅನುಮಾನ, ಉಪಮಾನ ಮತ್ತು ಶಾಸ್ತ್ರವಚನಗಳ ಆಧಾರದ ಮೇಲೆ) ಪರಿಶೀಲಿಸಿ (ಅವುಗಳೆಲ್ಲವೂ ಅನಿತ್ಯ, ಕನಸಿಗೆ ಸಮಾನ ಹಾಗೂ ದುಃಖಬಾಧಿತ ಎಂದು ಗ್ರಹಿಸಿ) ಬ್ರಾಹ್ಮಣನು ವೈರಾಗ್ಯವನ್ನು ಹೊಂದಬೇಕು.'[1] ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದಲ್ಲಿ ನಿಜವಾದ ವೈರಾಗ್ಯದ ಸ್ವರೂಪ ಮತ್ತದರ ಕಾರಣವನ್ನು ಹೀಗೆ ನಿರೂಪಿಸಿದ್ದಾರೆ: 'ವೈರಾಗ್ಯಂ ನಾಮ ದೃಷ್ಟಾದೃಷ್ಟೇಷ್ಟಭೋಗೇಷು ದೋಷದರ್ಶನಾಭ್ಯಾಸಾದ್ವೈತೃಷ್ಣ್ಯಮ್ — ವೈರಾಗ್ಯವೆಂದರೆ ಇಹ-ಪರ ಲೋಕಗಳಲ್ಲಿ ಅಪೇಕ್ಷಿತವಾದ ಭೋಗಗಳಲ್ಲಿ ದೋಷಗಳನ್ನು ಕಾಣುವ ಅಭ್ಯಾಸದಿಂದ ಅವುಗಳಲ್ಲಿನ ಆಸೆಗಳಿಂದ ಬಿಡಿಸಿಕೊಳ್ಳುವುದು.'[2] ಲಿಂಗ-ಪುರಾಣದಲ್ಲಿ ಸನಕ ಮತ್ತು ಅವರ ಸಹೋದರರ ವಿವೇಕ ಹಾಗೂ ವೈರಾಗ್ಯವನ್ನು ಹೀಗೆ ವರ್ಣಿಸಲಾಗಿದೆ: 'ಅಲ್ಪಸೌಖ್ಯಂ ಬಹುಕ್ಲೇಶಂ ಜರಾಶೋಕಸಮನ್ವಿತಮ್। ಜೀವನಂ ಮರಣಂ ಚೈವ ಸಮ್ಭವಶ್ಚ ಪುನಃ ಪುನಃ...ವಿದಿತ್ವಾ... ತ್ರೀನ್ ಗುಣಾನ್ ಪಿತ್ವಾ...ಸನಕಾದಯಃ...ವೈವರ್ತೇನ ತು ಜ್ಞಾನೇನ ಪ್ರವೃತ್ತಾಸ್ತೇ...— ಅಲ್ಪಸುಖಗಳು, ಬಹುದುಃಖಗಳು, ಮುಪ್ಪಿನ ಶೋಕಗಳಿಂದ ಕೂಡಿದ ಹುಟ್ಟು-ಸಾವುಗಳು ಪದೇ ಪದೇ ಸಂಭವಿಸುತ್ತವೆ ಎಂಬುದನ್ನು ಮನಗಂಡು, ಸನಕ ಮತ್ತು ಅವರ ಸಹೋದರರು ಇಹ-ಪರಲೋಕಗಳಲ್ಲಿನ ಎಲ್ಲದರ ಬಗೆಗಿನ ಬಯಕೆಗಳನ್ನೂ ತೊರೆದು ಪರತತ್ತ್ವದ ಜ್ಞಾನಕ್ಕಾಗಿ ಪ್ರಯತ್ನಿಸಿದರು.'[3] ಮಹಾಭಾರತವು ಶುಕಮಹರ್ಷಿಗಳ ಕುರಿತು ಹೀಗೆನ್ನುತ್ತದೆ: '... ಶುಕೇನೋಕ್ತಂ ಸರ್ವತಃ ಪರಿಮುಚ್ಯತಾ । ಪ್ರತಿಷ್ಠತಾ ಮಹಾರಣ್ಯಂ...ಯಃ ಕಾಮಾನಾ-ಪ್ನುಯಾತ್ಸರ್ವಾನ್ಯಶ್ಚೈತಾನ್ಪೇವಲಾಂಸ್ತ್ಯಜೇತ್ । ಪ್ರಾಪಣಾತ್ಸರ್ವಕಾಮಾನಾಂ ಪರಿತ್ಯಾಗೋ ವಿಶಿಷ್ಯತೇ — ಎಲ್ಲವನ್ನೂ ತೊರೆದು ಮಹಾರಣ್ಯಕ್ಕೆ ತೆರಳುತ್ತಿದ್ದ ಶುಕರು, "ತಾನು ಬಯಸಿದ್ದನ್ನೆಲ್ಲ

---

[1] ಮುಂಡಕ-ಉಪನಿಷತ್ 1.2.12. ಈ ಮಂತ್ರದ ಅನುವಾದದಲ್ಲಿನ ಕೋಷ್ಟಕದಲ್ಲಿರುವ ಭಾಗವು ಭಗವತ್ಪಾದರ ಭಾಷ್ಯವನ್ನು ಆಧರಿಸಿದೆ.

[2] ಭಗವದ್ಗೀತಾ-ಭಾಷ್ಯ 6.35

[3] ಲಿಂಗ-ಪುರಾಣ 1.20.89–91

ಪಡೆಯುವವನ ಮತ್ತು ಎಲ್ಲ ಬಯಕೆಗಳನ್ನೂ ತೊರೆಯುವವನ — ಅಂದರೆ, ಎಲ್ಲ ಬಯಕೆಗಳೂ ಈಡೇರುವುದರ ಮತ್ತು ಅವುಗಳ ಸಂಪೂರ್ಣ ತ್ಯಾಗದ — ನಡುವೆ ತ್ಯಾಗವೇ ಶ್ರೇಷ್ಠ", ಎಂದರು.'[1] ಶುಕ, ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರರಂತಹ ಭಗವಾನ್ ದಕ್ಷಿಣಾಮೂರ್ತಿಯ ಶಿಷ್ಯರ ತೀವ್ರ ವೈರಾಗ್ಯವು ಅಚಲವಾಗಿತ್ತು ಮತ್ತು ಆತ್ಮ-ಸಾಕ್ಷಾತ್ಕಾರಕ್ಕೆ ಅನುಕೂಲಕರವಾಗಿತ್ತು. ಅದು ವಿವೇಕವೆಂಬ ದೃಢ ತಳಹದಿಯ ಮೇಲೆ ನಿಂತಿತ್ತು. ಶಾಸ್ತ್ರಗ್ರಂಥಗಳ ಪ್ರಕಾರ, ಈ ವಿವೇಕ ಅವರಿಗೆ ಸಹಜವಾಗಿತ್ತು; ಅದರ ಫಲವಾಗಿ ಅವರು ವಿಷಯಗಳ ಮೇಲಿನ ಸಕಲ ಬಯಕೆಗಳನ್ನು ತ್ಯಜಿಸಿದ್ದರು. ಇದರತ್ತ ಗಮನವನ್ನು ಸೆಳೆಯುತ್ತ, ಈ ಐದನೆಯ ಶ್ಲೋಕವು, ಆಲದ ಮರದ ಬುಡದಲ್ಲಿ ದಕ್ಷಿಣಾಮೂರ್ತಿಯ ರೂಪದಲ್ಲಿದ್ದ ಗುರುಗಳ ಅನುಗ್ರಹವನ್ನು ಪಡೆದ ಧ್ಯಾನನಿರತ ಮುನಿಗಳು, 'ವಿಷಯಾಶಾಂ ಪರಿತ್ಯಜ್ಯ — ವಿಷಯಗಳ ಬಗೆಗಿನ ಎಲ್ಲ ಬಯಕೆಗಳನ್ನೂ ತೊರೆದು, ಪರಮವೈರಾಗ್ಯದಲ್ಲಿ ಸ್ಥಿತರಾಗಿ', ಇದ್ದರು ಎಂದು ಎತ್ತಿಹೇಳುತ್ತಿದೆ.

ಗುರುಗಳ ರೂಪದಲ್ಲಿನ ಭಗವಾನ್ ದಕ್ಷಿಣಾಮೂರ್ತಿಯು ಭಕ್ತರಿಗೆ ಪರಮತತ್ತ್ವವನ್ನು ಮುಖತಃ ಬೋಧಿಸುವುದನ್ನು 'ಬೋಧಯತೇ — ಬೋಧಿಸುತ್ತಾನೆ' ಎಂಬ ಪದದಿಂದ ನಾಲ್ಕನೆಯ ಶ್ಲೋಕದಲ್ಲಿ ಸ್ಪಷ್ಟಪಡಿಸಲಾಗಿದೆ. ಇದಕ್ಕೆ ವಿಲಕ್ಷಣವಾಗಿ, ಐದನೆಯ ಶ್ಲೋಕದಲ್ಲಿ, ಭಗವಾನ್ ದಕ್ಷಿಣಾಮೂರ್ತಿಯ ರೂಪದಲ್ಲಿರುವ ಗುರುಗಳು ಧ್ಯಾನನಿರತ ಮುನಿಗಳಿಗೆ ಜ್ಞಾನವನ್ನು ನೀಡಿದುದನ್ನು, 'ಯತ್ಕೃಪಾಭಾಜಃ — ಅವರ ಅನುಗ್ರಹಕ್ಕೆ ಪಾತ್ರರಾದವರು', ಎಂದಷ್ಟೇ ಹೇಳುವ ಮೂಲಕ ಸೂಚಿಸಲಾಗಿದೆ. ಗುರುಗಳ ರೂಪದಲ್ಲಿ ತತ್ತ್ವದ ಬೋಧನೆಯು ಮೌನದಿಂದಲ್ಲ, ಮಾತುಗಳಿಂದ ಇದ್ದುದೇ ಇದಕ್ಕೆ ಕಾರಣ. ದಕ್ಷಿಣಾಮೂರ್ತಿಯ ಕುರಿತ ಪ್ರಸಿದ್ಧವೂ ಪ್ರಮಾಣಭೂತವೂ ಆದ ಒಂದು ಶ್ಲೋಕದ ಉತ್ತರಾರ್ಧವು ಹೀಗಿದೆ: 'ಗುರೋಸ್ತು ಮೌನಂ ವ್ಯಾಖ್ಯಾನಂ ಶಿಷ್ಯಾಸ್ತು ಛಿನ್ನಸಂಶಯಾಃ — ಗುರುವಿನ ಮೌನವು ಉಪದೇಶ; ಆದರೂ ಶಿಷ್ಯರ ಸಂಶಯಗಳು ಅಳಿದುಹೋಗುತ್ತವೆ.' ಭಗವತ್ಪಾದರು ತಮ್ಮ ಬ್ರಹ್ಮಸೂತ್ರ-ಭಾಷ್ಯದಲ್ಲಿ, ಬಾಷ್ಕಲಿಯು ಶಿಷ್ಯನಾಗಿ ಬಾಧ್ವ ಋಷಿಯ ಬಳಿಗೆ ಬಂದು, 'ನನಗೆ ಬ್ರಹ್ಮವನ್ನು ಬೋಧಿಸಿ', ಎಂದು ಕೇಳಿದ ಒಂದು ವೈದಿಕ ಆಖ್ಯಾಯಿಕೆಯತ್ತ ಗಮನ ಸೆಳೆದಿದ್ದಾರೆ. ಬಾಧ್ವರು ಮೌನವಾಗಿದ್ದರು. ಬಾಷ್ಕಲಿಯು ಮತ್ತೆ ಅದೇ ವಿನಂತಿಯನ್ನು ಮಾಡಿದನು; ಬಾಧ್ವರು ಮೌನವಾಗಿಯೇ ಉಳಿದರು. ಮೂರನೆಯ ಬಾರಿ ಬಾಷ್ಕಲಿಯು ಕೇಳಲು, ಬಾಧ್ವರು, 'ಬ್ರೂಮಃ ಖಲು ತ್ವಂ ತು ನ ವಿಜಾನಾಸಿ / ಉಪಶಾನ್ತೋಽಯಮಾತ್ಮಾ — ನಾವು ಬೋಧಿಸಿದೆವು; ಆದರೆ ನೀನು ಅರ್ಥಮಾಡಿಕೊಳ್ಳಲಿಲ್ಲ. ಆತ್ಮವು ಪರಮ ಶಾಂತವಾದುದು',[2] ಎಂಬುದಾಗಿ ಉತ್ತರಿಸಿದರು.

[1] ಮಹಾಭಾರತ 12.171.15–16

[2] ಬ್ರಹ್ಮಸೂತ್ರ-ಭಾಷ್ಯ 3.2.17

1987ರ ಸೆಪ್ಟೆಂಬರ್ 1 ಮತ್ತು 2ರಂದು ಬೆಂಗಳೂರಿನಲ್ಲಿ ಗುರುಗಳು ಕನ್ನಡದಲ್ಲಿ ನೀಡಿದ ಎರಡು ಅನುಗ್ರಹ ಭಾಷಣಗಳಲ್ಲಿನ ಕೆಲವು ಅಂಶಗಳನ್ನು ಸಂಯೋಜಿಸಿ ಇಲ್ಲಿ ನೀಡಲಾಗಿದೆ. 'ದಕ್ಷಿಣಾಮೂರ್ತಿಯು ಎಲ್ಲಿ ನೆಲೆಸಿದ್ದಾನೆ? ಹಿಮಾಲಯದ ಶಿಖರದಲ್ಲಿ. ಅಲ್ಲೊಂದು ದೊಡ್ಡ ಆಲದ ಮರವಿದೆ. ಅದರ ನೆರಳಿನಲ್ಲಿ ಕುಳಿತಿದ್ದಾನೆ. ಹೇಗೆ ಕುಳಿತಿದ್ದಾನೆ? ಒಂದು ಕೈಯಲ್ಲಿ ಚಿನ್ಮುದ್ರೆಯನ್ನು (ಬಲಗೈ ತೋರುಬೆರಳನ್ನು ಬಾಗಿಸಿ ಹೆಬ್ಬೆರಳಿಗೆ ತಾಗಿಸಿ ಮಿಕ್ಕ ಮೂರು ಬೆರಳುಗಳನ್ನು ಮೇಲ್ಮುಖವಾಗಿ ಇರಿಸುವ ಮುದ್ರೆಯನ್ನು) ಧರಿಸಿದ್ದಾನೆ. ಇನ್ನೊಂದು ಕೈಯಲ್ಲಿ ಪುಸ್ತಕವಿದೆ. ತನ್ನ ಎಲ್ಲ ಇಂದ್ರಿಯಗಳನ್ನು ಸಂಪೂರ್ಣವಾಗಿ ವಶಪಡಿಸಿಕೊಂಡಿದ್ದಾನೆ. ಅವನ ದೇಹವೂ ಅಚಲವಾಗಿದೆ. ಭಗವಂತನ ಕಣ್ಣುಗಳು ಸ್ವಲ್ಪ ತೆರೆದಿವೆ. ದೇಹದಲ್ಲಿ ಯಾವುದೇ ಚಟುವಟಿಕೆಯಿಲ್ಲ. ಮೌನವೇ ಅವನ ಉಪದೇಶದ ವಿಧಾನ. ಶಿಷ್ಯನು ಯಾವುದೇ ಪ್ರಶ್ನೆಯನ್ನು ಕೇಳುವ ಅಗತ್ಯವಿಲ್ಲ. ಗುರುವು ಯಾವುದೇ ಉತ್ತರವನ್ನೂ ಮಾತಿನ ಮೂಲಕ ನೀಡುವ ಅಗತ್ಯವಿಲ್ಲ. ಅಂಥ ಗುರುವಿನ ಮುಂದೆ ಕುಳಿತರೆ ಶಕ್ತಿಪಾತ (ಆಧ್ಯಾತ್ಮಿಕ ಶಕ್ತಿಯ ಅವತರಣ, ಅನುಗ್ರಹದ ನೇರ ಪ್ರಸರಣ) ಆಗುತ್ತದೆ. ಶಿಷ್ಯನ ಎಲ್ಲ ಸಂಶಯಗಳೂ ನೀಗಿಹೋಗುತ್ತವೆ; ಅವನು ಪರತತ್ತ್ವವನ್ನು ಸಾಕ್ಷಾತ್ಕರಿಸುವುದರಿಂದ ಇದು ಸಂಭವಿಸುತ್ತದೆ. ಶುಕ ಮತ್ತಿತರ ಧ್ಯಾನನಿರತ ಋಷಿಗಳಿಗಿದ್ದ ಸತ್ಯವನ್ನು ತಿಳಿಯಬೇಕೆಂಬ ಬಯಕೆಯನ್ನು ದಕ್ಷಿಣಾಮೂರ್ತಿಯು ಕೇವಲ ತನ್ನ ಕೃಪೆಯಿಂದಲೇ ಈಡೇರಿಸಿ ಅವರಿಗೆ ಬ್ರಹ್ಮಸಾಕ್ಷಾತ್ಕಾರವನ್ನು ಅನುಗ್ರಹಿಸುತ್ತಾನೆ. ದಕ್ಷಿಣಾಮೂರ್ತಿಯ ಶಿಷ್ಯರು ಏನು ಹೇಳುತ್ತಾರೆ? ಅವರಲ್ಲಿ ಪ್ರತಿಯೊಬ್ಬರೂ, "ತಮ್ಮ ಸನ್ನಿಧಿಗೆ ಬಂದಿದ್ದರಿಂದ, ನನ್ನ ಎಲ್ಲ ಸಂಶಯಗಳೂ ಅಳಿದುಹೋದವು. ನನಗೆ ಬ್ರಹ್ಮದ ಕುರಿತು ಉಪದೇಶ ದೊರೆಯಿತು", ಎಂದು ಹೇಳುತ್ತಾರೆ. ಕೇವಲ ಮೌನದ ಮೂಲಕ ನೀಡಿದ ಉಪದೇಶದಿಂದ, ಆ ಮಹರ್ಷಿಗಳ ಸಂಶಯಗಳು ಸಂಪೂರ್ಣವಾಗಿ ಅಳಿದುಹೋದವು ಮತ್ತು ಅವರು ಜ್ಞಾನಿಗಳಾದರು. ನಮಗೆ ಅಜ್ಞಾನವಿದೆ; ಅವರಿಗೂ ಅಜ್ಞಾನವಿತ್ತು. ಅವರ ಅಜ್ಞಾನಕ್ಕೂ ನಮ್ಮ ಅಜ್ಞಾನಕ್ಕೂ ಏನು ವ್ಯತ್ಯಾಸ? ಹುಣ್ಣಿಮೆಯ ರಾತ್ರಿಯಲ್ಲೂ ಕತ್ತಲೆ ಇರುತ್ತದೆ; ಅಮಾವಾಸ್ಯೆಯ ರಾತ್ರಿಯಲ್ಲೂ ಕತ್ತಲೆ ಇರುತ್ತದೆ. ಕತ್ತಲೆಯಿಲ್ಲದ ರಾತ್ರಿ ಅನ್ನುವುದೇ ಇಲ್ಲ. ಹುಣ್ಣಿಮೆಯ ರಾತ್ರಿಯ ಕತ್ತಲೆಯಲ್ಲಿ ನಾವು ರಸ್ತೆಯಲ್ಲಿ ಓಡಾಡಬಹುದು ಮತ್ತು ನಮ್ಮ ದೈನಂದಿನ ಕಾರ್ಯಗಳನ್ನು ಮಾಡಬಹುದು. ಪುಸ್ತಕ ಓದಲು ಮಾತ್ರ ಸ್ವಲ್ಪ ಪ್ರಯತ್ನವನ್ನು ಪಡಬೇಕಾಗುತ್ತದೆ, ಅಷ್ಟೇ. ಅಮಾವಾಸ್ಯೆಯ ರಾತ್ರಿಯಲ್ಲಿ, ಅದರಲ್ಲೂ ಆಕಾಶವು ಮೋಡಗಳಿಂದ ಕವಿದಿದ್ದರೆ, ರಸ್ತೆಯಲ್ಲಿ ನಡೆಯುವುದೋ, ನಮ್ಮ ಸಾಮಾನ್ಯ ಕಾರ್ಯಗಳನ್ನು ನಿರ್ವಹಿಸುವುದೋ ಸಾಧ್ಯವಿಲ್ಲ; ಪುಸ್ತಕ ಓದುವ ಪ್ರಶ್ನೆಯೇ ಇಲ್ಲ. ಆ ಧ್ಯಾನನಿರತ ಮಹರ್ಷಿಗಳ ಅಜ್ಞಾನವು ಹುಣ್ಣಿಮೆಯ ರಾತ್ರಿಯ ಕತ್ತಲೆಯಂತಿತ್ತು; ನಮ್ಮ ಅಜ್ಞಾನವು ಅಮಾವಾಸ್ಯೆಯ ರಾತ್ರಿಯ ಕತ್ತಲೆಯಂತಿದೆ. ಆ ಮುನಿಗಳನ್ನು ಉದ್ಧರಿಸುವ ಸಲುವಾಗಿ ಭಗವಂತನು ಚಿನ್ಮುದ್ರೆಯನ್ನು ತೋರಿಸಿದನು; ಮುಗುಳ್ನಗುವ ಮುಖದಿಂದ ಶಾಂತಿಯನ್ನು ಹರಡಿದನು; ಅವನ ದೃಷ್ಟಿಯು ಅವರ ಮೇಲೆ ತಂಪಾದ ಅಮೃತವನ್ನು ಸುರಿಸಿತು. ಅವರಿಗೆ ಜ್ಞಾನೋದಯವನ್ನು

ಉಂಟುಮಾಡಿ ಮುಕ್ತರನ್ನಾಗಿಸಲು ಅದಷ್ಟೇ ಸಾಕಾಯಿತು. ಆದರೆ, ನಮಗೆ ಅಷ್ಟು ಮಾತ್ರ ಸಾಲದು.'

1988ರ ಏಪ್ರಿಲ್ 15ರಂದು ಮೈಸೂರಿನಲ್ಲಿ ಗುರುಗಳು ಕನ್ನಡದಲ್ಲಿ ನೀಡಿದ ಅನುಗ್ರಹ ಭಾಷಣದ ಆಯ್ದ ಭಾಗ ಈ ಕೆಳಕಂಡಂತಿದೆ: 'ಗುರುವಿನ ಬಳಿಗೆ ಹೋಗಿ ತೀವ್ರ ಆಧ್ಯಾತ್ಮಿಕ ಸಾಧನೆಯನ್ನು ನಡೆಸಿದರೂ, ದೇಹವನ್ನು ಬಿಡುವ ಮೊದಲು ತತ್ತ್ವಸಾಕ್ಷಾತ್ಕಾರವನ್ನು ಪಡೆಯಲು ವಿಫಲನಾದ ವ್ಯಕ್ತಿಯ ಉದಾಹರಣೆಯನ್ನು ಪರಿಗಣಿಸೋಣ. ಅವನು ಮುಂದಿನ ಜನ್ಮದಲ್ಲಿ ಸುಲಭವಾಗಿ ಜ್ಞಾನವನ್ನು ಪಡೆಯುತ್ತಾನೆ. ಅಪರೂಪದ ಸಂದರ್ಭಗಳಲ್ಲಿ, ಅಂತಹ ವ್ಯಕ್ತಿಗೆ ಯಾವುದೇ ಭೌತಿಕ ಗುರುವಿನ ಅಗತ್ಯವಿಲ್ಲದಿರಬಹುದು. ಯೋಗ-ವಾಸಿಷ್ಠದ ಉಪಶಾಂತಿ-ಪ್ರಕರಣದಲ್ಲಿ, ಗುರುವಿನಿಂದ ಕ್ರಮಬದ್ಧವಾಗಿ ಬೋಧಿಸಲ್ಪಡದ ವಿದೇಹದ ಜನಕ ಮಹಾರಾಜನು ಬ್ರಹ್ಮಸಾಕ್ಷಾತ್ಕಾರವನ್ನು ಪಡೆದ ಕಥೆಯಿದೆ.[1] ಒಮ್ಮೆ ಒಂದು ತೋಪಿನಲ್ಲಿ ಜನಕನು ಒಬ್ಬನೇ ನಡೆದುಕೊಂಡು ಹೋಗುತ್ತಿದ್ದಾಗ, ಹಲವು ಸಿದ್ಧರು ಹಾಡುತ್ತಿದ್ದ ಹಾಡೊಂದು ಅವನ ಕಿವಿಗೆ ಬಿದ್ದಿತು ಎಂದು ಆ ಗ್ರಂಥವು ವಿವರಿಸುತ್ತದೆ. ಆ ಹಾಡು ತತ್ತ್ವ ಮತ್ತದರ ಸಾಕ್ಷಾತ್ಕಾರದ ಕುರಿತಾಗಿತ್ತು. ಹಾಡನ್ನು ಕೇಳಿದ ಬಳಿಕ ಅವನು ವಿಚಾರಮಾಡಿ ಜ್ಞಾನವನ್ನು ಪಡೆದನು. ವಾಮದೇವನು ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಬ್ರಹ್ಮಸಾಕ್ಷಾತ್ಕಾರವನ್ನು ಪಡೆದನೆಂದು ನಾವು ವೇದದಲ್ಲಿ ಕೇಳುತ್ತೇವೆ. ಇದಕ್ಕೆ ಅತ್ಯಂತ ವಿಲಕ್ಷಣವಾಗಿ, ಸತ್ಯದ ಸ್ಪಷ್ಟವಾದ ನಿರೂಪಣೆಯನ್ನು ಒಳಗೊಂಡ ಭಗವದ್ಗೀತೆಯನ್ನು ನಾವು ಪ್ರತಿನಿತ್ಯ ಓದುತ್ತೇವೆ; ಆದರೂ ನಾವು ಅಜ್ಞಾನಿಗಳಾಗಿಯೇ ಉಳಿಯುತ್ತೇವೆ. ಬ್ರಹ್ಮಜ್ಞಾನಿಯಾದ ಗುರುವಿನ ಬಳಿಗೆ ಹೋಗುವುದು ಇದಕ್ಕೆ ಪರಿಹಾರ. ಅವರಿಂದ ಕಲಿಯುವುದು ನಾವು ಅಪೇಕ್ಷಿಸಿದ ಸಾಕ್ಷಾತ್ಕಾರಕ್ಕೆ ದಾರಿ ಮಾಡಿಕೊಡುತ್ತದೆ; ಕೇವಲ ಪುಸ್ತಕಗಳನ್ನು ಓದುವುದು ಅಥವಾ ಸ್ವತಂತ್ರವಾಗಿ ತರ್ಕಿಸುವುದು ಸಾಕಾಗುವುದಿಲ್ಲ. ಆದರ್ಶ ಗುರುವು ಶಿಷ್ಯನ ಸಾಮರ್ಥ್ಯಕ್ಕೆ ಅನುಗುಣವಾಗಿ ಅವನಿಗೆ ಸತ್ಯದ ಜ್ಞಾನವನ್ನು ಬೋಧಿಸುತ್ತಾನೆ.'

ಹೀಗೆ, ಆಲದ ಮರದ ಬುಡದಲ್ಲಿ ಭಗವಾನ್ ದಕ್ಷಿಣಾಮೂರ್ತಿಯು ಮೌನದ ಮೂಲಕ ನೀಡಿದ ಉಪದೇಶವು ಆ ಅತ್ಯಂತ ವಿರಕ್ತ ಮತ್ತು ಧ್ಯಾನನಿರತ ಮುನಿಗಳಿಗೆ ಸಂಪೂರ್ಣ ಸಾಕ್ಷಾತ್ಕಾರ ಮತ್ತು ಮುಕ್ತಿಯನ್ನು ನೀಡಲು ಸಾಕಾಯಿತು. ಅವರು ಸಾಕ್ಷಾತ್ಕಾರವನ್ನು ಪಡೆಯಲು ಸಂಪೂರ್ಣವಾಗಿ ಯೋಗ್ಯರಾಗಿದ್ದರು. ಹಿಂದಿನ ಜನ್ಮಗಳಲ್ಲಿಯೇ ತಮ್ಮ ಸಾಧನೆಯನ್ನು ಬಹುತೇಕ ಪೂರ್ಣಗೊಳಿಸಿದ್ದರು. ಇದಕ್ಕೆ ವಿಲಕ್ಷಣವಾಗಿ, ಆ ಮುನಿಗಳಿಗಿಂತ ಸಾಧನೆಯಲ್ಲಿ ಕಡಿಮೆ ಸಿದ್ಧತೆಯುಳ್ಳ ಶೃಂಗೇರಿಯಲ್ಲಿದ್ದ ಭಕ್ತರಿಗೆ ಮಾತಿನ ಮೂಲಕ ಉಪದೇಶ ನೀಡುವುದು ಅಗತ್ಯವಾಗಿತ್ತು. ಆದ್ದರಿಂದ ಶೃಂಗೇರಿಯಲ್ಲಿ ಗುರುಗಳ ರೂಪದಲ್ಲಿರುವ ಭಗವಾನ್ ದಕ್ಷಿಣಾಮೂರ್ತಿಯನ್ನು ಕುರಿತು ಹೇಳುವ ನಾಲ್ಕನೆಯ ಶ್ಲೋಕದಲ್ಲಿ, 'ಬೋಧಯತೇ —

[1] ಲಘು-ಯೋಗ-ವಾಸಿಷ್ಠ 6.1.17–65

ಬೋಧಿಸುತ್ತಾನೆ', ಎಂಬ ಪದವಿದೆ; ಆದರೆ ಆಲದ ಮರದ ಬುಡದಲ್ಲಿದ್ದ ಭಗವಾನ್ ದಕ್ಷಿಣಾಮೂರ್ತಿಯ ರೂಪದಲ್ಲಿರುವ ಗುರುಗಳನ್ನು ಕುರಿತು ಹೇಳುವ ಐದನೆಯ ಶ್ಲೋಕವು ಅತ್ಯಂತ ವಿರಕ್ತ, ಧ್ಯಾನನಿರತ ಮುನಿಗಳು ಅಲ್ಲಿ ಅವರ ಅನುಗ್ರಹಕ್ಕೆ ಪಾತ್ರರಾದರು (ಯತ್ಕೃಪಾ-ಭಾಜಃ) ಎಂದಷ್ಟೆ ಹೇಳುತ್ತದೆ. ನಾಲ್ಕನೆಯ ಶ್ಲೋಕದಲ್ಲಿ ಭಗವಾನ್ ದಕ್ಷಿಣಾಮೂರ್ತಿಯನ್ನು ಗುರುಗಳೊಂದಿಗೆ ಗುರುತಿಸುವುದೂ, ಅದರ ನಂತರ ಐದನೆಯ ಶ್ಲೋಕದಲ್ಲಿ ಗುರುಗಳನ್ನು ಭಗವಾನ್ ದಕ್ಷಿಣಾಮೂರ್ತಿಯೊಂದಿಗೆ ಗುರುತಿಸುವುದೂ, ಅವರಿಬ್ಬರ ಅಭೇದವನ್ನು ಒತ್ತಿಹೇಳುತ್ತದೆ. ಹಾಗೆಯೇ, ಗುರುಗಳಿಗೆ ಸತ್ಯವನ್ನು ಮಾತಿನ ಮೂಲಕ ಬೋಧಿಸುವುದರಿಂದ ಮಾತ್ರವಲ್ಲದೆ, ಕೇವಲ ಮೌನದ ಮೂಲಕವೂ ಜ್ಞಾನವನ್ನು ನೀಡುವ ಅಬಾಧಿತ ಸಾಮರ್ಥ್ಯ-ವಿತ್ತು ಎಂಬುದನ್ನೂ ಇದು ದೃಢಪಡಿಸುತ್ತದೆ.

ಕೇವಲ ಆಶೀರ್ವಾದದ ಮೂಲಕ ಗುರುಗಳು ಒಬ್ಬ ವ್ಯಕ್ತಿಯ ಸಂಶಯಗಳನ್ನು ನಿವಾರಿಸಿದ ಒಂದು ಪ್ರಸಂಗ ಹೀಗಿದೆ: ಋಷಿಕೇಶದಿಂದ ಒಬ್ಬ ಬ್ರಹ್ಮಚಾರಿಯು ಗುರುಗಳ ದರ್ಶನಕ್ಕಾಗಿ 1984ರ ಜೂನ್ 2ರಂದು ಶೃಂಗೇರಿಗೆ ಬಂದನು. ಅಷ್ಟರಲ್ಲಿ ಅವರು ಜನರಿಗೆ ದರ್ಶನವನ್ನು ನೀಡಿ, ಮಧ್ಯಾಹ್ನದ ಸ್ನಾನಕ್ಕೆ ತೆರಳಿದ್ದರು; ಆ ದಿನ ಅವರು ಅಲ್ಲಿಂದ ಬೆಂಗಳೂರಿನ ಮೂಲಕ ಕಾಲಡಿಗೆ ತೆರಳಬೇಕಾಗಿತ್ತು. ಆ ಬ್ರಹ್ಮಚಾರಿಯು ನನಗೆ, 'ಯೋಗ ಮತ್ತು ವೇದಾಂತಕ್ಕೆ ಸಂಬಂಧಿಸಿದ ಏಳು ಪ್ರಶ್ನೆಗಳನ್ನು ಗುರುಗಳಿಗೆ ಕೇಳಬೇಕೆಂದು ಬಯಸುತ್ತೇನೆ. ಅವು ನನಗೆ ಬಹಳ ಮುಖ್ಯವಾಗಿವೆ. ಋಷಿಕೇಶ, ಉತ್ತರಕಾಶಿ ಮತ್ತು ಕಾಶಿಯ ಅನೇಕ ವಿದ್ವಾಂಸರು, ಯೋಗ-ಸಾಧಕರು ಮತ್ತು ಸಂನ್ಯಾಸಿಗಳನ್ನು ಸಂಪರ್ಕಿಸಿದೆ; ಆದರೆ ಯಾರಿಂದಲೂ ನನಗೆ ತೃಪ್ತಿಕರವಾದ ಉತ್ತರ ಸಿಗಲಿಲ್ಲ. ಕಾಶಿಯ ಒಬ್ಬ ವಿದ್ವಾಂಸರು ನನ್ನನ್ನು ಶೃಂಗೇರಿಗೆ ಹೋಗುವಂತೆ ನಿರ್ದೇಶಿಸಿ, "ಶೃಂಗೇರಿಯ ಜಗದ್ಗುರುಗಳಿಗೆ ನಿನಗೆ ತೃಪ್ತಿಕರವಾದ ಉತ್ತರ ನೀಡಲು ಸಾಧ್ಯವಾಗದಿದ್ದರೆ, ಜಗತ್ತಿನಲ್ಲಿ ಯಾರಿಂದಲೂ ಸಾಧ್ಯವಿಲ್ಲ", ಎಂದರು. ಅದಕ್ಕಾಗಿಯೇ ನಾನು ಬಹಳ ಉತ್ಸುಕನಾಗಿ ಶೃಂಗೇರಿಗೆ ಬಂದಿದ್ದೇನೆ', ಎಂದು ತಿಳಿಸಿದನು. ನಾನು ಆತನಿಗೆ, 'ಗುರುಗಳು ಇಂದು ಪ್ರವಾಸಕ್ಕೆ ಹೊರಡಲಿದ್ದಾರೆ. ನೀನು ಇಲ್ಲಿ ಕಾಯುತ್ತಿದ್ದರೆ, ಅವರು ಹೊರಡುವ ಮುನ್ನ ಅವರ ದರ್ಶನವನ್ನು ಪಡೆಯಬಹುದು. ಆದರೆ ಅವರೊಂದಿಗೆ ದೀರ್ಘವಾದ ಖಾಸಗಿ ಸಂಭಾಷಣೆಗೆ ಸಮಯ-ವಿರುವುದಿಲ್ಲ', ಎಂದು ತಿಳಿಸಿದೆ. ಅದಕ್ಕೆ ಅವನು, 'ಒಂದು ಕ್ಷಣಕ್ಕಾದರೂ ಅವರ ದರ್ಶನವನ್ನು ಮಾಡಲು ಸಾಧ್ಯವಾಗುವುದಾದರೆ, ನಾನು ಸಂತೋಷದಿಂದ ಕಾಯುತ್ತೇನೆ', ಎಂದ. ನಂತರ ಆತನು ತನ್ನ ಏಳು ಪ್ರಶ್ನೆಗಳಲ್ಲಿ ಒಂದನ್ನು ನನಗೆ ತಿಳಿಸಿ, ತನ್ನ ಬಗ್ಗೆ ಗುರುಗಳಿಗೆ ತಿಳಿಸುವಂತೆ ವಿನಂತಿಸಿದನು. ಗುರುಗಳು ತಮ್ಮ ಮಧ್ಯಾಹ್ನದ ಆಹ್ನಿಕವನ್ನು ಮುಗಿಸಿ ಭಿಕ್ಷೆಯನ್ನು ಸ್ವೀಕರಿಸಿದ ಸ್ವಲ್ಪ ಹೊತ್ತಿನ ಬಳಿಕ ನಾನು ಆತನ ಕೋರಿಕೆಯನ್ನು ನೆರವೇರಿಸಿದೆ. ಗುರುಗಳು ಆಗ, 'ಅವನು ನಿನಗೆ ತಿಳಿಸಿದ ಪ್ರಶ್ನೆ ಒಳ್ಳೆಯದೂ ಪ್ರಸಕ್ತವಾದುದೂ ಆಗಿದೆ. ಸಮಯವನ್ನು ವಿನಿಯೋಗಿಸಲು ಅವಕಾಶವಿಲ್ಲದಿರುವ ಕಾರಣ, ಅವನು ಬಯಸಿದರೆ ಬೆಂಗಳೂರಿನಲ್ಲಿ ನನ್ನನ್ನು ಭೇಟಿಯಾಗಿ

ಅಲ್ಲಿ ತನ್ನ ಪ್ರಶ್ನೆಗಳನ್ನು ಕೇಳಬಹುದು. ನನಗೆ ಅವನ ಪ್ರಶ್ನೆಗಳಿಗೆ ಉತ್ತರಗಳು ತಿಳಿದಿದ್ದರೆ ಅವನಿಗೆ ತಿಳಿಸುತ್ತೇನೆ. ಇಲ್ಲದಿದ್ದರೆ, ಅವನಿಗೆ ಸಹಾಯ ಮಾಡಲು ನನ್ನಿಂದಾಗದು ಎಂದು ಮುಕ್ತವಾಗಿ ಒಪ್ಪಿಕೊಳ್ಳುತ್ತೇನೆ', ಎಂದು ಹೇಳಿದರು. ಸುಮಾರು ಅರ್ಧ ಗಂಟೆಯ ಬಳಿಕ ಗುರುಗಳು ಸಚ್ಚಿದಾನಂದ ವಿಲಾಸದ ಮುಂಭಾಗದ ಅಂಗಣಕ್ಕೆ ಬಂದರು. ಆ ಬ್ರಹ್ಮಚಾರಿಯನ್ನು ಒಳಗೊಂಡಂತೆ ಕೆಲವು ಭಕ್ತರು ಅಲ್ಲಿ ಅವರ ದರ್ಶನಕಾಗಿ ಕಾದಿದ್ದರು. ಆತನು ಗುರುಗಳಿಗೆ ಸಾಷ್ಟಾಂಗ ನಮಸ್ಕರಿಸಿದನು. ಗುರುಗಳು ಆತನನ್ನು ಕರುಣೆಯಿಂದ ತುಂಬಿದ ದೃಷ್ಟಿಯಿಂದ ನೋಡಿ, ಬಲಗೈಯನ್ನು ಆಶೀರ್ವಾದದ ಭಂಗಿಯಲ್ಲಿ ಎತ್ತಿ, ಹಿಂದಿಯಲ್ಲಿ, "ಸುಖಿಯಾಗಿರು", ಎಂದು ಹೇಳಿದರು. ನಂತರ ಮುಂದಕ್ಕೆ ಹೆಜ್ಜೆ ಹಾಕಿದರು. ಗುರುಗಳು ನನಗೆ ಹೇಳಿದ್ದನ್ನು ನಾನು ಅವನಿಗೆ ಬೇಗನೆ ತಿಳಿಸಿದೆ. ನನ್ನ ಮಾತು ಮುಗಿಯುವ ಮೊದಲೇ ಅವನು, 'ಗುರುಗಳು ನನ್ನನ್ನು ಆಶೀರ್ವದಿಸಿದ ಕ್ಷಣದಲ್ಲೇ ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರಗಳು ಸಂಪೂರ್ಣವಾಗಿ ನನಗೆ ಅರಿವಾಗಿಬಿಟ್ಟವು', ಎಂದನು. ಗುರುಗಳು ಕೆಲವೊಮ್ಮೆ ಯಾವುದೇ ಮಾತಿಲ್ಲದೆ ಶಾಸ್ತ್ರಕ್ಕೆ ಸಂಬಂಧಪಟ್ಟ ಉತ್ತರಗಳನ್ನು ತಿಳಿಸುತ್ತಿದ್ದುದೂ ಉಂಟು; ಮಾತ್ರವಲ್ಲ, ಕೆಲವು ಸಂದರ್ಭಗಳಲ್ಲಿ ತಮ್ಮ ಕೃಪೆಯಿಂದಲೇ ತಮ್ಮ ಶಿಷ್ಯರಿಗೆ ಸಮಾಧಿಯನ್ನೂ ಅನುಗ್ರಹಿಸಿದ್ದರು. ನಾಲ್ಕನೆಯ ಮತ್ತು ಐದನೆಯ ಶ್ಲೋಕಗಳಲ್ಲಿ ಸೂಚಿಸಿರುವಂತೆ, ಇಂತಹ ಸಂಗತಿಗಳು ಭಗವಾನ್ ದಕ್ಷಿಣಾಮೂರ್ತಿ ಮತ್ತು ಗುರುಗಳ ಏಕತ್ವಕ್ಕೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತವೆ.

ಶ್ಲೋಕ 6

ಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಶಾಸ್ತ್ರದಲ್ಲಿ ಪರಮೇಶ್ವರರೆಂದು ನಿರೂಪಿಸಲ್ಪಟ್ಟವರು

ದ್ಯಾವಾಭೂಮೀ ಹಿ ಜನಯನ್ದೇವ ಏಕ ಇತಿ ಶ್ರುತಿಃ।
ಯಂ ವರ್ಣಯತಿ ಸರ್ವೇಶಂ ತಂ ವಿದ್ಯಾತೀರ್ಥಮಾಶ್ರಯೇ ॥ 6 ॥

['ಸ್ವರ್ಗ ಮತ್ತು ಭೂಮಿಯನ್ನು ಸೃಷ್ಟಿಸುವ ದೇವರು ಒಬ್ಬನೇ...', ಎಂದು ಯಾವ ಸರ್ವೇಶನನ್ನು ಕುರಿತು ಶ್ರುತಿಯು ಹೇಳುತ್ತದೆಯೋ, ಆ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ನಾನು ಆಶ್ರಯಿಸುತ್ತೇನೆ.]

ಈ ಆರನೆಯ ಶ್ಲೋಕದಲ್ಲಿ ಗುರುಗಳನ್ನು ಪರಮೇಶ್ವರನೆಂದು ಘೋಷಿಸಲಾಗಿದೆ. ಇದನ್ನು 'ಸರ್ವೇಶ' (ಎಲ್ಲದರ ಒಡೆಯ) ಎಂಬ ವಿಶೇಷಣದ ಮೂಲಕವೂ, ಈಶ್ವರನನ್ನು ಕುರಿತಾದ

ಶ್ವೇತಾಶ್ವತರ-ಉಪನಿಷತ್ತಿನ ಮೂರು ಮಂತ್ರಗಳಲ್ಲಿ ಮೂರನೆಯ ಮಂತ್ರದ ನಾಲ್ಕನೆಯ ಪಾದವನ್ನು ಉಲ್ಲೇಖಿಸುವ ಮೂಲಕವೂ ಮಾಡಲಾಗಿದೆ. ಆ ಮೂರು ಮಂತ್ರಗಳು ಹೀಗಿವೆ:

ಸ ಏಕೋ ಜಾಲವಾನೀಶತ ಈಶನೀಭಿಃ ಸರ್ವಾಲ್ಲೋಕಾನೀಶ ಈಶನೀಭಿಃ । ಯ ಏವೈಕ ಉದ್ಭವೇ ಸಮ್ಭವೇ ಚ ಯ ಏತದ್ವಿದುರಮೃತಾಸ್ತೇ ಭವನ್ತಿ — ಆ ಅದ್ವಯನು ಮಾಯೆಯ ಅಧೀಶನಾಗಿ ತನ್ನ ದೈವೀಶಕ್ತಿಗಳಿಂದ ಆಳುತ್ತಾನೆ. (ಅವನು ಏನನ್ನು ಆಳುತ್ತಾನೆ?) ತನ್ನ ದೈವೀಶಕ್ತಿಗಳಿಂದ ಅವನು (ಎಲ್ಲಕ್ಕೂ ಮೇಲಿನ ಲೋಕವಾದ ಬ್ರಹ್ಮಲೋಕದಿಂದ ಹಿಡಿದು ಎಲ್ಲಕ್ಕೂ ಕೆಳಗಿನ ಪಾತಾಳದವರೆಗೆ) ಎಲ್ಲ ಲೋಕಗಳನ್ನು ಆಳುತ್ತಾನೆ. ಸೃಷ್ಟಿಗೆ ಮುನ್ನ, ಪ್ರಪಂಚದ ಸ್ಥಿತಿಕಾಲದಲ್ಲಿ ಮತ್ತು (ಪ್ರಳಯದಲ್ಲಿ) ಎಲ್ಲವೂ ಲಯವಾದಾಗಲೂ ಅವನು ಒಬ್ಬನೇ ಇರುತ್ತಾನೆ. ಅವನನ್ನು ಸಾಕ್ಷಾತ್ಕರಿಸಿಕೊಂಡವರು ಅಮರರಾಗುತ್ತಾರೆ.[1]

ಏಕೋ ಹಿ ರುದ್ರೋ ನ ದ್ವಿತೀಯಾಯ ತಸ್ಥುರ್ಯ ಇಮಾಲ್ಲೋಕಾನೀಶತ ಈಶನೀಭಿಃ । *ಪ್ರತ್ಯಙ್ಜನಾಂಸ್ತಿಷ್ಠತಿ ಸಞ್ಚುಕೋಚಾನ್ತಕಾಲೇ ಸಂಸೃಜ್ಯ ವಿಶ್ವಾ ಭುವನಾನಿ ಗೋಪಾಃ* — (ಎಲ್ಲ ದುಃಖಗಳನ್ನೂ ನೀಗುವ) ರುದ್ರನು ತನ್ನ ದೈವೀಶಕ್ತಿಗಳಿಂದ ಈ ಎಲ್ಲ ಲೋಕಗಳನ್ನೂ ಆಳುವವನು, ಪ್ರತಿಯೊಂದು ಜೀವಿಯೊಳಗೂ ಜೀವರೂಪದಲ್ಲಿ ಇರುವವನು, ಎಲ್ಲ ಲೋಕಗಳನ್ನೂ ಸೃಷ್ಟಿಸುವವನು, ಅವುಗಳ ಪಾಲಕನು ಮತ್ತು ಪ್ರಳಯಕಾಲದಲ್ಲಿ ಎಲ್ಲವನ್ನೂ ತನ್ನೊಳಗೆ ಹಿಂತೆಗೆದುಕೊಳ್ಳುವವನು ಒಬ್ಬನೇ. ಆದ್ದರಿಂದ ಬ್ರಹ್ಮಜ್ಞಾನಿಗಳು ಯಾವ ಎರಡನೆಯ ವಸ್ತುವನ್ನೂ ಅರಸುವುದಿಲ್ಲ.[2]

ವಿಶ್ವತಶ್ಚಕ್ಷುರುತ ವಿಶ್ವತೋಮುಖೋ ವಿಶ್ವತೋಬಾಹುರುತ ವಿಶ್ವತಸ್ಪಾತ್ । *ಸಂ ಬಾಹುಭ್ಯಾಂ ಧಮತಿ ಸಂಪತತ್ರೈರ್ದ್ಯಾವಾಭೂಮೀ ಜನಯನ್ದೇವ ಏಕಃ* — [ಒಂದು ಮಡಕೆಯನ್ನು ತಯಾರಿಸಲು ಕುಂಬಾರನಿಗೆ ಒಂದು ಸ್ಥಳ, ಉಪಾದಾನ ದ್ರವ್ಯವಾಗಿ ಮಣ್ಣು ಮತ್ತು ಚಕ್ರದಂಥ ಉಪಕರಣಗಳು ಬೇಕಾಗುತ್ತವೆ. ಆದರೆ ಲೋಕಗಳನ್ನು ಸೃಷ್ಟಿಸುವಾಗ ಸೃಷ್ಟಿಕರ್ತನಿಗೆ ಆ ಕಾರ್ಯಕ್ಕೆ ಸ್ಥಳ ಯಾವುದು? ಉಪಾದಾನ ವಸ್ತು ಯಾವುದು ಮತ್ತು ಅವನ ಉಪಕರಣಗಳು ಯಾವುವು? ಇವಾವುದೂ ಸೃಷ್ಟಿಯ ಆದಿಯಲ್ಲಿ ಇಲ್ಲದಿದ್ದ ಕಾರಣ, ಅವನು ಲೋಕಗಳನ್ನು ಹೇಗೆ ಸೃಷ್ಟಿಸಿರಬೇಕು? ಇದಕ್ಕುತ್ತರ: ಮಡಕೆಯಿಂದ ಭಿನ್ನನಾದ ಕುಂಬಾರನಿಗೆ ತನಗಿಂತ ಹೊರಗಿನ ವಸ್ತುವಿನ ಅವಶ್ಯಕತೆ ಇದೆ. ಆದರೆ, ಇದಕ್ಕೆ ವಿರುದ್ಧವಾಗಿ, ಈಶ್ವರನು ತನ್ನಲ್ಲಿಯೇ, ತನ್ನಿಂದಲೇ ಮತ್ತು ತನ್ನದೇ ಆದ ಶಕ್ತಿಗಳ ಮೂಲಕ, ತನಗಿಂತ ಹೊರತಾದ ಯಾವುದನ್ನೂ ಅವಲಂಬಿಸದೆ, ಜಗತ್ತನ್ನು ಸೃಷ್ಟಿಸಿದನು ಎಂದು ಸೂಚಿಸಲಾಗಿದೆ. ಅಂದರೆ, ಅವನೇ ಉಪಾದಾನಕಾರಣ, ನಿಮಿತ್ತಕಾರಣ ಎರಡೂ ಆಗಿದ್ದಾನೆ. ಹೀಗೆ ಅವನು ಇಡೀ ವಿಶ್ವವಾಗಿ ಪ್ರಕಟನಾಗುತ್ತಾನೆ ಮತ್ತು ಆ ವಿಶ್ವರೂಪದಲ್ಲಿ ಎಲ್ಲ ಜೀವಿಗಳ ಕಣ್ಣುಗಳು, ಮುಖಗಳು, ಕೈಗಳು

[1] ಶ್ವೇತಾಶ್ವತರ-ಉಪನಿಷತ್ 3.1. ಈ ಅನುವಾದವು ಭಗವತ್ಪಾದರಿಂದ ರಚಿಸಲ್ಪಟ್ಟದ್ದೆಂದು ಹೇಳಲ್ಪಟ್ಟ ಭಾಷ್ಯ ಮತ್ತು ಶಂಕರಾನಂದರ ಶ್ವೇತಾಶ್ವತರ-ಉಪನಿಷದ್-ದೀಪಿಕಾ ವ್ಯಾಖ್ಯಾನವನ್ನು ಆಧರಿಸಿದೆ.

[2] ಶ್ವೇತಾಶ್ವತರ-ಉಪನಿಷತ್ 3.2

ಮತ್ತು ಪಾದಗಳನ್ನು ಹೊಂದಿದ್ದಾನೆ ಎಂದು ಸೂಚಿಸಲಾಗಿದೆ. ಇದನ್ನು ಈ ಮಂತ್ರದಲ್ಲಿ ಹೀಗೆ ವ್ಯಕ್ತಪಡಿಸಲಾಗಿದೆ —] ಅವನಿಗೆ ಎಲ್ಲೆಡೆಯೂ ಕಣ್ಣುಗಳಿವೆ (ಎಲ್ಲ ಕಣ್ಣುಗಳೂ ಅವನವೇ); ಎಲ್ಲೆಲ್ಲೂ ಮುಖಗಳಿವೆ; ಎಲ್ಲೆಡೆ ಕೈಗಳಿವೆ; ಹಾಗೂ ಎಲ್ಲೆಡೆಯೂ ಕಾಲುಗಳಿವೆ. ಭೂ-ಸ್ವರ್ಗಲೋಕಗಳನ್ನು ಸೃಷ್ಟಿಸಿ ಒಬ್ಬನೇ ದೇವನು ಮನುಷ್ಯರಿಗೆ ಕೈಗಳನ್ನು ಹಾಗೂ ಪಕ್ಷಿಗಳಿಗೆ ರೆಕ್ಕೆಗಳನ್ನು ಒದಗಿಸುತ್ತಾನೆ.[1]

ಶ್ವೇತಾಶ್ವತರ-ಉಪನಿಷತ್ತಿನಲ್ಲಿ ಮಾತ್ರವಲ್ಲದೆ, ಈ ಮೂರನೆಯ ಮಂತ್ರವು ಋಗ್ವೇದ-ಸಂಹಿತೆ, ಶುಕ್ಲಯಜುರ್ವೇದ-ಸಂಹಿತೆ ಮತ್ತು ಕೃಷ್ಣಯಜುರ್ವೇದದ ತೈತ್ತಿರೀಯ-ಸಂಹಿತೆಗಳಲ್ಲೂ ಇದೆ.[2] ಈ ಮಂತ್ರವು ಪರಿಹರಿಸುವ ಆಕ್ಷೇಪಣೆಗಳನ್ನು ಋಗ್ವೇದ-ಸಂಹಿತೆಯ ಹಿಂದಿನ ಮಂತ್ರವೇ ಸ್ಪಷ್ಟವಾಗಿ ಮುಂದಿಡುತ್ತದೆ. ಆ ಮಂತ್ರವು ಹೀಗಿದೆ: 'ಕಿಂ ಸ್ವಿದಾಸೀದಧಿಷ್ಠಾನಮಾ-ರಮ್ಭಣಂ ಕತಮತ್ಸ್ವಿತ್ ಕಥಾಸೀತ್ । ಯತೋ ಭೂಮಿಂ ಜನಯನ್ವಿಶ್ವಕರ್ಮಾ ವಿದ್ಯಾಮೌ-ಣೋರ್ನ್ಮಹಿನಾ ವಿಶ್ವಚಕ್ಷಾಃ — ತನ್ನ ಶಕ್ತಿಯಿಂದ ಭೂ-ಸ್ವರ್ಗಗಳನ್ನು ಸೃಷ್ಟಿಸಿದ ಸರ್ವದ್ರಷ್ಟಾ ಆದ ಈಶ್ವರನಿಗೆ ಕಾರ್ಯನಿರ್ವಹಿಸಲು ಸ್ಥಳ ಯಾವುದು? (ಯಾವುದೂ ಇರಲಿಲ್ಲ.) ಉಪಾದಾನ ವಸ್ತು ಯಾವುದು? (ಯಾವುದೂ ಇರಲಿಲ್ಲ.) ಯಾವುದಾದರೂ ವಸ್ತು ಇದ್ದಿದ್ದರೆ, ಅದು ಎಂತಹುದಾಗಿತ್ತು?'[3] ಶುಕ್ಲಯಜುರ್ವೇದ-ಸಂಹಿತೆಯೂ ಸಹ, ದೇವರಿಗೆ ಎಲ್ಲೆಡೆಯೂ ಕಣ್ಣುಗಳು, ಮುಖಗಳು, ಕೈಗಳು ಮತ್ತು ಪಾದಗಳಿವೆ ಎಂದು ಹೇಳುವ ಮಂತ್ರದ ಮೂಲಕ ಇದೇ ಆಕ್ಷೇಪಣೆಯನ್ನು ಮುಂದಿಟ್ಟು ಪರಿಹರಿಸುತ್ತದೆ.[4] ತೈತ್ತಿರೀಯ-ಸಂಹಿತೆಯಲ್ಲಿ, ಈ ಪದಗಳು ಈಶ್ವರನ ವಿಶ್ವರೂಪವನ್ನು ವಿವರಿಸುವ ಪದಗಳ ನಂತರ ಬರುತ್ತವೆ. ಆ ಮೂಲಕ ಆ ಆಕ್ಷೇಪಣೆಗಳು ಅನ್ವಯಿಸುವುದಿಲ್ಲ ಎಂಬುದನ್ನು ಅವು ಸೂಚಿಸುತ್ತವೆ.[5]

ಈ ಆರನೆಯ ಶ್ಲೋಕದಲ್ಲಿ ಶ್ವೇತಾಶ್ವತರ-ಉಪನಿಷತ್ತಿನ ಒಂದು ಮಂತ್ರದ ಒಂದು ಪಾದವನ್ನು ಅಳವಡಿಸಿ ಉಲ್ಲೇಖಿಸಲಾಗಿದೆ. ಆದರೆ ಅದರ ಮೂಲಕ ಆ ಮಂತ್ರವೊಂದನ್ನೇ ಅಲ್ಲದೆ, ಆ ಉಪನಿಷತ್ತಿನ ಮೂರನೆಯ ಅಧ್ಯಾಯದ ಹಿಂದಿನ ಎರಡು ಮಂತ್ರಗಳನ್ನೂ ಸೂಚಿಸಲಾಗಿದೆ. ಇದು ಕೆಳಗಿನ ವಿವರಣೆಯಿಂದ ಸ್ಪಷ್ಟವಾಗುತ್ತದೆ. ಚರ್ಚಿಸಲ್ಪಡುತ್ತಿರುವ ಶ್ರುತಿವಾಕ್ಯವು ಸರ್ವೇಶನನ್ನು — ಎಲ್ಲದರ ಅಧಿಪತಿಯನ್ನು — ವಿಶ್ಲೇಷಿಸುತ್ತದೆ ಎಂಬುದಾಗಿ ಈ ಶ್ಲೋಕವು ನಿರ್ದಿಷ್ಟಪಡಿಸುತ್ತದೆ. 'ಸರ್ವೇಶ' ಪದಕ್ಕೆ ಸಮಾನಾರ್ಥಕವಾದ 'ಸರ್ವೇಶ್ವರ' ಪದವು

[1] ಶ್ವೇತಾಶ್ವತರ-ಉಪನಿಷತ್ 3.3

[2] ಋಗ್ವೇದ-ಸಂಹಿತಾ 10.81.3; ಶುಕ್ಲ-ಯಜುರ್ವೇದ-ಸಂಹಿತಾ (ಮಾಧ್ಯಂದಿನ-ಶಾಖೆ) 17.19; ತೈತ್ತಿರೀಯ-ಸಂಹಿತಾ 4.6.2.4

[3] ಋಗ್ವೇದ-ಸಂಹಿತಾ 10.81.2. ಈ ಅನುವಾದವು ಸಾಯಣರ ವೇದಾರ್ಥಪ್ರಕಾಶ ಭಾಷ್ಯವನ್ನು ಅವಲಂಬಿಸಿದೆ.

[4] ಶುಕ್ಲಯಜುರ್ವೇದ-ಸಂಹಿತಾ (ಮಾಧ್ಯಂದಿನ-ಶಾಖೆ) 17.18

[5] ತೈತ್ತಿರೀಯಸಂಹಿತಾ 4.6.2.4–5

ಮಾಂಡೂಕ್ಯ-ಉಪನಿಷತ್ತಿನಲ್ಲಿದೆ ಮತ್ತು ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಅದನ್ನು, 'ಭೇದಜಾತಸ್ಯ ಸರ್ವಸ್ಯೇಶಿತಾ — ಅಶೇಷ ದ್ವೈತದ ಅಧಿಪತಿ', ಎಂದು ವಿವರಿಸಿದ್ದಾರೆ. ಇಲ್ಲಿ ನೇರವಾಗಿ ಉಲ್ಲೇಖಿಸಿರುವ 'ಭೂಸ್ವರ್ಗಲೋಕಗಳನ್ನು ಸೃಷ್ಟಿಸುವ ಏಕೈಕ ದೇವನು' ಎಂಬ ಅರ್ಥದ ಮಂತ್ರಪಾದವಾಗಲಿ, ಅದನ್ನು ಒಳಗೊಂಡ ಪೂರ್ಣ ಮಂತ್ರವಾಗಲಿ, 'ಸರ್ವೇಶ' ಎಂದರೆ 'ಎಲ್ಲದರ ಒಡೆಯ' ಎಂಬ ತತ್ತ್ವವನ್ನು ಸಮರ್ಪಕವಾಗಿ ವಿವರಿಸುವುದಿಲ್ಲ. ಆದರೆ ಈ ಮಂತ್ರವು ಶ್ವೇತಾಶ್ವತರ-ಉಪನಿಷತ್ತಿನ ಮೂರನೆಯ ಅಧ್ಯಾಯದ ಹಿಂದಿನ ಎರಡು ಮಂತ್ರಗಳೊಂದಿಗೆ ಸೇರಿಕೊಂಡಾಗ, ಈಶ್ವರನನ್ನು ಸ್ಪಷ್ಟವಾಗಿ ಮತ್ತು ಪರ್ಯಾಪ್ತವಾಗಿ ವಿವರಿಸುವ ಒಂದು ಅವಿಭಾಜ್ಯ ತ್ರಯವಾಗಿ ಪರಿಣಮಿಸುತ್ತದೆ.

ಒಂದು ಶ್ಲೋಕದ ಭಾಗವನ್ನು ಉಲ್ಲೇಖಿಸುವ ಮೂಲಕ ಇಡೀ ಶ್ಲೋಕವನ್ನಾಗಲಿ, ಒಂದಕ್ಕಿಂತ ಹೆಚ್ಚು ಶ್ಲೋಕಗಳನ್ನಾಗಲಿ ಸೂಚಿಸುವ ಉದಾಹರಣೆಗಳಿಗೆ ಕೊರತೆಯಿಲ್ಲ. ಭಗವತ್ಪಾದರು ತಮ್ಮ ಉಪದೇಶ-ಸಾಹಸ್ರಿಯಲ್ಲಿ, ಭಗವದ್ಗೀತೆಯ 5ನೆಯ ಅಧ್ಯಾಯದ 13ನೆಯ ಶ್ಲೋಕವನ್ನು ಅದರ ಮೂರನೆಯ ಪಾದದ ಒಂದು ಭಾಗವಾದ, 'ನವದ್ವಾರೇ ಪುರೇ (ಒಂಬತ್ತು ದ್ವಾರಗಳಿರುವ ದೇಹವೆಂಬ ನಗರದಲ್ಲಿ)', ಎಂಬುದನ್ನು ಉಲ್ಲೇಖಿಸುವ ಮೂಲಕ ಸೂಚಿಸಿದ್ದಾರೆ.[1] ಹಾಗೆಯೇ ಬೃಹದಾರಣ್ಯಕ-ಉಪನಿಷತ್ತು ಋಗ್ವೇದ-ಸಂಹಿತೆಯ ಮೂರು ಮಂತ್ರಗಳನ್ನು ಮೊದಲ ಮಂತ್ರದ ಮೊದಲ ಪಾದವನ್ನಷ್ಟೇ ಉದ್ಧರಿಸುವ ಮೂಲಕ ಸೂಚಿಸುತ್ತದೆ. ಅದು ಹೀಗೆ ಹೇಳುತ್ತದೆ: 'ತದ್ಧೈತತ್ಪಶ್ಯನ್ನೃಷಿರ್ವಾಮದೇವಃ ಪ್ರತಿಪೇದೇ "ಅಹಂ ಮನುರಭವಂ ಸೂರ್ಯಶ್ಚ" ಇತಿ — ತನ್ನ ಆತ್ಮವನ್ನು ಬ್ರಹ್ಮವೆಂದು ಸಾಕ್ಷಾತ್ಕರಿಸಿಕೊಂಡಾಗ, ವಾಮದೇವ ಋಷಿಗಳು, "ನಾನು ಮನು ಮತ್ತು ಸೂರ್ಯದೇವನಾಗಿದ್ದೆ", ಎಂದು ತಿಳಿದುಕೊಂಡರು.'[2] ಉಪನಿಷತ್ತಿನ ಈ ವಾಕ್ಯದ ಮೇಲಿನ ಭಗವತ್ಪಾದರ ಭಾಷ್ಯದಿಂದ, ಇಲ್ಲಿ ಉಲ್ಲೇಖಿಸಲ್ಪಟ್ಟಿರುವುದು ಕೇವಲ ಆ ಭಾಗವಲ್ಲ, ಋಗ್ವೇದ-ಸಂಹಿತೆಯ ಮೂರು ಸಂಪೂರ್ಣ ಮಂತ್ರಗಳೇ ಎಂಬುದು ಸಿದ್ಧವಾಗುತ್ತದೆ.[3]

ಭಗವದ್ಗೀತೆ, ಶ್ರುತಿ ಮತ್ತು ವಿಷ್ಣು-ಪುರಾಣಗಳಲ್ಲಿ ಪರಮೇಶ್ವರನನ್ನೂ, ಮಾನುಷರೂಪದಲ್ಲಿ ಅವನ ಅವತಾರವನ್ನೂ ಕುರಿತು ಹೇಳಿರುವ ವಿಷಯಗಳನ್ನು ಆಧಾರವಾಗಿಟ್ಟುಕೊಂಡು ಅವುಗಳನ್ನು ತಮ್ಮ ಮಾತುಗಳಲ್ಲಿ ಉಲ್ಲೇಖಿಸಿ, ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದ ಪ್ರಸ್ತಾವನೆಯಲ್ಲಿ ಹೀಗೆ ಬರೆಯುತ್ತಾರೆ: 'ಸ ಚ ಭಗವಾನ್ ಜ್ಞಾನೈಶ್ವರ್ಯಶಕ್ತಿಬಲವೀರ್ಯ-ತೇಜೋಭಿಸ್ಸದಾ ಸಂಪನ್ನತ್ರಿಗುಣಾತ್ಮಿಕಾಂ ವೈಷ್ಣವೀಂ ಸ್ವಾಂ ಮಾಯಾಂ ಮೂಲಪ್ರಕೃತಿಂ ವಶೀಕೃತ್ಯ, ಅಜೋಽವ್ಯಯೋ ಭೂತಾನಾಮೀಶ್ವರೋ ನಿತ್ಯಶುದ್ಧಬುದ್ಧಮುಕ್ತ-ಸ್ವಭಾವೋಽಪಿ

[1] ಉಪದೇಶ-ಸಾಹಸ್ರೀ, ಗದ್ಯಭಾಗ 1.38

[2] ಬೃಹದಾರಣ್ಯಕ-ಉಪನಿಷತ್ 1.4.10

[3] ಋಗ್ವೇದ- ಸಂಹಿತಾ 4.26.1–3

ಸನ್, ಸ್ವಮಾಯಯಾ ದೇಹವಾನಿವ ಜಾತ ಇವ ಲೋಕಾನುಗ್ರಹಂ ಕುರ್ವನ್ ಲಕ್ಷ್ಯತೇ — ಸದಾ (ಪೂರ್ಣ ಹಾಗೂ ಅಬಾಧಿತ) ಜ್ಞಾನ, ಐಶ್ವರ್ಯ, ಶಕ್ತಿ, ಬಲ, ವೀರ್ಯ ಮತ್ತು ತೇಜಸ್ಸುಗಳಿಂದ ಸಂಪನ್ನನಾದ ಆ ಭಗವಂತನು, ಮೂರು (ಸತ್ತ್ವರಜಸ್ತಮೋ) ಗುಣಗಳಿಂದ ಕೂಡಿದ, (ಸರ್ವವ್ಯಾಪಕನಾಗಿ) ವಿಷ್ಣುವಾಗಿರುವ ತನಗೆ ಸೇರಿದ ಮಾಯೆಯನ್ನು — ತನ್ನ ಮೂಲಪ್ರಕೃತಿಯನ್ನು ಸ್ವಾಧೀನಪಡಿಸಿಕೊಳ್ಳುತ್ತಾನೆ ಹಾಗೂ ಹುಟ್ಟಿದವನೇನೋ ಎಂಬಂತೆ ತೋರುತ್ತಾನೆ ಮತ್ತು ಜನರನ್ನು ಅನುಗ್ರಹಿಸುತ್ತಾನೆ. ಹುಟ್ಟಿಲ್ಲದವನು, ವ್ಯಯವಿಲ್ಲದವನು (ಕುಂದಿಲ್ಲದ ಜ್ಞಾನಶಕ್ತಿಯುಳ್ಳವನು), (ಚತುರ್ಮುಖಬ್ರಹ್ಮನಾದಿಯಾಗಿ ಹುಲ್ಲಿನ ಕಡ್ಡಿಯ ವರೆಗೆ) ಎಲ್ಲ ಭೂತಗಳ ಈಶ್ವರನು, ಸ್ವಭಾವದಿಂದಲೇ ನಿತ್ಯನು (ಪಾರಮಾರ್ಥಿಕವಾಗಿ ವಿಕಾರ-ವಿಲ್ಲದವನು), ಶುದ್ಧನು (ಕಾರಣರಹಿತನು), ಪ್ರಬುದ್ಧನು ಮತ್ತು ಮುಕ್ತನು (ಅವಿದ್ಯೆ-ಕಾಮ-ಕರ್ಮಗಳಿಂದ ಅಸ್ಪೃಶ್ಯನು) ಆಗಿದ್ದರೂ, ಹಾಗೆ ಮಾಡುತ್ತಾನೆ.'[1] ಹೀಗೆ, ಮಾನುಷರೂಪದಲ್ಲಿ ಪ್ರಕಟನಾಗಿ ಮನುಷ್ಯನಂತೆ ಕಾರ್ಯನಿರ್ವಹಿಸುತ್ತಿರುವಾಗಲೂ, ಈಶ್ವರನ ಸ್ವಭಾವ ಮತ್ತು ಮಹಿಮೆ ಕುಂದಿಲ್ಲದೆಯೇ ಇರುತ್ತವೆ.

ಗುರುಗಳು ಶ್ವೇತಾಶ್ವತರ-ಉಪನಿಷತ್ತಿನ 3ನೆಯ ಅಧ್ಯಾಯದ ಮೊದಲ ಮೂರು ಮಂತ್ರಗಳಲ್ಲಿ ವರ್ಣಿಸಲ್ಪಟ್ಟಿರುವ ಪರಮಾತ್ಮ, ಸರ್ವೇಶ (ಎಲ್ಲದರ ಒಡೆಯ), ಎಂಬುದನ್ನು ಈ ಶ್ಲೋಕವು ತಿಳಿಸುತ್ತದೆ. ಸರ್ವೇಶ್ವರನು ಎಲ್ಲರಿಂದಲೂ ಪೂಜಾರ್ಹನೇ ಸರಿ. ಇಲ್ಲಿ ಗುರುಗಳನ್ನು ಪರಮಾತ್ಮ ಎಂಬುದಾಗಿ ಸೂಚಿಸಿರುವುದರಿಂದ, ಮೊದಲನೆಯ ಶ್ಲೋಕದಲ್ಲಿ ಅವರಿಗೆ ನೀಡಲಾಗಿರುವ ಜಗತ್ಪೂಜ್ಯ (ಇಡೀ ಜಗತ್ತಿಗೂ ಪೂಜಾರ್ಹರು) ಎಂಬ ವಿಶೇಷಣವು ಸಂಪೂರ್ಣವಾಗಿ ಅನ್ವಯಿಸುತ್ತದೆ.

ಶ್ಲೋಕ 7 ಮತ್ತು 8

ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳು —
ಮಹಾನ್ ಜೀವನ್ಮುಕ್ತರು ಮತ್ತು ನಿರುಪಮ ಗುರುಗಳೆಂದು ಪರಿಗಣಿಸಲ್ಪಟ್ಟವರು

ತೀರೇ ತುಙ್ಗತಟಿನ್ಯಾ ಯಸ್ತತ್ತ್ವಂ ಶಿಷ್ಯಾನ್ಪ್ರಬೋಧಯನ್।
ಆಸ್ತೇ ದೇಶಿಕರಾಜಂ ತಂ ವಿದ್ಯಾತೀರ್ಥಂ ಸಮಾಶ್ರಯೇ॥ 7॥

[ತುಂಗೆಯ ತೀರದಲ್ಲಿ (ಅಂದರೆ, ಶೃಂಗೇರಿಯಲ್ಲಿ) ನೆಲೆಸಿ, ಶಿಷ್ಯರಿಗೆ ಪರತತ್ತ್ವವನ್ನು (ಬ್ರಹ್ಮವನ್ನು) ಬೋಧಿಸುತ್ತಿರುವ, (ಸಾಕ್ಷಾತ್ಕಾರವನ್ನು ನೀಡುವ ನಿರುಪಮ ಜೀವನ್ಮುಕ್ತರನ್ನಾಗಿ

[1] ಭಗವತ್ಪಾದರ ಭಗವದ್ಗೀತಾ-ಭಾಷ್ಯ — ಉಪೋದ್ಘಾತ

ಪರಿಗಣಿಸಿದಾಗ, ಮಾನುಷರೂಪದ) ಗುರುಗಳ ರಾಜರಾದ (ಪರಮಪೂಜ್ಯ ಜಗದ್ಗುರು ಶ್ರೀ) ವಿದ್ಯಾತೀರ್ಥರನ್ನು ನಾನು ಆಶ್ರಯಿಸುತ್ತೇನೆ.]

ಧರ್ಮಮಪೂರ್ವಂ ಶ್ರುತೇರ್ಯಸ್ತು ಯಥಾವದವಬೋಧಯನ್।
ಶಿಷ್ಯಾನ್ಧರ್ಮಪಥಾಸಕ್ತಾನ್ಕುರುತೇ ತಮಹಂ ಶ್ರಯೇ ॥ 8 ॥

[(ಶಾಸ್ತ್ರನಿಷ್ಣಾತರಾಗಿ) ಶಾಸ್ತ್ರಗಳ ತಾತ್ಪರ್ಯವನ್ನು ಯಥಾವತ್ತಾಗಿ ಶಿಷ್ಯರಿಗೆ ಬೋಧಿಸುತ್ತ (ಕಾಮನೆಗಳುಳ್ಳವರಿಗೆ ಧರ್ಮದ ಒಂದು ಬಗೆಯಾದ ಕರ್ಮ ಹಾಗೂ ಕರ್ತವ್ಯಗಳಿಂದ ಗುರುತಿಸಲ್ಪಟ್ಟ ಪ್ರವೃತ್ತಿಮಾರ್ಗ ಮತ್ತು ವಿರಕ್ತರಾದ ಮುಮುಕ್ಷುಗಳಿಗೆ ಇನ್ನೊಂದು ಬಗೆಯಾದ ನಿವೃತ್ತಿಮಾರ್ಗ — ಈ ದ್ವಿವಿಧ) ಧರ್ಮದ ಮಾರ್ಗದಲ್ಲಿ (ಅವರನ್ನು) ನಿಷ್ಠೆಯುಳ್ಳವರನ್ನಾಗಿ ಮಾಡುವವರನ್ನು (ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾ-ಸ್ವಾಮಿಗಳನ್ನು) ನಾನು ಆಶ್ರಯಿಸುತ್ತೇನೆ.]

7 ಮತ್ತು 8ನೆಯ ಶ್ಲೋಕಗಳಲ್ಲಿ, ಗುರುಗಳನ್ನು ಶ್ರೇಷ್ಠ ಜೀವನ್ಮುಕ್ತರನ್ನಾಗಿ ಮತ್ತು ನಿರುಪಮ ಗುರುಗಳನ್ನಾಗಿ ನಿರೂಪಿಸಲಾಗಿದೆ; 'ದೇಶಿಕರಾಜಮ್' (ಗುರುಗಳ ರಾಜ) ಎಂಬ ಪದವು ಇದನ್ನು ವ್ಯಕ್ತಪಡಿಸುತ್ತದೆ. 6ನೆಯ ಶ್ಲೋಕದಲ್ಲಿ ಗುರುಗಳನ್ನು ಸಾಕ್ಷಾತ್ ಪರಮೇಶ್ವರನಾಗಿ ವರ್ಣಿಸಿರುವುದು ಮತ್ತಿಲ್ಲಿ ಅವರನ್ನು ಜೀವನ್ಮುಕ್ತರನ್ನಾಗಿ ಹಾಗೂ ಮಾನುಷರೂಪದ ಗುರುಗಳಾಗಿ ಚಿತ್ರಿಸಿರುವುದು ಪರಸ್ಪರ ಅಸಂಗತವಲ್ಲ. ರಾಮ ಮತ್ತು ಭಗವತ್ಪಾದರು ಸದಾ ದಿವ್ಯಮೂರ್ತಿಗಳೂ, ಅಜ್ಞಾನಾತೀತರೂ ಆಗಿದ್ದರೂ, ತಮ್ಮ ನಿಜಸ್ವರೂಪದ ಅರಿವಿಲ್ಲದ-ವರೇನೋ ಎಂಬಂತೆ ಲೋಕದಲ್ಲಿ ವರ್ತಿಸಿ, ಬಳಿಕ ಅದನ್ನು ಪಡೆದವರಂತೆ ದಿವ್ಯಲೀಲೆಯನ್ನು ತೋರಿದರು. ಅದೇ ರೀತಿ, ಗುರುಗಳು ಜ್ಞಾನವಿಲ್ಲದವರಂತೆ, ತೀವ್ರ ಸಾಧನೆಯಲ್ಲಿ ತೊಡಗಿದವರಂತೆ ಹಾಗೂ ಅಂತಿಮವಾಗಿ ಜ್ಞಾನವನ್ನು ಪಡೆದ ಜೀವನ್ಮುಕ್ತರಾದವರಂತೆ ದಿವ್ಯಲೀಲೆಯನ್ನು ಪ್ರದರ್ಶಿಸಿದರು.

ರಾಮನು ದಿವ್ಯ ಅವತಾರಪುರುಷನಾಗಿದ್ದರೂ ತನ್ನ ನಿಜಸ್ವರೂಪದ ಅರಿವಿಲ್ಲದವನಂತೆ ತೋರಿಸಿಕೊಂಡನು. ಸೀತೆಯು ಜ್ವಲಿಸುತ್ತಿದ್ದ ಅಗ್ನಿಯನ್ನು ನಿರ್ಭಯವಾಗಿ ಪ್ರವೇಶಿಸಿದಾಗ, ಬ್ರಹ್ಮನು ರಾಮನ ಮುಂದೆ ಪ್ರತ್ಯಕ್ಷನಾದನು. ಬ್ರಹ್ಮನು ತನ್ನ ಮುಂದೆ ಗೌರವದಿಂದ ಕೈಜೋಡಿಸಿ ನಿಂತ ರಾಮನನ್ನು ಕುರಿತು ನೀನು ವಿಶ್ವದ ಸೃಷ್ಟಿಕರ್ತನಾಗಿದ್ದುಕೊಂಡು ಸೀತೆಯ ಅಗ್ನಿಪ್ರವೇಶವನ್ನು ತಡೆಯಲಿಲ್ಲವೇಕೆ ಎಂದು ಪ್ರಶ್ನಿಸಿದನು. ರಾಮನು ಹೀಗೆ ಉತ್ತರಿಸಿದನು: 'ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ — ನಾನು ನನ್ನನ್ನು ದಶರಥನ ಮಗನಾದ ರಾಮನಾಗಿ ಮನುಷ್ಯನೆಂದು ಭಾವಿಸುತ್ತೇನೆ.'[1] ನಂತರ ತಾನು ವಾಸ್ತವವಾಗಿ ಯಾರೆಂಬುದನ್ನೂ, ಎಲ್ಲಿಂದ ಬಂದೆನೆಂಬುದನ್ನೂ ತಿಳಿಸೆಂದು ರಾಮನು ಬ್ರಹ್ಮನನ್ನು ಕೇಳಿದನು.

[1] ರಾಮಾಯಣ (ಗೀತಾ ಪ್ರೆಸ್ ಆವೃತ್ತಿ) 6.117.11

ರಾಮನು ಸ್ವತಃ ಭಗವಾನ್ ನಾರಾಯಣನು, ಅವಿನಾಶಿಯಾದ ಪರಬ್ರಹ್ಮ ಮತ್ತು ರಾವಣಸಂಹಾರಕ್ಕಾಗಿ ಮಾನುಷರೂಪವನ್ನು ಧರಿಸಿದವನೆಂದು ಬ್ರಹ್ಮನು ಖಚಿತವಾಗಿ ತಿಳಿಸಿದನು. ಹೀಗೆ, ರಾಮನು ತನ್ನ ನಿಜಸ್ವರೂಪದ ಅರಿವಿಲ್ಲದವನಂತಿದ್ದು, ಬ್ರಹ್ಮನ ಮಾತುಗಳನ್ನು ಕೇಳಿದ ಬಳಿಕ ಅದನ್ನು ಅರಿತುಕೊಂಡವನಂತಾದನು. 'ತತ್ತ್ವಮಸಿ — ನೀನು ಅದು ಆಗಿದ್ದೀಯೆ'[1] ಎಂಬ ಮಹಾವಾಕ್ಯವನ್ನು ಕೇಳಿದಾಗ ಮೋಹವು ನಶಿಸಿಹೋಗುತ್ತದೆ ಎಂಬುದಕ್ಕೆ ದೃಷ್ಟಾಂತವಾಗಿ ಭಗವತ್ಪಾದರು ಈ ಘಟನೆಯನ್ನು ಉಲ್ಲೇಖಿಸಿದ್ದಾರೆ: 'ಬ್ರಹ್ಮಾ ದಾಶರಥೇರ್ಯದ್ವದುಕ್ಥ್ಯವಾಪಾನುದತ್ತಮಃ । ತಸ್ಯ ವಿಷ್ಣುತ್ವಸಮ್ಬೋಧೇ ನ ಯತ್ನಾನ್ತರ-ಮೂಚಿವಾನ್ — ದಶರಥಪುತ್ರನು (ರಾಮನು) ವಿಷ್ಣುವೆಂದು ಬ್ರಹ್ಮನು ಹೇಳಿದ ಮಾತ್ರಕ್ಕೆ ರಾಮನ ಅಜ್ಞಾನವನ್ನು ಹೇಗೆ ನಿವಾರಿಸಿದನೋ, ಹಾಗೆಯೇ ಇದು. ತನ್ನ ವಿಷ್ಣುಸ್ವರೂಪವನ್ನು ಅರಿಯಲು ರಾಮನಿಗೆ ಬೇರೆ ಯಾವುದೇ ಪ್ರಯತ್ನವನ್ನು ಹೇಳಲಿಲ್ಲ.'[2] ಯೋಗ-ವಾಸಿಷ್ಠದ ಪ್ರಕಾರ, ಯುವಕನಾದ ರಾಮನು ತೀರ್ಥಯಾತ್ರೆಗೆ ತೆರಳಿ, ಕಂಡುಬರುವುದೆಲ್ಲವೂ ನಶ್ವರವೆಂದು ಅರಿತು ನಿರುತ್ಸಾಹದಿಂದ ಹಿಂದಿರುಗಿದನು. ವಸಿಷ್ಠಮಹರ್ಷಿಗಳು ಅವನಿಗೆ ಅದ್ವೈತ ತತ್ತ್ವವನ್ನು ಬೋಧಿಸಿದರು. ರಾಮನು ಪ್ರಬುದ್ಧನಾಗಿ, ಮಹರ್ಷಿಗಳ ಅನುಗ್ರಹದಿಂದ ತಾನು ಎಲ್ಲ ವಿಧಿನಿಷೇಧಗಳನ್ನೂ ಮೀರಿ ಇರುವುದಾಗಿ ಹೇಳಿದನು.[3] ನಿತ್ಯಮುಕ್ತನೂ, ಪರಿಪೂರ್ಣನೂ ಆದ ಭಗವಂತನು ವಾಮನ ಮತ್ತು ಕೃಷ್ಣನಾಗಿ ಅವತರಿಸಿದಾಗ, ಮೊದಲು ಅಜ್ಞಾನಿಯಾಗಿದ್ದು ಅನಂತರ ಜ್ಞಾನವನ್ನು ಪಡೆದವನಂತೆ ವರ್ತಿಸಲಿಲ್ಲ. ಆದರೆ (ರಾಮಾಯಣ ಮತ್ತು ಯೋಗ-ವಾಸಿಷ್ಠದಲ್ಲಿ ನಿರೂಪಿಸಿರುವಂತೆ) ರಾಮನಾಗಿ ಹಾಗೆ ನಡೆದುಕೊಂಡನು.

ಭಗವತ್ಪಾದರು ನಿಶ್ಚಯವಾಗಿ ಭಗವಂತನ ಅವತಾರವಾಗಿದ್ದರು. ಅವರ ಶಿಷ್ಯರಾದ ತೋಟಕಾಚಾರ್ಯರು ಖಚಿತವಾಗಿ ಹೀಗೆ ಘೋಷಿಸಿದ್ದಾರೆ: 'ಭವ ಏವ ಭವಾನ್ — ತಾವು ವಾಸ್ತವವಾಗಿ ಭವನೇ (ಶಿವನೇ).'[4] ಪದ್ಮಪಾದಾಚಾರ್ಯರು ತಮ್ಮ ಒಂದು ಮಂಗಳ-ಶ್ಲೋಕದಲ್ಲಿ ಇದನ್ನು ಅತ್ಯಂತ ಮನೋಹರವಾಗಿ ಸೂಚಿಸಿದ್ದಾರೆ. ಅದರಲ್ಲಿ ಪ್ರತಿಯೊಂದು ಪದವೂ ಒಂದು ರೀತಿಯಲ್ಲಿ ಅರ್ಥೈಸಿದಾಗ ಭಗವತ್ಪಾದರನ್ನು, ಮತ್ತೊಂದು ರೀತಿಯಲ್ಲಿ ಅರ್ಥೈಸಿದಾಗ ಶಿವನನ್ನು ಸೂಚಿಸುತ್ತದೆ.[5] ಭಗವತ್ಪಾದರ ಜೀವನ ಮತ್ತು ಸಾಧನೆಗಳನ್ನು ವಿವರಿಸುವ ಮಾಧವೀಯ-ಶಂಕರ-ವಿಜಯವು ಅವರನ್ನು ನಿಸ್ಸಂದಿಗ್ಧವಾಗಿ ಶಿವನ ಅವತಾರವೆಂದು ನಿರೂಪಿಸುತ್ತದೆ. ಭಗವತ್ಪಾದರು ಭಗವಂತನ ಅವತಾರರಾಗಿದ್ದರೂ, ತಾವು ಸಂಸಾರದಲ್ಲಿ ಸಿಲುಕಿದ್ದರೆಂದೂ, ತಮ್ಮ ಗುರುಗಳಿಂದ ಜ್ಞಾನವನ್ನು ಪಡೆದು ಸಾಕ್ಷಾತ್ಕಾರವನ್ನು

[1] ಛಾಂದೋಗ್ಯ-ಉಪನಿಷತ್ 6.8.7

[2] ಉಪದೇಶ-ಸಾಹಸ್ರೀ, ಪದ್ಯಭಾಗ 18.100

[3] ಲಘು-ಯೋಗ-ವಾಸಿಷ್ಠ 1.1.83; 6.18.74

[4] ತೋಟಕಾಷ್ಟಕ 4

[5] ಪಂಚಪಾದಿಕಾ, ಮಂಗಳಶ್ಲೋಕ 3

ಹೊಂದಿ ಅದರಿಂದ ಮುಕ್ತರಾದರೆಂದೂ ಹೇಳಿದ್ದಾರೆ. ತಮ್ಮ ಮಾಂಡೂಕ್ಯ-ಉಪನಿಷತ್-ಕಾರಿಕಾ-ಭಾಷ್ಯದ ಕೊನೆಯಲ್ಲಿ ಹೀಗೆ ಹೇಳಿದ್ದಾರೆ: 'ಯತ್ಪ್ರಜ್ಞಾಲೋಕಭಾಸಾ ಪ್ರತಿಹತಮ-ಗಮತ್ತ್ವಾಂತಮೋಹಾನ್ಧಕಾರೋ ಮಜ್ಜೋನ್ಮಜ್ಜಚ್ಚ ಘೋರೇ ಹ್ಯಸಕೃದುಪಜನೋದನ್ವತಿ ತ್ರಾಸನೇ ಮೇ — ಯಾರ ಜ್ಞಾನವೆಂಬ ಬೆಳಕಿನಿಂದ ನನ್ನ ಅಂತಃಕರಣದಲ್ಲಿದ್ದ ಮೋಹವೆಂಬ ಅಂಧಕಾರವು ನಾಶವಾಯಿತೋ ಮತ್ತು ಅನೇಕ ಜನ್ಮಗಳುಳ್ಳ ಈ ಭಯಾನಕವಾದ ಸಂಸಾರಸಾಗರದಲ್ಲಿ ಮತ್ತೆ ಮತ್ತೆ ಮುಳುಗಿ ಮೇಲೇಳುವ ರೂಪದ ನನ್ನ ಭಯವು ಶಾಶ್ವತವಾಗಿ ಕೊನೆಗೊಂಡಿತೋ, ಆ ನನ್ನ ಗುರುಗಳ ಪಾವನ ಪಾದಗಳಿಗೆ ನಾನು ನನ್ನ ಸರ್ವಸ್ವದಿಂದ ನಮಸ್ಕರಿಸುತ್ತೇನೆ.'[1] ಗುರುಗಳ ಗುರುಗಳಾದ ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು, ಗುರುಗಳ ತೀವ್ರ ಸಾಧನೆಯ ಮಾರ್ಗದರ್ಶನವನ್ನು ಮಾಡಿ, ಅದರ ಅನುಷ್ಠಾನವನ್ನು ಗಮನಿಸುತ್ತಿದ್ದು ಆಶೀರ್ವದಿಸಿದರು. 1935ರ ಡಿಸೆಂಬರ್ 12ರ ಸಂಜೆ, ಬೆಟ್ಟದ ಶಿಖರದಲ್ಲಿ ಬ್ರಹ್ಮಜ್ಞಾನವನ್ನು ಪಡೆದ ಗುರುಗಳು ತಮ್ಮ ಗುರುಗಳ ಬಳಿಗೆ ಹೋದರು. ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು, ತಮ್ಮ ಶಿಷ್ಯರು ಜ್ಞಾನವನ್ನು ಪಡೆದು ಜೀವನ್ಮುಕ್ತರಾಗಿದ್ದಾರೆ ಎಂಬುದನ್ನು ಆ ಕ್ಷಣವೇ ತಾವಾಗಿಯೇ ಮನಗಂಡರು. ಗುರುಗಳು ಯಾವೊಂದು ಮಾತನ್ನೂ ಆಡುವುದಕ್ಕೂ ಮುನ್ನವೇ, ಅವರ ಗುರುಗಳು ಜೀವನ್ಮುಕ್ತಿಯ ಕುರಿತು ಶ್ರುತಿ ಮತ್ತು ಸ್ಮೃತಿಗಳಲ್ಲಿರುವ ವಾಕ್ಯಗಳನ್ನು ಉಲ್ಲೇಖಿಸಿ, ಅವೆಲ್ಲವೂ ಆಗ ಗುರುಗಳಿಗೆ ಅನ್ವಯಿಸುತ್ತವೆ ಎಂದು ದೃಢವಾಗಿ ಘೋಷಿಸಿದರು. ಆದಾಗ್ಯೂ, ಕೆಲವು ತಿಂಗಳುಗಳ ಬಳಿಕ ಗುರುಗಳು ಹಲವು ತಿಂಗಳ ಕಾಲ ಬೆಂಗಳೂರಿನಲ್ಲಿ ತಂಗಲು ಹೊರಡಬೇಕಾಗಿದ್ದಾಗ, ಅವರ ಗುರುಗಳು ಹೀಗೆ ಸ್ಪಷ್ಟವಾಗಿ ಹೇಳಿದರು: 'ನೀವು ವಾಸ್ತವವಾಗಿ ಸಾಕ್ಷಾತ್ ಪರಮೇಶ್ವರನೆಂಬುದು ನನಗೆ ತಿಳಿದಿದೆ; ಮೋಕ್ಷವನ್ನು ಪಡೆಯಲು ನೀವು ನಡೆಸಿದ ತೀವ್ರವಾದ ಆಧ್ಯಾತ್ಮಿಕ ಸಾಧನೆಯೆಲ್ಲವೂ ನಿಮ್ಮ ದಿವ್ಯಲೀಲೆಯಷ್ಟೇ; ಮತ್ತು 1935ರ ಡಿಸೆಂಬರ್ 5ರಂದು ನೀವು ಶಿವನ ಸಾಕ್ಷಾತ್ ದರ್ಶನವನ್ನು ಮತ್ತವನ ಅನುಗ್ರಹವನ್ನು ಪಡೆದದ್ದೂ, ಕೃಷ್ಣನು ಶಿವನ ದರ್ಶನವನ್ನು ಪಡೆದು ಪುತ್ರಪ್ರಾಪ್ತಿಗಾಗಿ ವರವನ್ನು ಪಡೆದದ್ದಕ್ಕೆ ಸಮಾನವಾದ ದಿವ್ಯಲೀಲೆಯಷ್ಟೇ.'[2] ಕೆಲವು ವರ್ಷಗಳ ಬಳಿಕ, ಸುಭಾನು ಸಂವತ್ಸರದ ಆಶ್ವಯುಜದಲ್ಲಿ (ಅಂದರೆ 30.9.1943 ರಿಂದ 29.10.1943ರ ನಡುವಿನ ಅವಧಿಯಲ್ಲಿ), ಅವರು ಗುರುಗಳ ಕುರಿತು ಏಳು ಶ್ಲೋಕಗಳನ್ನು ರಚಿಸಿದರು. ಅವುಗಳಲ್ಲೊಂದರಲ್ಲಿ ಹೀಗೆಂದಿದ್ದಾರೆ: 'ನಿಖಿಲ-ಜಗತೀರಕ್ಷಣಚಣಂ...ಪರಬ್ರಹ್ಮಾಕಾರಂ ಪ್ರಣವವಿದಿತಂ...ಗುರುಂ ವಿದ್ಯಾತೀರ್ಥಂ ಕಲಯತ ಬುಧಾಶ್ಚಿತ್ತಕಮಲೇ — ಓ ಬುದ್ಧಿವಂತರೆ, ಸಮಸ್ತ ಜಗತ್ತನ್ನು ರಕ್ಷಿಸುವಲ್ಲಿ ಸಮರ್ಥರಾದ,

---

[1] ಮಾಂಡೂಕ್ಯ-ಉಪನಿಷತ್-ಕಾರಿಕಾ-ಭಾಷ್ಯ, ಸಮಾಪನ ಶ್ಲೋಕ

[2] ಮಹಾಭಾರತ (BORI ವಿಮರ್ಶಾತ್ಮಕ ಆವೃತ್ತಿ), 13.15.10 (ಕೃಷ್ಣನ ಶಿವದರ್ಶನ); 13.15.51 (ಶಿವನು ವರಗಳನ್ನು ನೀಡುವುದಾಗಿ ಹೇಳುವುದು); 13.16.2 (ಕೃಷ್ಣನು ತಾನು ಬಯಸಿದ ವರಗಳನ್ನು ನಿರ್ದಿಷ್ಟಪಡಿಸುವುದು); 13.16.3 (ಕೃಷ್ಣನು ಕೇಳಿದ ವರಗಳನ್ನು ಶಿವನು ನೀಡುವುದು)

ಪರಬ್ರಹ್ಮಸ್ವರೂಪರಾದ, ಪ್ರಣವವಾದ (ಓಂ-ಕಾರದ) ಮೂಲಕ ತಿಳಿಯಬಹುದಾದ ಗುರು ವಿದ್ಯಾತೀರ್ಥರನ್ನು ನಿಮ್ಮ ಹೃದಯಕಮಲದಲ್ಲಿ ನೆಲೆನಿಲ್ಲಿಸಿ.' ಇದಕ್ಕೆ ಸಂಬಂಧಿಸಿದಂತೆ ಅವರು ಗುರುಗಳಿಗೆ ಹೀಗೆ ಹೇಳಿದರು: 'ನನಗೆ ನಿಶ್ಚಯವಾಗಿ ಸತ್ಯವೆಂದು ತಿಳಿದಿರುವುದನ್ನು ಮಾತ್ರ ನಾನು ಬರೆದಿದ್ದೇನೆ. ಇಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ.' ಹೀಗೆ, ಅವರ ಗುರುಗಳು ಗುರುಗಳನ್ನು ಜೀವನ್ಮುಕ್ತರಾಗಿಯೂ ಸಾಕ್ಷಾತ್ ಪರಮೇಶ್ವರರಾಗಿಯೂ ನಿರೂಪಿಸಿದರು. ಅದೇ ರೀತಿ, ಈ ಸ್ತೋತ್ರದಲ್ಲೂ 4ರಿಂದ 6ನೆಯ ಶ್ಲೋಕಗಳಲ್ಲಿ ಗುರುಗಳನ್ನು ಭಗವಂತನೆಂದೂ, 7 ಮತ್ತು 8ನೆಯ ಶ್ಲೋಕಗಳಲ್ಲಿ ಮಹಾನ್ ಜೀವನ್ಮುಕ್ತ-ಗುರುಗಳೆಂದೂ ಹೇಳಲಾಗಿದೆ.

7ನೆಯ ಶ್ಲೋಕದಲ್ಲಿ ಗುರುಗಳನ್ನು ಅನುಪಮ ಮಾನುಷ-ಗುರು ಎಂದು ಚಿತ್ರಿಸಿರುವುದನ್ನು ಅಲ್ಲಿನ 'ದೇಶಿಕರಾಜಮ್ — ಗುರುಗಳ ರಾಜ' ಎಂಬ ಪದವು ಸೂಚಿಸುತ್ತದೆ. 7ನೆಯ ಶ್ಲೋಕ ಮತ್ತು 4ನೆಯ ಶ್ಲೋಕಗಳನ್ನು ಒಟ್ಟುಗೂಡಿಸಿ ನೋಡಿದಾಗ ಇದು ಇನ್ನಷ್ಟು ಸ್ಪಷ್ಟವಾಗುತ್ತದೆ. ಎರಡೂ ಶ್ಲೋಕಗಳಲ್ಲೂ ಬೋಧಿಸಿರುವ ವಿಷಯವು 'ತತ್ತ್ವಮ್ — (ಅದ್ವಯ ಪರಬ್ರಹ್ಮವಾದ ಸತ್ಯ)' ಎಂದೇ ಹೇಳಲಾಗಿದೆ. ತತ್ತ್ವಬೋಧನೆಯು ಶೃಂಗೇರಿಯಲ್ಲಿ ನಡೆಯುತ್ತದೆ ಎಂಬುದನ್ನು 4ನೆಯ ಶ್ಲೋಕದಲ್ಲಿ 'ಶೃಂಗಾದ್ರೌ' ಎಂಬ ಪದದಿಂದ ಮತ್ತು 7ನೆಯ ಶ್ಲೋಕದಲ್ಲಿ 'ತೀರೇ ತುಙ್ಗತಟಿನ್ಯಾಃ — ತುಂಗಾನದಿಯ ತೀರದಲ್ಲಿ' ಎಂಬ ಮಾತುಗಳಿಂದ ಸೂಚಿಸಲಾಗಿದೆ. ಎರಡೂ ಶ್ಲೋಕಗಳಲ್ಲಿ ಬೋಧಿಸುವ ಕ್ರಿಯೆಯನ್ನು ಒಂದೇ ಧಾತು 'ಬುಧ್'[1] ಮೂಲಕ ವ್ಯಕ್ತಪಡಿಸಲಾಗಿದೆ. ಮುಖ್ಯವಾದ ವ್ಯತ್ಯಾಸವೇನೆಂದರೆ, 4ನೆಯ ಶ್ಲೋಕವು ಭಗವಂತನನ್ನು ಗುರುಗಳ ರೂಪದಲ್ಲಿ ಪ್ರಕಟವಾಗಿ ಶೃಂಗೇರಿಯಲ್ಲಿ ಪರಬ್ರಹ್ಮತತ್ತ್ವವನ್ನು ಬೋಧಿಸುವವರಾಗಿ ನಿರೂಪಿಸುತ್ತದೆ; ಆದರೆ, 7ನೆಯ ಶ್ಲೋಕವು ಗುರುಗಳನ್ನು ಅನುಪಮ ಮಾನುಷ-ಗುರುಗಳಾಗಿ 'ದೇಶಿಕರಾಜ (ಗುರುಗಳ ರಾಜ)' ರೂಪದಲ್ಲಿ ಶೃಂಗೇರಿಯಲ್ಲಿ ತತ್ತ್ವವನ್ನು ಬೋಧಿಸುವವರಾಗಿ ನಿರೂಪಿಸುತ್ತದೆ.

ಇಲ್ಲಿ ಗುರುಗಳು ಶೃಂಗೇರಿಯಲ್ಲಿ ಶಿಷ್ಯರಿಗೆ ಜ್ಞಾನವನ್ನು ನೀಡುವ 'ದೇಶಿಕರಾಜ (ಗುರುಗಳ ರಾಜ)' ಎಂದು ಹೇಳಿರುವುದರಿಂದ, ಅವರು ಶಾಸ್ತ್ರದಲ್ಲಿ ಪಾರಂಗತರಾದ, ಅಪಾರ ಅವ್ಯಾಜ ಕರುಣೆಯುಳ್ಳ ಮಹಾನ್ ಜೀವನ್ಮುಕ್ತ-ಗುರುಗಳು ಎಂದು ಪರಿಗಣಿಸಲ್ಪಟ್ಟಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಬ್ರಹ್ಮವನ್ನು ಪ್ರಕಟಿಸುವ ಗುರುವಿನ ಕುರಿತು ವಿವಿಧ ಶಾಸ್ತ್ರವಾಕ್ಯಗಳು ಇದನ್ನು ದೃಢಪಡಿಸುತ್ತವೆ. ತತ್ತ್ವಸಾಕ್ಷಾತ್ಕಾರಕ್ಕಾಗಿ ಈ ರೀತಿಯ ಗುರುವನ್ನು ಸೂಕ್ತ ರೀತಿಯಲ್ಲಿ ಅರಸಬೇಕೆಂದು ಮುಂಡಕ-ಉಪನಿಷತ್ತು ವಿಧಿಸುತ್ತದೆ: 'ಗುರುಂ ಶ್ರೋತ್ರಿಯಂ ಬ್ರಹ್ಮನಿಷ್ಠಮ್ — ಶಾಸ್ತ್ರಪಾರಂಗತ ಪರಬ್ರಹ್ಮನಿಷ್ಠ ಗುರುವನ್ನು.'[2] ಅಂದರೆ ಶಾಸ್ತ್ರದಲ್ಲಿ ಚೆನ್ನಾಗಿ ನುರಿತ ಜೀವನ್ಮುಕ್ತರನ್ನು ಎಂದರ್ಥ. ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಈ ಗುರುವು, 'ಶಮದಮಾದಿ-

[1] ಬುಧ್ ಬೋಧನೇ (ಧಾತುಪಾಠ). ಇದರ ಪ್ರಯೋಜಕ ರೂಪ ಬೋಧಯತೇ (ಬೋಧಿಸುತ್ತಾನೆ) ಎಂದು 4ನೆಯ ಶ್ಲೋಕದಲ್ಲಿ ಮತ್ತು ಬೋಧಯನ್ (ಬೋಧಿಸುತ್ತ) ಎಂದು 7ನೆಯ ಶ್ಲೋಕದಲ್ಲಿ ಇರುತ್ತವೆ.

[2] ಮುಂಡಕ-ಉಪನಿಷತ್ 1.2.12

ಸಮ್ಪನ್ನಮ್ — ಮನಸ್ಸು ಮತ್ತು ಇಂದ್ರಿಯಗಳ ಮೇಲೆ ಸಂಪೂರ್ಣ ನಿಯಂತ್ರಣ, ಕರುಣೆ ಮೊದಲಾದ ಗುಣಗಳಿಂದ ಸಂಪನ್ನನಾಗಿರುವವನು',[1] ಎಂದು ಸೂಚಿಸುತ್ತಾರೆ. ಕಠ-ಉಪನಿಷತ್ತು ಹೀಗೆ ಹೇಳುತ್ತದೆ: 'ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುಧಾ ಚಿನ್ಯಮಾನಃ । ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ — ಜ್ಞಾನವನ್ನು ಹೊಂದದಿರುವ ವ್ಯಕ್ತಿಯಿಂದ ಬೋಧಿಸಲ್ಪಟ್ಟರೆ ಈ ಆತ್ಮನನ್ನು ಅರಿತುಕೊಳ್ಳಲು ಸಾಧ್ಯವಿಲ್ಲ; ಏಕೆಂದರೆ ಅದನ್ನು ಅನೇಕ ರೀತಿಯಲ್ಲಿ ಕಲ್ಪಿಸಲಾಗುತ್ತದೆ. ಆತ್ಮನೊಂದಿಗೆ ಅಭಿನ್ನನಾದವನಿಂದ ಬೋಧಿಸಲ್ಪಟ್ಟಾಗ ಇಲ್ಲಿ ಯಾವುದೇ ಅಗ್ರಹಣ ಉಳಿಯುವುದಿಲ್ಲ (ಸಾಕ್ಷಾತ್ಕಾರ ಉಂಟಾಗುತ್ತದೆ).'[2] ಶಿಷ್ಯನಿಗೆ ಮುಕ್ತಿದಾಯಕ ಜ್ಞಾನವನ್ನು ಉಂಟುಮಾಡಬಲ್ಲ ಗುರುವಿನ ಲಕ್ಷಣವನ್ನು ವಿವೇಕ-ಚೂಡಾಮಣಿಯಲ್ಲಿ ಭಗವತ್ಪಾದರು ಹೀಗೆ ನಿರೂಪಿಸುತ್ತಾರೆ: 'ಶ್ರೋತ್ರಿಯೋಽವೃಜಿನೋ-ಽಕಾಮಹತೋ ಯೋ ಬ್ರಹ್ಮವಿತ್ತಮಃ । ಬ್ರಹ್ಮಣ್ಯುಪರತಃ ಶಾಂತೋ ನಿರಿಂಧನ ಇವಾನಲಃ ॥ ಅಹೈತುಕದಯಾಸಿಂಧುರ್ಬನ್ಧುರಾನಮತಾಂ ಸತಾಮ್ — ಅವರು ಶಾಸ್ತ್ರಪಾರಂಗತರು, ಪಾಪರಹಿತರು, ಬಯಕೆಗಳಿಂದ ಬಾಧಿತರಾಗದವರು, ಶ್ರೇಷ್ಠ ಬ್ರಹ್ಮಜ್ಞಾನಿಗಳು, ಬ್ರಹ್ಮದಲ್ಲಿ ಲೀನವಾದ ಮನಸ್ಸುಳ್ಳವರು, ಇಂಧನವಿಲ್ಲದ ಅಗ್ನಿಯಂತೆ ಶಾಂತರು; ಅವ್ಯಾಜ ಕರುಣಾ-ಸಾಗರರು ಮತ್ತು ತಮಗೆ ನಮಸ್ಕರಿಸುವ ಸಜ್ಜನರ ಎಲ್ಲ ದುಃಖಗಳನ್ನು ನಿವಾರಿಸುವ ಬಂಧುಗಳು.'[3] ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ವಿವೇಕ-ಚೂಡಾಮಣಿಯ ತಮ್ಮ ಪ್ರಮಾಣಭೂತ ವ್ಯಾಖ್ಯಾನದಲ್ಲಿ ಜ್ಞಾನಿಯಾದ ಗುರುವಿನ ಕರುಣೆಯು ಅಕಾರಣವಾದದ್ದು ಎಂಬುದನ್ನು ಈ ರೀತಿಯಾಗಿ ವಿವರಿಸಿದ್ದಾರೆ: 'ದಯಾ ಪರದುಃಖಪ್ರಹಾಣೇಚ್ಛಾ...ಇತರಸ್ಯ ದಯಾಲೋರಪಿ ಅನ್ಯತ್ರ ದುಃಖದರ್ಶನೇನ ಸ್ವಸ್ಯಾಪಿ ಜಾತದುಃಖತ್ವಾತ್..ಅಸ್ಯ ತು ಜ್ಞಾನಮಹಿಮ್ನಾ ಸ್ವತೋ ವಾ ಪರತೋ ವಾ ದುಃಖಾಪ್ರಸಕ್ತೇಃ ಕೇವಲಂ ಜನಾಸ್ತರನ್ತು ಸಂಸಾರವಾರಿಧಿಮಿತಿ ಇಚ್ಛಾ ಪರಂ ವ್ಯುತ್ಥಾನಕಾಲೇ — ದಯೆ ಎಂದರೆ ಇನ್ನೊಬ್ಬರ ದುಃಖವನ್ನು ನಿವಾರಿಸಬೇಕೆಂಬ ಇಚ್ಛೆ. ಅಜ್ಞಾನಿಯಾದ ಕರುಣಾಶೀಲನ ವಿಷಯದಲ್ಲಿ, ಮತ್ತೊಬ್ಬನ ದುಃಖವನ್ನು ಕಂಡಾಗ ತನಗೂ ದುಃಖ ಉಂಟಾಗುತ್ತದೆ...ಆದರೆ, ಈ ಜ್ಞಾನಿಯ ವಿಷಯದಲ್ಲಿ ಬ್ರಹ್ಮಜ್ಞಾನದ ಮಹಿಮೆಯಿಂದ, ತನ್ನ ಕಾರಣದಿಂದಾಗಲಿ ಮತ್ತೊಬ್ಬರ ಕಾರಣದಿಂದಾಗಲಿ ಅವನಿಗೆ ನಿಜವಾಗಿ ದುಃಖ ಉಂಟಾಗುವ ಪ್ರಶ್ನೆಯೇ ಇಲ್ಲ. ಆದರೂ, ಸಮಾಧಿಯಿಂದ ಹೊರಬಂದಾಗ, ಜನರು ಸಂಸಾರಸಾಗರವನ್ನು (ಎಲ್ಲ ದುಃಖವನ್ನು) ದಾಟಲಿ ಎಂಬ (ಇತರರ ಪೀಡೆಯಿಂದ, ತನಗೆ ನಿಜಕ್ಕೂ ದುಃಖವಾಗುತ್ತದೆ ಎಂಬ ಪ್ರೇರಣೆಯಿಂದಲ್ಲದ) ಸ್ವಾಭಾವಿಕವಾದ ಇಚ್ಛೆ ಮಾತ್ರ ಅವನಲ್ಲಿ ಇರುತ್ತದೆ.' ಹೀಗಾಗಿ, ಶಿಷ್ಯರಿಗೆ ಸತ್ಯವನ್ನು ಬೋಧಿಸುವ ದೇಶಿಕರಾಜರಾದ ಗುರುಗಳನ್ನು, ಶಾಸ್ತ್ರದಲ್ಲಿ ಸಂಪೂರ್ಣ

---

[1] ಮುಂಡಕ-ಉಪನಿಷತ್ 1.2.12ರ ಭಾಷ್ಯ

[2] ಕಠ-ಉಪನಿಷತ್ 1.2.8

[3] ವಿವೇಕ-ಚೂಡಾಮಣಿ 33

ಪಾರಂಗತರಾದ, ಅಪಾರ ಮತ್ತು ಅಕಾರಣ ಕರುಣೆಯುಳ್ಳ, ಶ್ರೇಷ್ಠ ಜೀವನ್ಮುಕ್ತ-ಗುರುಗಳು ಎಂದು ಪರಿಗಣಿಸದೆ ಇರಲು ಸಾಧ್ಯವಿಲ್ಲ.

ಗುರುಗಳು ಸತ್ಯದಲ್ಲಿ ಅಚಲವಾಗಿ ಸ್ಥಿತರಾಗಿದ್ದರು ಎಂಬುದನ್ನು ನಿಸ್ಸಂದಿಗ್ಧವಾಗಿ ತೋರಿಸುವ ಅನೇಕ ಘಟನೆಗಳಿವೆ. 1983ರ ಫೆಬ್ರವರಿ 22ರಂದು ಅವರಿಗೆ ಆಂಜೈನದ (angina) ಕಾರಣ, ಎದೆಯಲ್ಲಿ ತೀವ್ರವಾದ ನೋವು ಮತ್ತು ಎಡಗೈಯಲ್ಲಿ ಮಂದವಾದ ನೋವುಂಟಾಯಿತು. ಸಂಜೆ ಸುಮಾರು 6:30ಕ್ಕೆ ಅವರಿಗೆ ಸ್ನಾಯುವಿನೊಳಗೆ ಮಾರ್ಫೀನ್ (intramuscular morphine) ಚುಚ್ಚುಮದ್ದನ್ನು ನೀಡಲಾಯಿತು. ಅವರು ಒಂದು ಸಾಧಾರಣವಾದ ಮರದ ಹಲಗೆಯ ಮೇಲೆ ವಿಶ್ರಮಿಸುತ್ತಿದ್ದರು. ಶೀಘ್ರದಲ್ಲೇ ಅವರು ಅರೆ-ಅಚೇತನ ಸ್ಥಿತಿಗೆ ಜಾರಿದರು. ಆಗಿನ ಶೃಂಗೇರಿ ಮಠದ ಆಡಳಿತಾಧಿಕಾರಿಗಳಾದ ಗಿರಿಧರ ಶಾಸ್ತ್ರಿಗಳೂ ನಾನೂ ಪಕ್ಕದಲ್ಲಿ ನೆಲದ ಮೇಲೆ ಕುಳಿತಿದ್ದೆವು. ತಾವು ಏನನ್ನು ನುಡಿಯುತ್ತಿದ್ದೇವೆಂಬುದರ ಅರಿವೇ ಬಹುತೇಕ ಇಲ್ಲದ ಆ ಸ್ಥಿತಿಯಲ್ಲಿದ್ದರೂ, ಗುರುಗಳು ಒಂದು ಶ್ಲೋಕವನ್ನು ಮೆಲ್ಲನೆ ಉಚ್ಚರಿಸಿದರು. ಆ ಶ್ಲೋಕದ ಕೊನೆಯ ಪಾದ ಹೀಗಿದೆ: 'ಮತಿಕೃತಗುಣದೋಷಾ ಮಾಂ ವಿಭುಂ ನ ಸ್ಪೃಶನ್ತಿ — ಬುದ್ಧಿಯಿಂದ ಉಂಟಾಗುವ ಪುಣ್ಯ ಮತ್ತು ಪಾಪಕರ್ಮಗಳು ಸರ್ವವ್ಯಾಪಿಯಾದ ನನ್ನನ್ನು ಸ್ಪರ್ಶಿಸುವುದಿಲ್ಲ. (ವೇದಾಂತದ ದೃಷ್ಟಿಯಲ್ಲಿ, ಚಿನ್ನವು ಚಿನ್ನದ ಆಭರಣದ ಅಸ್ತಿತ್ವಕ್ಕೆ ಆಧಾರವಾಗಿರುವಂತೆ, ಸರ್ವವ್ಯಾಪಿಯಾದ ಆತ್ಮನು ಎಲ್ಲೆಡೆ, ಎಲ್ಲ ಕಾಲದಲ್ಲೂ, ಎಲ್ಲ ವಸ್ತುಗಳ ಅಸ್ತಿತ್ವಕ್ಕೆ ಆಧಾರವಾಗಿರುವುದರಿಂದ 'ವಿಭು' ಎಂದು ಹೇಳಲಾಗಿದೆ.)' ನೋವನ್ನು ಅನುಭವಿಸುತ್ತ ಇದ್ದಾಗಲೂ ಮತ್ತು ಕೇವಲ ಅರೆ-ಪ್ರಜ್ಞಾವಸ್ಥೆಯಲ್ಲಿದ್ದಾಗಲೂ ತತ್ತ್ವವನ್ನು ದೃಢವಾಗಿ ನುಡಿಯಬಲ್ಲವರು ಜೀವನ್ಮುಕ್ತರಲ್ಲದೆ ಮತ್ತಾರು ತಾನೆ ಆಗಿರಲು ಸಾಧ್ಯ? 1989ರ ಆಗಸ್ಟ್‌ನಲ್ಲಿ, ಗುರುಗಳು ತಮ್ಮ ಭೌತಿಕ ಶರೀರವನ್ನು ತ್ಯಜಿಸುವ ಒಂದು ತಿಂಗಳ ಮುನ್ನ, ನಾನು ಅವರನ್ನು, 'ಕಳೆದ ವರ್ಷಗಳಲ್ಲಿ ತೀವ್ರವಾದ ಕೋಪ, ಚಿಂತೆ ಅಥವಾ ದುಃಖವು, ಸ್ವಲ್ಪ ಸಮಯವಾದರೂ, ಅದರ ಮಿಥ್ಯಾತ್ವದ ಅರಿವಿಲ್ಲದೆ ಗುರುಗಳ ಮನಸ್ಸಿನಲ್ಲಿ ಕಾಣಿಸಿಕೊಂಡಿದೆಯೇ?' ಎಂದು ಕೇಳಿದೆ. ಅದಕ್ಕವರು, 'ಇಲ್ಲ, ಎಂದಿಗೂ ಇಲ್ಲ. ಬಹಳ ತೀವ್ರ ನೋವಿನ ಸಂದರ್ಭದಲ್ಲೂ, ಅದು ಕೇವಲ ಮಿಥ್ಯೆಯಾದ ಮನಸ್ಸಿಗೆ ಸಂಬಂಧಿಸಿದ್ದು ಮತ್ತು ನಾನು ಶುದ್ಧ ಚೈತನ್ಯಸ್ವರೂಪ, ನಿರ್ವಿಕಾರಿ ಸಾಕ್ಷಿ ಎಂಬ ಸ್ಪಷ್ಟವಾದ ಅರಿವು ಇತ್ತು. ಇದೆಲ್ಲವೂ ನನ್ನ ಗುರುಗಳ ಮತ್ತು ಭಗವಂತನ ಅನುಗ್ರಹದಿಂದ ಮಾತ್ರ. ಇಲ್ಲವಾದರೆ, ನನ್ನಂತಹ ಅತಿ ಸಾಮಾನ್ಯನಿಗೆ ಬ್ರಹ್ಮದಲ್ಲಿ ಅಚಲವಾಗಿ ಸ್ಥಿತನಾಗಿ, ನನ್ನ ಗುರುಗಳು ನನಗೆ ನಿರ್ದೇಶಿಸಿದಂತೆ ಲೋಕದಲ್ಲಿ ಕಾರ್ಯಗಳನ್ನು ನಿರ್ವಹಿಸುವುದು ಹೇಗೆ ತಾನೇ ಸಾಧ್ಯವಾಗುತ್ತಿತ್ತು?' ಎಂದುತ್ತರಿಸಿದರು.

ತಮ್ಮ ಗುರುಗಳ ವೇದಾಂತದ ವಿವರಣೆಯ ಕುರಿತಾಗಿ ಗುರುಗಳು ಹೀಗೆ ಕೊಂಡಾಡಿ ಹೇಳುತ್ತಿದ್ದರು: 'ನನ್ನ ಗುರುಗಳಿಗೆ ಭಗವತ್ಪಾದರ ಪ್ರತಿಯೊಂದು ಪದವೂ ದೋಷರಹಿತವೂ ಅರ್ಥಪೂರ್ಣವೂ ಎಂಬ ದೃಢವಾದ ಶ್ರದ್ಧೆಯಿತ್ತು. ಭಗವತ್ಪಾದರ ಪ್ರತಿಯೊಂದು ಪದವನ್ನೂ ಪರಿಗಣಿಸಿ, ಅದನ್ನು ವಿಶ್ಲೇಷಿಸಿ, ಅದರ ನಿಜವಾದ ತಾತ್ಪರ್ಯವನ್ನು ಹೊರತರುತ್ತಿದ್ದರು.

ಕಟ್ಟುನಿಟ್ಟಾಗಿ ಭಗವತ್ಪಾದರ ಭಾಷ್ಯಕ್ಕೆ ಅನುಗುಣವಾಗಿ ಶಾಸ್ತ್ರವನ್ನು ವಿವರಿಸುತ್ತಿದ್ದರು. ತಮ್ಮ ವೇದಾಂತದ ಬೋಧನೆಯಲ್ಲಿ ನ್ಯಾಯ, ಮೀಮಾಂಸಾ ಮತ್ತು ಯೋಗ ಶಾಸ್ತ್ರಗಳಿಗೆ ಸಂಬಂಧಪಟ್ಟ ಅಂಶಗಳನ್ನು ಅತ್ಯಂತ ಸಹಜವಾಗಿ ಸಮನ್ವಯಗೊಳಿಸುತ್ತಿದ್ದರು. ವೇದಾಂತ-ಶಾಸ್ತ್ರದ ಬೋಧನೆಯ ಒಂದು ವಿಧಾನವೆಂದರೆ ಗ್ರಂಥವನ್ನು ಸಾಲು ಸಾಲಾಗಿ ವಿವರಿಸುವುದು; ಮತ್ತೊಂದೇನೆಂದರೆ ತತ್ತ್ವದ ಸ್ವಂತ ಅನುಭವದೊಂದಿಗೆ ಆ ಸಾಲುಗಳನ್ನು ಸಮನ್ವಯಗೊಳಿಸಿ ವಿವರಿಸುವುದು. ಅವರ ಬೋಧನೆಯ ವೈಶಿಷ್ಟ್ಯ ಎರಡನೆಯದಾಗಿತ್ತು; ಅದು ಅಪಾರವಾದ ಆನಂದವನ್ನು ನೀಡುತ್ತಿತ್ತು. ಮೈಸೂರಿನಲ್ಲಿ ವಿದ್ವತ್ಸಭೆಯಲ್ಲಿ ಬ್ರಹ್ಮಸೂತ್ರಗಳ ಆನಂದಮಯ-ಅಧಿಕರಣವನ್ನು ಅವರು ವಿವರಿಸಿದಾಗ, ಎಲ್ಲ ವಿದ್ವಾಂಸರೂ ವಿಸ್ಮಯಗೊಂಡಿದ್ದರು. ನನ್ನ ಗುರುಗಳು ಪರಿಪೂರ್ಣ ಪಂಡಿತರಾಗಿದ್ದರೂ, ಅವರಿಗೆ ಸ್ವಲ್ಪವೂ ಅಹಂಕಾರವಿರಲಿಲ್ಲ.' ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ಕುರಿತು ಗುರುಗಳು ಹೇಳಿದ ಪ್ರತಿಯೊಂದು ಮಾತೂ ತಮ್ಮದೇ ವೇದಾಂತವಿವರಣೆಗೂ ಸಂಪೂರ್ಣವಾಗಿ ಅನ್ವಯಿಸುತ್ತದೆ. ಅವರ ತರಗತಿಗಳು, ವೈಯಕ್ತಿಕ ವಿವರಣೆಗಳು ಮತ್ತು ಸಾರ್ವಜನಿಕ ಅನುಗ್ರಹ ಉಪನ್ಯಾಸಗಳನ್ನು ಕೇಳುವ ಸೌಭಾಗ್ಯ ಪಡೆದವರಿಗೆ ಇದು ಪ್ರತ್ಯಕ್ಷವಾಗಿ ವೇದ್ಯವೇ ಆಗಿದೆ. ಪ್ರತಿಯೊಂದು ವಿದ್ವತ್ಸಭೆಯಲ್ಲೂ ನ್ಯಾಯ ಮತ್ತು ವೇದಾಂತ ಶಾಸ್ತ್ರಗಳ ಗಹನ ವಿಷಯಗಳ ಬಗ್ಗೆ ಅವರ ಸುಸ್ಪಷ್ಟ, ಸರಳ ಮತ್ತು ಪ್ರಭಾವಶಾಲಿ ವಿವರಣೆ ಹಾಗೂ ಸ್ಪಷ್ಟೀಕರಣ ನುಡಿಗಳಿಂದ ಭಾರತದಾದ್ಯಂತ ಪ್ರಕಾಂಡ ವಿದ್ವಾಂಸರು ಮಂತ್ರಮುಗ್ಧರಾಗಿದ್ದರು.

ಅವರು ಶಾಸ್ತ್ರವಾಕ್ಯಗಳನ್ನು ಹೇಗೆ ವಿವರಿಸುತ್ತಿದ್ದರು ಎಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ.

ಸಮಾಧಿಯಲ್ಲಿ ಮನಸ್ಸನ್ನು ಆತ್ಮನಲ್ಲಿ ಸಂಪೂರ್ಣವಾಗಿ ಲೀನಗೊಳಿಸುವುದರ ಮೂಲಕ ಮುಕ್ತಿದಾಯಕವಾದ ಅದ್ವೈತ ತತ್ತ್ವದ ಸಾಕ್ಷಾತ್ಕಾರ ಉದಯಿಸುವುದಕ್ಕೆ ಸಂಬಂಧಿಸಿದಂತೆ ಭಗವದ್ಗೀತೆಯಲ್ಲಿ ಕೃಷ್ಣಪರಮಾತ್ಮನ ಗಹನವಾದ ಉಪದೇಶ ಹೀಗಿದೆ: 'ಆತ್ಮಸಂಸ್ಥಂ ಮನಃ ಕೃತ್ವಾ ನ ಕಿಞ್ಚಿದಪಿ ಚಿನ್ತಯೇತ್ — ಮನಸ್ಸನ್ನು ಆತ್ಮನಲ್ಲಿ ಚೆನ್ನಾಗಿ ನೆಲೆನಿಲ್ಲಿಸಿ, ಯಾವುದನ್ನೂ ಚಿಂತಿಸಬಾರದು.'[1] ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದಲ್ಲಿ ಇದನ್ನು ಹೀಗೆ ವಿವರಿಸಿದ್ದಾರೆ: 'ಆತ್ಮಸಂಸ್ಥಮಾತ್ಮನಿ ಸಂಸ್ಥಿತಮಾತ್ಮೈವ ಸರ್ವಂ ನ ತತೋಽನ್ಯತ್ ಕಿಞ್ಚಿದಪಿ ಅಸ್ತಿ ಇತ್ಯೇವಮಾತ್ಮಸಂಸ್ಥಂ ಮನಃ ಕೃತ್ವಾ ನ ಕಿಞ್ಚಿದಪಿ ಚಿನ್ತಯೇತ್ । ಏಷ ಯೋಗಸ್ಯ ಪರಮೋ ವಿಧಿಃ — ಮನಸ್ಸನ್ನು ಆತ್ಮಸಂಸ್ಥಗೊಳಿಸುವುದೆಂದರೆ ಆತ್ಮನಲ್ಲಿ ಚೆನ್ನಾಗಿ ನೆಲೆನಿಲ್ಲಿಸುವುದು. ಆತ್ಮವೇ ಸರ್ವವೂ; ಅದಕ್ಕಿಂತ ಭಿನ್ನವಾದುದು ಯಾವುದೂ ಇಲ್ಲ ಎಂಬುದನ್ನು ಭಾವಿಸುತ್ತ, ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಿ ಯಾವುದನ್ನೂ ಚಿಂತಿಸಬಾರದು. ಇದೇ ಯೋಗದ ಪರಮ ವಿಧಿ.'[2] ಆತ್ಮವೇ ಸರ್ವವೂ ಎಂಬುದನ್ನು ವಿಚಾರದಿಂದ ಅರಿಯುವ ಮೂಲಕ ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಬೇಕೆಂದು ಭಗವತ್ಪಾದರು ಹೇಳಿರುವುದು ಎಷ್ಟು

[1] ಭಗವದ್ಗೀತಾ 6.25

[2] ಭಗವದ್ಗೀತಾ 6.25ರ ಭಾಷ್ಯ

ನಿಖರವೂ ಸೂಕ್ತವೂ ಆಗಿದೆ ಎಂಬುದನ್ನು ಗುರುಗಳು ಖಾಸಗಿಯಾಗಿ ನನಗೆ ಎರಡು ಸಂದರ್ಭಗಳಲ್ಲಿ[1] ವಿಶೇಷವಾಗಿ ತಿಳಿಸಿದರು. 1982ರ ಜನವರಿಯಲ್ಲಿ ಚೆನ್ನೈಯಲ್ಲಿ, ನನ್ನ ವಿನಂತಿಯ ಮೇರೆಗೆ ಧ್ಯಾನದ ಕುರಿತು ಸಾರ್ವಜನಿಕ ಅನುಗ್ರಹ ಭಾಷಣವನ್ನು ನೀಡಿದ ಸ್ವಲ್ಪ ಸಮಯದ ಬಳಿಕ, ಅವರು ನನಗೆ ಹೇಳಿದ ಮಾತುಗಳ ಸಾರ ಹೀಗಿದೆ:

'ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಬೇಕು ಎಂದು ಭಗವಂತನು ಹೇಳಿದಾಗ, ಅವನ ಪ್ರಕಾರ ಅದನ್ನು ಹೇಗೆ ಮಾಡಬೇಕು ಎಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಆತ್ಮವು ನಮ್ಮಿಂದ ಭಿನ್ನವಾದ ಯಾವುದಾದರೂ ವಸ್ತುವಾಗಿದ್ದರೆ, ನಾವು ಯಾವುದೋ ಒಂದು ಸಂದರ್ಭದಲ್ಲಿ ನೋಡಿದ ವಿಷ್ಣುವಿನ ವಿಗ್ರಹವನ್ನೋ ಅದರ ಕುರಿತು ಓದಿದ ವಿವರಣೆಯನ್ನೋ ಹೇಗೆ ಚಿಂತಿಸುತ್ತೇವೋ, ಹಾಗೆ ಆತ್ಮನನ್ನೂ ಚಿಂತಿಸಬಹುದಿತ್ತು. ಆದರೆ ಆತ್ಮನು ವಿಷಯವಾಗಿ ಇರುವ ವಸ್ತುವೇ ಅಲ್ಲ; ಆತ್ಮನೇ ನಮ್ಮ ಸ್ವರೂಪ; ನಿಜಕ್ಕೂ ಎಂದಿಗೂ ಅಜ್ಞಾತನಲ್ಲ. ಹೀಗಿದ್ದರೂ ಕೂಡ ಅವಿದ್ಯೆಯಿಂದಾಗಿ ಆತ್ಮನನ್ನು ತಪ್ಪಾಗಿ ಗ್ರಹಿಸಲಾಗುತ್ತದೆ. ಆದ ಕಾರಣ, ಆತ್ಮ ಮತ್ತು ದೇಹಗಳ ನಡುವೆ ಭೇದವನ್ನು ಗುರುತಿಸದೆ, ಅರ್ಜುನನು ಭೀಷ್ಮ ಮತ್ತು ದ್ರೋಣರನ್ನು ಕೊಲ್ಲಬೇಕೆಂಬ ವಿಚಾರದಿಂದ ಹಿಂದೆ ಸರಿದನು. ಆಗ ಕೃಷ್ಣನು ಅಳಿದುಹೋಗುವುದು ದೇಹ ಮಾತ್ರ, ಆತ್ಮವಲ್ಲ ಎಂದು ತಿಳಿಸಬೇಕಾಯಿತು. ದೇಹ-ಮನಸ್ಸಿನ ಸಂಘಾತದೊಂದಿಗೆ ತನ್ನನ್ನು ಗುರುತಿಸಿಕೊಂಡು, ವ್ಯಕ್ತಿಯು ತನ್ನನ್ನು ಕರ್ತಾ ಎಂದು ಭಾವಿಸುತ್ತಾನೆ. ಆದರೆ ಆತ್ಮನು ಕರ್ತಾ ಅಲ್ಲ ಎಂದು ಭಗವಂತನು ಹೇಳುತ್ತಾನೆ. ಎಲ್ಲ ಮಿಥ್ಯಾ ಕಲ್ಪನೆಗಳನ್ನೂ ನಿವಾರಿಸುವುದು ಸಕಲ ಬಂಧನಗಳಿಂದ ಮುಕ್ತಿ ಪಡೆಯಲು ಬಹಳ ಮುಖ್ಯ. ಈ ಶ್ಲೋಕಗಳಿಗಿಂತ ಮುನ್ನವೇ ಭಗವಂತನು ಆತ್ಮನ ನಿಜಸ್ವರೂಪವನ್ನು ಸ್ಪಷ್ಟವಾಗಿಯೂ ವಿವರವಾಗಿಯೂ ಬೋಧಿಸಿದ್ದಾನೆ. ಆ ಬೋಧನೆಯು ಇಲ್ಲಿ ಬಹಳ ಪ್ರಸ್ತುತವಾಗಿರುವುದು ಸ್ಪಷ್ಟ. ಉದಾಹರಣೆಗೆ, ಆತ್ಮನು *ಅವಿನಾಶೀ* — ನಾಶರಹಿತ; *ಯೇನ ಸರ್ವಮಿದಂ ತತಂ* — ಯಾವುದರಿಂದ ಈ ಎಲ್ಲವೂ ವ್ಯಾಪಿಸಲ್ಪಟ್ಟಿದೆಯೋ ಅದು; *ಅಪ್ರಮೇಯ* — ಪ್ರತ್ಯಕ್ಷ ಮುಂತಾದ ಪ್ರಮಾಣಗಳಿಂದ ತಿಳಿಯಲಾಗದುದು; *ಸರ್ವಗತಃ* — ಸರ್ವವ್ಯಾಪಿ; *ಅವ್ಯಕ್ತಃ* — ವ್ಯಕ್ತವಲ್ಲದುದು, ವಿಷಯೀಕರಿಸಲಾಗದುದು; ಮತ್ತು *ಅವಿಕಾರ್ಯಃ* — ಬದಲಾವಣೆ ಇಲ್ಲದುದು ಎಂದು ಹೇಳಿದ್ದಾನೆ.[2] ಜ್ಞಾನಿಯು ತನ್ನ ಆತ್ಮನೇ ಎಲ್ಲರ ಆತ್ಮ ಎಂದು ತಿಳಿಯುತ್ತಾನೆ (*ಸರ್ವಭೂತಾತ್ಮ-ಭೂತಾತ್ಮಾ*)[3]; ಚತುರ್ಮುಖಬ್ರಹ್ಮನಾದಿಯಾಗಿ ಹುಲ್ಲಿನ ಕಡ್ಡಿಯವರೆಗೆ ಪ್ರತಿಯೊಂದು ವಸ್ತುವೂ ಆತ್ಮನಲ್ಲಿ ಇರುವುದನ್ನೂ, ಆತ್ಮನಿಂದ ಅವು ಭಿನ್ನವಲ್ಲ ಎಂಬುದನ್ನೂ ಅವನು

[1] ಚೆನ್ನೈಯಲ್ಲಿ ಅವರ ಸಂಜೆಯ ಆಹ್ನಿಕದ ಆರಂಭದಲ್ಲಿ ಅವರನ್ನು ವಂದಿಸಲು ನಾನು ಹೋದಾಗ ಒಮ್ಮೆ; ಶೃಂಗೇರಿಯಲ್ಲಿ ಒಂದು ಸಂಜೆ ಕಾಲಭೈರವಾಲಯಕ್ಕೆ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದಾಗ ಮತ್ತೊಮ್ಮೆ.

[2] ಭಗವದ್ಗೀತಾ 2.17–18, 2.24–25. ಗುರುಗಳು ಈ ಪದಗಳನ್ನು ಉಲ್ಲೇಖಿಸುವಾಗ, ಸ್ಮರಣೆಯಿಂದ, ಅವುಗಳ ಮೇಲಿನ ಭಗವತ್ಪಾದರ ಭಾಷ್ಯವನ್ನೂ ಹೇಳಿದರು. ಆದ್ದರಿಂದ ಇಲ್ಲಿನ ಅನುವಾದವು ಭಾಷ್ಯವನ್ನು ಆಧರಿಸಿದೆ.

[3] ಭಗವದ್ಗೀತಾ 5.7

ಕಾಣುತ್ತಾನೆ (ಭೂತಾನ್ಯಶೇಷಾಣಿ ದ್ರಕ್ಷ್ಯಸ್ಯಾತ್ಮನ್ಯಥೋ ಮಯಿ)[1] ಎಂದೂ ಬೋಧಿಸಿದ್ದಾನೆ. ಭಗವಂತನು ಆತ್ಮ ಮತ್ತು ಬ್ರಹ್ಮವನ್ನು ಒಂದೇ ಸಂದರ್ಭದಲ್ಲಿ ಉಲ್ಲೇಖಿಸಿ ಹೀಗೆ ಹೇಳಿದ್ದಾನೆ; ಇದರಿಂದಲೂ ಆತ್ಮನು ಪರಬ್ರಹ್ಮಕ್ಕಿಂತ ಭಿನ್ನನಲ್ಲ ಎಂಬುದು ಸ್ಪಷ್ಟವಾಗುತ್ತದೆ: "ಬಾಹ್ಯ-ಸ್ಪರ್ಶೇಷ್ವಸಕ್ತಾತ್ಮಾ ವಿನ್ದತ್ಯಾತ್ಮನಿ ಯತ್ಸುಖಮ್ / ಸ ಬ್ರಹ್ಮಯೋಗಯುಕ್ತಾತ್ಮಾ ಸುಖಮಕ್ಷಯಮ-ಶ್ನುತೇ — ಬಾಹ್ಯವಿಷಯಗಳಲ್ಲಿ ಆಸಕ್ತಿಯಿಲ್ಲದ ಮನಸ್ಸುಳ್ಳವನಾಗಿ ಆತ್ಮಸುಖವನ್ನು ಪಡೆಯುತ್ತಾನೆ; ಪರಬ್ರಹ್ಮದ ಸಮಾಧಿಯಲ್ಲಿ ಲೀನವಾದ ಮನಸ್ಸುಳ್ಳವನು, ಕ್ಷಯವಿಲ್ಲದ ಸುಖವನ್ನು ಅನುಭವಿಸುತ್ತಾನೆ."[2]

'ಬದಲಾಗುವುದೆಲ್ಲವೂ ಅಸತ್, ಅವಾಸ್ತವಿಕ; ಏಕೆಂದರೆ ಅದು ತನ್ನ ಉಪಾದಾನಕಾರಣಕ್ಕಿಂತ ಭಿನ್ನವಾಗಿ ಗ್ರಹಿಸಲ್ಪಡುವುದಿಲ್ಲ ಮತ್ತು ಉತ್ಪತ್ತಿಗೆ ಮೊದಲು ಹಾಗೂ ನಾಶವಾದ ನಂತರ ಅದು ಕಾಣಿಸುವುದಿಲ್ಲ. ಇದಕ್ಕೆ ವಿಪರೀತವಾಗಿ, ಸತ್ ಆದುದು (ವಾಸ್ತವಿಕವಾದುದು) ಸದಾ ಒಂದೇ ರೀತಿಯಲ್ಲಿ ಇರುತ್ತದೆ. ಭಗವಂತನು ಅಸತ್ ಮತ್ತು ಸತ್ ಅನ್ನು ಹೀಗೆ ನಿರೂಪಿಸುತ್ತಾನೆ: "ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ / ಉಭಯೋರಪಿ ದೃಷ್ಟೋಽನ್ತ-ಸ್ತ್ವನಯೋಸ್ತತ್ತ್ವದರ್ಶಿಭಿಃ — ಅಸತ್ತಾದುದಕ್ಕೆ (ಉದಾಹರಣೆಗೆ ದೇಹ, ಶೀತ-ಉಷ್ಣ, ಸುಖ-ದುಃಖ ಮತ್ತು ಅವುಗಳ ಕಾರಣಗಳಿಗೆ) ನಿಜವಾದ ಅಸ್ತಿತ್ವವಿಲ್ಲ; ಸತ್ ಆದುದಕ್ಕೆ (ಆತ್ಮನಿಗೆ) ಇಲ್ಲದಿರುವಿಕೆಯಿಲ್ಲ (ಏಕೆಂದರೆ, ಅದು ಎಲ್ಲೆಡೆಯೂ ಸದಾ ಏಕರೂಪವಾಗಿ ಇರುತ್ತದೆ). ಈ ಎರಡರ (ಸತ್-ಅಸತ್ ವಸ್ತುಗಳ) ಸ್ವರೂಪವನ್ನು ಸತ್ಯವನ್ನು (ಬ್ರಹ್ಮವನ್ನು) ಸಾಕ್ಷಾತ್ಕರಿಸಿದವರು ವಿವೇಚಿಸಿದ್ದಾರೆ."[3] ಇದರಿಂದ ಹೀಗೆ ತಿಳಿದುಕೊಳ್ಳಬಹುದು: ಬದಲಾವಣೆಗೆ ಒಳಪಡುವ ಜಗತ್ತು ಅಸತ್ ಅಥವಾ ಮಿಥ್ಯೆ; ನಿರ್ವಿಕಾರಿಯಾದ, ಸರ್ವವನ್ನೂ ವ್ಯಾಪಿಸಿರುವ ಆತ್ಮನೇ ಸತ್. ಮೇಲಾಗಿ, ಮರುಭೂಮಿಯ ಮರಳಿನಲ್ಲಿ ತೋರುವ ಮರೀಚಿಕೆಯ ನೀರಿಗೆ ಮರಳಿನಿಂದ ಪ್ರತ್ಯೇಕವಾದ ಅಸ್ತಿತ್ವ ಹೇಗೆ ಇಲ್ಲವೋ, ಹಾಗೆಯೇ ಮಿಥ್ಯಾಭೂತವಾದುದಕ್ಕೆ ತನ್ನನ್ನು ವ್ಯಾಪಿಸಿರುವ ತನ್ನ ಅಧಿಷ್ಠಾನಕ್ಕಿಂತ ಪ್ರತ್ಯೇಕವಾದ ಅಸ್ತಿತ್ವವಿಲ್ಲ. ಭಗವಂತನು ಹೀಗೆ ಹೇಳುತ್ತಾನೆ: "ಪ್ರಕೃತಿಂ ಸ್ವಾಮಧಿಷ್ಠಾಯ ಸಮ್ಭವಾಮ್ಯಾತ್ಮಮಾಯಯಾ — ನನ್ನ ಪ್ರಕೃತಿಯನ್ನು ಅಧೀನದಲ್ಲಿಟ್ಟುಕೊಂಡು, ನನ್ನ ಮಾಯೆಯಿಂದ ನಾನು ಜನ್ಮವನ್ನು ತಾಳುತ್ತೇನೆ."[4] ಇದರಿಂದ ಬದಲಾವಣೆಗೆ ಒಳಪಡುವ, ಜಡವಾದ ಜಗತ್ತಿನ ಉಪಾದಾನಕಾರಣವಾದ ಪ್ರಕೃತಿಯು ಭಗವಂತನ ಶಕ್ತಿಯಾದ ಮಾಯೆಯೇ; ಅದರ ಅಸ್ತಿತ್ವ ಮತ್ತು ಕಾರ್ಯನಿರ್ವಹಣೆ ಪೂರ್ಣವಾಗಿ ಭಗವಂತನನ್ನು ಅವಲಂಬಿಸಿದೆ ಎಂದು ನಿರ್ಣಯಿಸಬಹುದು. ಆತ್ಮನಾದರೋ, ಸ್ವರೂಪತಃ ಪರವಸ್ತುವಿನಿಂದ ಅಭಿನ್ನನು ಎಂದು ಭಗವಂತನೇ ಬೋಧಿಸಿದ್ದಾನೆ.

[1] ಭಗವದ್ಗೀತಾ 4.35

[2] ಭಗವದ್ಗೀತಾ 5.21

[3] ಭಗವದ್ಗೀತಾ 2.16

[4] ಭಗವದ್ಗೀತಾ 4.6

ಹೀಗಾಗಿ, ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಬೇಕು ಎಂಬ ಉಪದೇಶವನ್ನು ನೀಡುವ ಮೊದಲು ಭಗವಂತನು ತಿಳಿಸಿದ ಎಲ್ಲ ವಿಷಯಗಳಿಂದ, ಆತ್ಮನು ನಿರ್ವಿಕಾರಿ, ಸರ್ವವ್ಯಾಪಿ, ಎಲ್ಲ ಜೀವಿಗಳ ಆತ್ಮ ಮತ್ತು ಪರಬ್ರಹ್ಮಕ್ಕಿಂತ ಭಿನ್ನನಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮೇಲಾಗಿ, ಮಿಕ್ಕೆಲ್ಲವೂ ಬದಲಾವಣೆಗೆ ಒಳಪಟ್ಟಿರುವುದರಿಂದ ಅವು ತೋರಿಕೆ ಮಾತ್ರ. ಜಗತ್ತಿನ ಪರಿವರ್ತನಶೀಲ ಮೂಲ ಉಪಾದಾನಕಾರಣವಾದ ಪ್ರಕೃತಿಯು ಪರಮೇಶ್ವರನ ಶಕ್ತಿಯಾದ ಮಾಯೆಯೇ ಆಗಿದ್ದು, ಪರಮೇಶ್ವರನಿಗಿಂತ ಪ್ರತ್ಯೇಕವಾದ ಅಸ್ತಿತ್ವವನ್ನು ಹೊಂದಿಲ್ಲ ಮತ್ತು ಅವನನ್ನೇ ಅವಲಂಬಿಸಿದೆ. ನಮ್ಮ ನಿಜಸ್ವರೂಪವಾದ ಮತ್ತು ಎಂದಿಗೂ ಅಜ್ಞಾತವಾಗದ ಈ ಆತ್ಮವಸ್ತುವೇ ಅವಿದ್ಯೆಯಿಂದ ತಪ್ಪಾಗಿ ಗ್ರಹಿಸಲ್ಪಡುತ್ತದೆ. ಆತ್ಮವಸ್ತುವು ಚೈತನ್ಯಸ್ವರೂಪ; ಆದ್ದರಿಂದ, ಅದನ್ನು ಪ್ರಕಾಶಪಡಿಸಲು ಬೇರೆ ಬೆಳಕಿನ ಅಗತ್ಯವಿಲ್ಲ. ಜ್ಞಾನಿಯ ಬೆಳಕು ಅವನೊಳಗೇ ಇರುತ್ತದೆಂಬುದನ್ನು, *"ಅನ್ತರ್ಜ್ಯೋತಿರೇವ ಸಃ"*, ಎಂದು ಹೇಳಿ ಭಗವಂತನು ಸೂಚಿಸಿದ್ದಾನೆ. ಆದ್ದರಿಂದ ಮಾಡಬೇಕಾದದ್ದು ಅಜ್ಞಾತವಾದ ಆತ್ಮನನ್ನು ತಿಳಿಯುವಂತೆ ಮಾಡುವುದು ಅಲ್ಲ. ಎಲ್ಲ ತಪ್ಪು ಕಲ್ಪನೆಗಳನ್ನು ಮಾತ್ರ ನಿವಾರಿಸುವುದಾಗಿದೆ. ಅದ್ವಯ ಪರಬ್ರಹ್ಮಕ್ಕಿಂತ ಭಿನ್ನವಾದುದು ಏನೂ ಇಲ್ಲ. ಅದುವೇ ಆತ್ಮನ ನಿಜಸ್ವರೂಪ ಎಂದು ಸಾಕ್ಷಾತ್ಕರಿಸುವುದೇ ಮುಕ್ತಿಗಾಗಿ ಭಗವಂತನು ಬೋಧಿಸಿದ ಸಾಧನ. ಆತ್ಮನಲ್ಲಿ ಮನಸ್ಸನ್ನು ಸ್ಥಾಪಿಸುವುದು ನಿಸ್ಸಂದೇಹವಾಗಿ ಅಂತಹ ಮುಕ್ತಿದಾಯಕ ಜ್ಞಾನಪ್ರಾಪ್ತಿಗಾಗಿ. ಆದ್ದರಿಂದ ಮನಸ್ಸನ್ನು ನೆಲೆನಿಲ್ಲಿಸಬೇಕಾದದ್ದು ಆತ್ಮನ ವಾಸ್ತವಿಕ ಸ್ವರೂಪದಲ್ಲಿ; ತಪ್ಪು ಕಲ್ಪನೆಗಳಿಂದ ಬಣ್ಣಗೊಂಡ ಆತ್ಮನಲ್ಲಿ ಅಲ್ಲ. *"ಆತ್ಮೈವ ಸರ್ವಮ್ — ಆತ್ಮನೇ ಸರ್ವವೂ"*, ಎಂದು ಭಗವತ್ಪಾದರು ಹೇಳಿರುವುದು, ಆತ್ಮನ ನಿಜಸ್ವರೂಪದ ಕುರಿತು ಭಗವಂತನು ಬೋಧಿಸಿದ ಎಲ್ಲವನ್ನೂ ಒಂದೇ ವಾಕ್ಯದಲ್ಲಿ ಒಳಗೊಂಡಿದೆ: ಆತ್ಮನಿಂದ ಭಿನ್ನವಾದ ಜಗತ್ತು ಇಲ್ಲ, ಎರಡನೆಯ ಆತ್ಮನಿಲ್ಲ, ಮತ್ತು ಆತ್ಮನು ಬ್ರಹ್ಮಕ್ಕಿಂತ ಭಿನ್ನನಲ್ಲ. ತಾನು ಅವಿಕಾರಿಯಾದ್ದರಿಂದ, ಆತ್ಮನು ವಾಸ್ತವವಾಗಿ ಜಗತ್ತಾಗಿ ವಿಕಾರಗೊಂಡಿರುವ ಪ್ರಶ್ನೆಯೇ ಇಲ್ಲ. ಹೀಗಾಗಿ, ಭಗವತ್ಪಾದರು ನಿಸ್ಸಂದಿಗ್ಧವಾಗಿ ಸೂಚಿಸುವಂತೆ "ಆತ್ಮನೇ ಸರ್ವವೂ" ಎಂಬುದನ್ನು ಕಾಣುವುದರಲ್ಲಿ, *"ನ ತತೋಽನ್ಯತ್ ಕಿಞ್ಚಿದಪ್ಯಸ್ತಿ — ಅದಕ್ಕಿಂತ ಭಿನ್ನವಾದುದು ಯಾವುದೂ ಇಲ್ಲ"*, ಎಂಬುದನ್ನು ಕಾಣುವುದು ಒಳಗೊಂಡಿದೆ.

'ಆತ್ಮನ ಅದ್ವಯ ತಾತ್ತ್ವಿಕ ಸ್ವರೂಪವನ್ನು ಸ್ಪಷ್ಟವಾಗಿ ಅರಿತುಕೊಂಡು ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಿದ ಬಳಿಕ, ಯಾವುದೇ ಬಾಹ್ಯವಸ್ತುವಿನ ಬಗ್ಗೆಯಾಗಲಿ, ಅಥವಾ ದೇಹ-ಮನಸ್ಸಿನ ಸಂಘಾತದ ಕುರಿತಾಗಲಿ ಚಿಂತಿಸಬಾರದು; ಹಾಗೆ ಮಾಡಿದ ಪಕ್ಷದಲ್ಲಿ ಆತ್ಮನಲ್ಲಿ ಮನಸ್ಸು ಸಂಪೂರ್ಣವಾಗಿ ಲೀನಗೊಳ್ಳುವುದಕ್ಕೆ ಅಡ್ಡಿಯುಂಟಾಗುತ್ತದೆ. ಆತ್ಮನಲ್ಲಿ ಮನಸ್ಸು ಸ್ಥಿರವಾಗಿ ನೆಲೆನಿಂತ ಬಳಿಕ, ಆತ್ಮನ ಕುರಿತು ಮತ್ತೇನನ್ನು ಚಿಂತಿಸುವುದಾಗಲಿ, 'ನಾನು ಆತ್ಮನು' ಎಂಬ ರೀತಿಯ ಆತ್ಮನಿಗೆ ಸಂಬಂಧಪಟ್ಟ ವಿಚಾರವನ್ನು ಪುನಃ ಪುನಃ ಮನಸ್ಸಿನಲ್ಲಿ ತಂದುಕೊಳ್ಳುವುದಾಗಲಿ ಅಗತ್ಯವಿಲ್ಲ. ಆದ್ದರಿಂದ ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಿದ ಮೇಲೆ, "ನ

ಕಿಞ್ಚಿದಪಿ ಚಿಂತಯೇತ್ — ಏನನ್ನೂ ಚಿಂತಿಸಬಾರದು", ಎಂಬುದಾಗಿ ಭಗವಂತನು ಉಪದೇಶಿಸಿದ್ದಾನೆ.

'ಮನಸ್ಸನ್ನು ಕೇವಲ ಸ್ಥಗಿತಗೊಳಿಸುವುದರಿಂದ ಮುಕ್ತಿಯನ್ನು ತರುವ ಸಾಕ್ಷಾತ್ಕಾರ ದೊರಕದು. ಆತ್ಮನು ಕೇವಲ ಅವಿಕಾರಿ, ಸರ್ವವ್ಯಾಪಿ ಮತ್ತು ಶುದ್ಧ ಚೈತನ್ಯಸ್ವರೂಪನು — ಎಂಬಷ್ಟೆ ಆತ್ಮನ ಕುರಿತ ಅರಿವಿನೊಂದಿಗೆ ಮನಸ್ಸನ್ನು ಆತ್ಮನಲ್ಲಿ ನೆಲೆನಿಲ್ಲಿಸಬೇಕು ಎಂದು ಯೋಗದರ್ಶನವು ಹೇಳುತ್ತದೆ. ಆದರೆ, ಇಷ್ಟು ಮಾತ್ರ ಮಾಡಿದರೆ ಮುಕ್ತಿಗೆ ಕಾರಣವಾದ ಸಾಕ್ಷಾತ್ಕಾರವು ಸಿದ್ಧಿಸದು. ಮೇಲೆ ಹೇಳಿದ ಅರಿವಿನೊಂದಿಗೆ, ವೇದಾಂತ ಶಾಸ್ತ್ರವೊಂದೇ ಸಾರುವ ರೀತಿಯಲ್ಲಿ ಆತ್ಮನೇ ಏಕೈಕ ಸತ್ಯ, ಪ್ರಪಂಚವಾಗಲಿ ಮತ್ತೊಂದು ಆತ್ಮನಾಗಲಿ ಬೇರೆ ಇಲ್ಲ ಎಂಬ ಸರ್ವೋನ್ನತ ಜ್ಞಾನವು ಇಲ್ಲದಿರುವುದೇ ಅದಕ್ಕೆ ಕಾರಣ.

'ಆದ್ದರಿಂದ ಈ ಶ್ಲೋಕದಲ್ಲಿ ಭಗವಂತನು ಬೋಧಿಸಿರುವುದನ್ನು ಪರಿಣಾಮಕಾರಿಯಾಗಿ ಮೈಗೂಡಿಸಿಕೊಳ್ಳಲು ತನ್ನ ಗುರುವಿನಿಂದ — ಇಲ್ಲಿ ಭಗವಾನ್ ಕೃಷ್ಣನಿಂದ — ಅದ್ವೈತ ಸತ್ಯವನ್ನು ಕೇಳಿ, ಅದರ ಕುರಿತು ದೃಢನಿಶ್ಚಯವನ್ನು ಪಡೆಯುವುದು ಅನಿವಾರ್ಯ. ಇದರಿಂದ ಉಂಟಾಗುವ ಸಮಾಧಿಯು ಪರಿಪೂರ್ಣ ಪ್ರಶಾಂತತೆಯಿಂದ ಕೂಡಿದ್ದುದಾಗಿ, ಯಥಾವತ್ತಾಗಿ ಅರ್ಥೈಸಲ್ಪಟ್ಟ ಆತ್ಮನಲ್ಲಿ ಮನಸ್ಸು ಸಂಪೂರ್ಣವಾಗಿ ನೆಲೆಸಿರುವುದಾಗಿದೆ. ಅದರ ಅಭ್ಯಾಸವು ತತ್ತ್ವದ ಸಾಕ್ಷಾತ್ಕಾರಕ್ಕೆ ಅಡ್ಡಿಯಾಗುವ ಹಿಂದಿನ ತಪ್ಪು ಗ್ರಹಿಕೆಗಳ ಸಂಸ್ಕಾರಗಳನ್ನು ತೊಡೆದುಹಾಕಿ, ಮುಕ್ತಿದಾಯಕ ಜ್ಞಾನದಲ್ಲಿ ಪರ್ಯವಸಾನಗೊಳ್ಳುತ್ತದೆ.

'ಆತ್ಮನೇ ಸರ್ವವೂ, ಆತ್ಮನಿಂದ ಭಿನ್ನವಾಗಿ ಯಾವುದೂ ಇಲ್ಲ ಎಂಬ ಅರಿವಿನ ಮೂಲಕ ಮನಸ್ಸನ್ನು ಆತ್ಮನಲ್ಲಿ ಸ್ಥಾಪಿಸಬೇಕು ಎನ್ನುವುದು ಭಗವಂತನ ಅಭಿಪ್ರಾಯ; ಭಗವಂತನು ಮುಂದೆ ಹೇಳುವುದರಿಂದಲೂ ಇದು ದೃಢವಾಗುತ್ತದೆ. ಸಮಾಧಿಯಲ್ಲಿ ಯಾರ ಮನಸ್ಸು ಸಂಪೂರ್ಣವಾಗಿ ಪ್ರಶಾಂತವಾಗಿದೆಯೋ, ಆ ಯೋಗಿಯು ತಾನು ಬ್ರಹ್ಮವೆಂದು ತಿಳಿದು, ಆತ್ಮನ ಸ್ವರೂಪವೇ ಆದ ಮಹದಾನಂದವನ್ನು ಪಡೆಯುತ್ತಾನೆ ಎಂದು ಈ ಮಾತುಗಳಿಂದ ಹೇಳುತ್ತಾನೆ: "ಪ್ರಶಾನ್ತಮನಸಂ ಹ್ಯೇನಂ ಯೋಗಿನಂ ಸುಖಮುತ್ತಮಮ್ । ಉಪೈತಿ ಶಾನ್ತರಜಸಂ ಬ್ರಹ್ಮಭೂತಮಕಲ್ಮಷಮ್ — ಪ್ರಶಾಂತಮನಸ್ಸಿನ, (ಮೋಹ ಇತ್ಯಾದಿ ಬಗೆಯ ದೋಷಗಳಾದ) ರಜೋಗುಣವು ಶಮನಗೊಂಡಿರುವ ಮತ್ತು ಬ್ರಹ್ಮಸ್ವರೂಪನಾಗಿರುವ ಈ ಯೋಗಿಗೆ ಅತ್ಯುತ್ತಮವಾದ ಸುಖವು ದೊರೆಯುತ್ತದೆ."[1] ಸಮಾಧಿಯನ್ನು ಹೊಂದಿ ಎಲ್ಲೆಡೆಯೂ ತನ್ನ ಆತ್ಮ-ಬ್ರಹ್ಮ-ಅಭೇದವನ್ನು ಸಾಕ್ಷಾತ್ಕರಿಸಿದವನು ಎಲ್ಲ ಜೀವಿಗಳನ್ನೂ ತನ್ನ ಆತ್ಮನಲ್ಲಿ ಕಾಣುತ್ತಾನೆ ಎಂದು ಬಳಿಕ ಪ್ರಭುವು ಈ ನುಡಿಗಳಲ್ಲಿ ಹೇಳುತ್ತಾನೆ: "ಸರ್ವಭೂತಸ್ಥ-ಮಾತ್ಮಾನಂ ಸರ್ವಭೂತಾನಿ ಚಾತ್ಮನಿ — (ಸಮಾಧಿಯಲ್ಲಿ ಲೀನವಾದ ಮನಸ್ಸಿನಿಂದ) ಎಲ್ಲೆಡೆಯೂ ಆತ್ಮ-ಬ್ರಹ್ಮ-ಅಭೇದವನ್ನು ಕಾಣುವವನು ತನ್ನ ಆತ್ಮನನ್ನು ಎಲ್ಲದರಲ್ಲೂ ಮತ್ತು

[1] ಭಗವದ್ಗೀತಾ 6.27

ಎಲ್ಲ ಜೀವಿಗಳನ್ನು ತನ್ನ ಆತ್ಮನಲ್ಲಿ ಕಾಣುತ್ತಾನೆ."[1] ಇದಲ್ಲದೆ, ಅನಂತರ ಹೀಗೆಂದಿದ್ದಾನೆ: "ಜ್ಞಾನವಾನ್ಮಾಂ ಪ್ರಪದ್ಯತೇ । ವಾಸುದೇವಸ್ಸರ್ವಮಿತಿ — ಪರಿಪಕ್ವ ಜ್ಞಾನವನ್ನು ಹೊಂದಿದವನು 'ವಾಸುದೇವನೇ—ಬ್ರಹ್ಮನೇ, ಆತ್ಮನೇ—ಸರ್ವವೂ' ಎಂದು ತಿಳಿದು ನನ್ನನ್ನು ಶರಣಾಗುತ್ತಾನೆ."[2]

'ಬೃಹದಾರಣ್ಯಕ-ಉಪನಿಷತ್ತು, "ಸರ್ವಮಾತ್ಮಾನಂ ಪಶ್ಯತಿ — ಅವನು ಸರ್ವವನ್ನೂ ಆತ್ಮನೆಂದು ಕಾಣುತ್ತಾನೆ", ಎಂದು ಬೋಧಿಸಿ, ನಂತರ, "ವಿಪಾಪೋ ವಿರಜೋಽವಿಚಿಕಿತ್ಸೋ ಬ್ರಾಹ್ಮಣೋ ಭವತಿ — ಅವನು ಪಾಪರಹಿತನು, ಕಲ್ಮಷರಹಿತನು, ಎಲ್ಲ ಸಂದೇಹಗಳಿಂದ ಮುಕ್ತನು ಮತ್ತು ಬ್ರಹ್ಮಜ್ಞಾನಿಯು ಆಗುತ್ತಾನೆ",[3] ಎಂದು ಘೋಷಿಸುತ್ತದೆ. ಅಂದರೆ, ಅವನು ಜೀವನ್ಮುಕ್ತನಾಗುತ್ತಾನೆ. ತಮ್ಮ ಬೃಹದಾರಣ್ಯಕ-ಉಪನಿಷತ್-ಭಾಷ್ಯದಲ್ಲಿ ಭಗವತ್ಪಾದರು, "ಸರ್ವಮಾತ್ಮಾನಂ ಪಶ್ಯತಿ — ಅವನು ಸರ್ವವನ್ನೂ ಆತ್ಮನೆಂದು ಕಾಣುತ್ತಾನೆ", ಎಂಬುದನ್ನು, "ಸರ್ವಂ ಸಮಸ್ತಮಾತ್ಮಾನಮೇವ ಪಶ್ಯತಿ, ನಾನ್ಯದಾತ್ಮವ್ಯತಿರಿಕ್ತಂ ವಾಲಾಗ್ರಮಾತ್ರಮಪ್ಯಸ್ತಿ ಇತಿ ಪಶ್ಯತಿ...ಯೋಗೀ ಭವತಿ, ಜಾಗ್ರತ್ಸ್ವಪ್ನಸುಷುಪ್ತಾಖ್ಯಂ ಸ್ಥಾನತ್ರಯಂ ಹಿತ್ವಾ — ಅವನು ಸರ್ವವನ್ನೂ ಆತ್ಮನೇ ಎಂದು ಕಾಣುತ್ತಾನೆ; ಕೂದಲಿನ ತುದಿಯಷ್ಟೂ ಯಾವುದಾದರೂ ಆತ್ಮನಿಗಿಂತ ಭಿನ್ನವಾಗಿದೆ ಎಂದು ಅವನು ನೋಡುವುದಿಲ್ಲ. ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಸ್ಥಿತಿಗಳನ್ನು ಮೀರಿ ಅವನು ಯೋಗಿಯಾಗುತ್ತಾನೆ",[4] ಎಂದು ವಿವರಿಸಿದ್ದಾರೆ. ಭಗವಂತನು ಇಲ್ಲಿ ಉಪದೇಶಿಸಿರುವುದೂ ಮತ್ತು ಭಗವತ್ಪಾದರು ಅದನ್ನು ವಿವರಿಸಿರುವುದೂ ಬೃಹದಾರಣ್ಯಕ-ಉಪನಿಷತ್ತಿನ ಈ ಬೋಧನೆಯೊಂದಿಗೆ ಮತ್ತು ಅದರ ಭಗವತ್ಪಾದರ ಭಾಷ್ಯದೊಂದಿಗೆ ಸಂಪೂರ್ಣವಾಗಿ ಹೊಂದಿಕೆಯಾಗುತ್ತವೆ. ಛಾಂದೋಗ್ಯ-ಉಪನಿಷತ್ತು ಕೂಡ, "ಆತ್ಮೈವೇದಂ ಸರ್ವಮ್ — ಇದೆಲ್ಲವೂ ನಿಜಕ್ಕೂ ಆತ್ಮ",[5] ಎಂದು ಬೋಧಿಸಿ, ಇದನ್ನು ಸಾಕ್ಷಾತ್ಕರಿಸಿಕೊಂಡು ಮುಕ್ತನಾದವನನ್ನು ಸ್ತುತಿಸುತ್ತದೆ.

'ಆತ್ಮನಲ್ಲಿ ಮನಸ್ಸನ್ನು ಸ್ಥಾಪಿಸುವುದರ ಕುರಿತು ಭಗವತ್ಪಾದರು ನೀಡಿರುವ ವಿವರಣೆಯು ಭಗವಂತನ ಹಿಂದಿನ ಬೋಧನೆಯನ್ನು ಆಧರಿಸಿದೆ; ಮುಂದಿನ ಬೋಧನೆಯೂ ಅದನ್ನು ದೃಢಪಡಿಸುತ್ತದೆ. ಭಗವಂತನ ಉಪದೇಶವನ್ನು ಸಂಪೂರ್ಣವಾಗಿ ತಿಳಿಸಲು ಅಗತ್ಯ-ವಿರುವುದಕ್ಕಿಂತ ಒಂದು ಪದವೂ ಹೆಚ್ಚು ಅಥವಾ ಕಡಿಮೆ ಇಲ್ಲದಂತೆ ಆ ವಿವರಣೆಯು ಅಚ್ಚುಕಟ್ಟಾಗಿಯೂ ಅತ್ಯಂತ ಸೂಕ್ತವಾಗಿಯೂ ಇದೆ. ಭಗವಂತನ ಬೋಧನೆಯನ್ನು

[1] ಭಗವದ್ಗೀತಾ 6.29

[2] ಭಗವದ್ಗೀತಾ 7.19

[3] ಬೃಹದಾರಣ್ಯಕ-ಉಪನಿಷತ್ 4.4.23

[4] ಬೃಹದಾರಣ್ಯಕ-ಉಪನಿಷತ್ 4.4.23ರ ಮೇಲಿನ ಭಾಷ್ಯ. ಗುರುಗಳು ಶ್ರುತಿ ಹಾಗೂ ಭಾಷ್ಯಪಂಕ್ತಿಗಳನ್ನು ತಕ್ಷಣವೇ ಉಲ್ಲೇಖಿಸಿದರು.

[5] ಛಾಂದೋಗ್ಯ-ಉಪನಿಷತ್ 7.25.2

ಭಗವತ್ಪಾದರು ಸ್ಪಷ್ಟಪಡಿಸಿದಂತೆ ಅಭ್ಯಾಸ ಮಾಡಿದಾಗ, ಅದು ಕೊನೆಗೆ ಅದ್ವೈತ ಸಾಕ್ಷಾತ್ಕಾರವನ್ನು ಉಂಟುಮಾಡುವ ನಿರ್ವಿಕಲ್ಪ-ಸಮಾಧಿಯಲ್ಲಿ ಪರ್ಯವಸಾನಗೊಳ್ಳುತ್ತದೆ; ಇದನ್ನು ನೇರ ಅನುಭವವು ದೃಢಪಡಿಸುತ್ತದೆ.'

ಗುರುಗಳು ಭಗವಂತನ ಬೋಧನೆಯನ್ನು ವಿವರಿಸಿದ ಸೊಗಸು, ಆ ಬೋಧನೆಯ ಮೇಲಿನ ಭಗವತ್ಪಾದರ ಭಾಷ್ಯದ ಶ್ರೇಷ್ಠತೆಯನ್ನು ಅವರು ಹೊರತಂದುದು, ಪರಮಾತ್ಮನ ಉಪದೇಶ ಮತ್ತು ಅದರ ಭಾಷ್ಯ ಎರಡನ್ನೂ ಉಪನಿಷತ್ತುಗಳ ಘೋಷಣೆಯೊಂದಿಗೆ ಅವರು ಸಮನ್ವಯ ಮಾಡಿದುದು, ದ್ವೈತದರ್ಶನವಾದ ಯೋಗದರ್ಶನದ ಮಿತಿಯನ್ನು ಅವರು ಸೂಚಿಸಿದ ರೀತಿ ಮತ್ತು ತಮ್ಮ ಸಾಕ್ಷಾತ್ ಅನುಭವದ ಉಲ್ಲೇಖದಿಂದ ನೀಡಿದ ದೃಢೀಕರಣ — ಇವೆಲ್ಲವೂ ಗುರುಗಳು ವೇದಾಂತದ ಆದರ್ಶ ಆಚಾರ್ಯರಾಗಿದ್ದರು ಎಂಬುದಕ್ಕೆ ಸಾಕ್ಷಿಯಾಗಿವೆ.

ಅವರ ಶಾಸ್ತ್ರದ ಮನೋಹರವಾದ ವಿವರಣೆಗೆ ಇಲ್ಲಿದೆ ಇನ್ನೊಂದು ಉದಾಹರಣೆ. ಅರ್ಜುನನು ವಿಷಾದ ಮತ್ತು ಖಿನ್ನತೆಗೆ ಸಿಲುಕಿ ತನ್ನ ಸ್ಥಿತಿಯನ್ನು ಸಂಪೂರ್ಣವಾಗಿ ವ್ಯಕ್ತಪಡಿಸಿದಾಗ, ಕೃಷ್ಣನು ಹೀಗೆಂದನು: *'ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ...ಅಶೋಚ್ಯಾನನ್ವಶೋಚಸ್ತ್ವಂ... ಗತಾಸೂನಗತಾಸೂಂಶ್ಚ ನಾನುಶೋಚಂತಿ ಪಂಡಿತಾಃ* — ಓ ಭಾರತನೆ [ಓ ಧೃತರಾಷ್ಟ್ರನೆ], ಹೃಷೀಕೇಶನು [ಕೃಷ್ಣನು] ತಾನು ನಗುತ್ತಿರುವನೋ ಎಂಬಂತೆ ಅವನಿಗೆ (ಅರ್ಜುನನಿಗೆ), "ಶೋಕಿಸಬಾರದವರಿಗಾಗಿ ನೀನು ಶೋಕಿಸುತ್ತಿರುವೆ...ಮೃತರಿಗಾಗಲಿ ಜೀವಂತರಿಗಾಗಲಿ ಜ್ಞಾನಿಗಳು ಶೋಕಿಸುವುದಿಲ್ಲ",[1] ಎಂದು ಹೇಳಿದನು.' ಇಲ್ಲಿನ 'ಪ್ರಹಸನ್ನಿವ — ನಗುತ್ತಿರುವನೋ ಎಂಬಂತೆ' ಎಂಬ ಅಂಶವನ್ನು ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದಲ್ಲಿ ವಿವರಿಸಿಲ್ಲ. ಗುರುಗಳು 1979ರ ನವೆಂಬರ್ 1ರಂದು ಬೆಂಗಳೂರಿನಲ್ಲಿ ಕನ್ನಡದಲ್ಲಿ ನೀಡಿದ ಒಂದು ಅನುಗ್ರಹ ಭಾಷಣದಲ್ಲಿ ಮತ್ತು ಈ ವಿಷಯದ ಕುರಿತು ನಡೆದ ಖಾಸಗಿ ಸಂಭಾಷಣೆಯಲ್ಲಿ, ಇದನ್ನು ಮನಮುಟ್ಟುವಂತೆ ವಿವರಿಸಿದರು. ಅವರ ಆ ಪ್ರವಚನದಲ್ಲಿ ಮತ್ತು ಖಾಸಗಿಯಾದ ಸಂಭಾಷಣೆಯಲ್ಲಿನ ಅವರ ವಿವರಣೆಗಳನ್ನು ಒಟ್ಟುಗೂಡಿಸಿ ಅವುಗಳ ಸಾರಾಂಶವನ್ನು ಇಲ್ಲಿ ನೀಡಲಾಗಿದೆ. 'ದುಃಖದಲ್ಲಿ ಮುಳುಗಿದ ವ್ಯಕ್ತಿಯೊಬ್ಬನು ಗುರುವಿನ ಬಳಿಗೆ ಹೋಗುತ್ತಾನೆ ಎಂದು ಭಾವಿಸೋಣ. ಗುರುವು ಕಲ್ಲಿನಂತಹ ಮುಖದಿಂದಲೋ, ಅಥವಾ ಅದಕ್ಕಿಂತಲೂ ಅಸಮರ್ಪಕವಾಗಿ, ದುಃಖ ತುಂಬಿದ ಮುಖದಿಂದ, "ದುಃಖಕ್ಕೆ ಕಾರಣವಿಲ್ಲ", ಎಂದರೆ ಹೇಗಿದ್ದೀತು? ಕೆಮ್ಮಿನಿಂದ ಬಿಡುಗಡೆ ಪಡೆಯಲು ತನ್ನ ಬಳಿಗೆ ಬಂದ ರೋಗಿಗೆ, ವೈದ್ಯನು, "ನನ್ನ ಬಳಿ ನಿನ್ನ ಕೆಮ್ಮನ್ನು ತಕ್ಷಣ ಗುಣಪಡಿಸುವ ಔಷಧಿಯಿದೆ", ಎಂದು ಹೇಳುತ್ತ, ತಾನೇ ಸಹಿಸಿಕೊಳ್ಳಲಾಗದಂತೆ ಕೆಮ್ಮುತ್ತಿದ್ದರೆ ಹೇಗಿರುತ್ತದೆ? ಆ ರೋಗಿಗೆ ಹೇಗೋ, ಹಾಗೆಯೇ ಶಿಷ್ಯನಿಗೂ ಉತ್ಸಾಹ ಉಂಟಾಗುವುದಿಲ್ಲ. ಇದಕ್ಕೆ ವಿಲಕ್ಷಣವಾಗಿ, ಗುರುವು ಶಾಂತಿಯ ಸಾಕಾರಸ್ವರೂಪನಾಗಿರುವುದು ಸ್ಪಷ್ಟವಾಗಿ ತೋರುತ್ತಿದ್ದು, ಖಿನ್ನನಾಗಿರುವ ಶಿಷ್ಯನಿಗೆ

[1] ಭಗವದ್ಗೀತಾ 2.10–11

ಮುಗುಳ್ನಗುತ್ತಾ, "ಚಿಂತಿಸಬೇಡ. ಶೋಕಿಸಲು ಕಾರಣವಿಲ್ಲ", ಎಂದು ಹೇಳಿದರೆ ಹೇಗಿದ್ದೀತು? ಆಗ, ಗುರುವಿನ ಸ್ಥಿತಿಗೂ ತನ್ನ ಸ್ಥಿತಿಗೂ ಇರುವ ಅಂತರವನ್ನು ಮನಗಂಡ ಶಿಷ್ಯನಿಗೆ ಗುರುವಿನಲ್ಲಿ ವಿಶ್ವಾಸ ಮೂಡುತ್ತದೆ. ಭಗವತ್ಪಾದರು ಸೂಚಿಸಿರುವಂತೆ, ಅರ್ಜುನನ ವಿವೇಕವು ವಿಷಾದ ಮತ್ತು ಮೋಹದಿಂದ ಆವೃತವಾಗಿತ್ತು. ಕೃಷ್ಣನಿಗೆ ಅದರ ಪರಿಹಾರವೂ ಅರ್ಜುನನನ್ನು ತಾನು ಉದ್ಧರಿಸಲಿದ್ದೇನೆ ಎಂಬುದೂ ಸಂಪೂರ್ಣವಾಗಿ ತಿಳಿದಿತ್ತು; ಸ್ವತಃ ಕೃಷ್ಣನು ಸದಾ ಮೋಹಾತೀತನಾಗಿಯೂ ಪರಮಾನಂದದಲ್ಲಿ ಸ್ಥಿತನಾಗಿಯೂ ಇದ್ದನು. ಕೃಷ್ಣನು ಮುಗುಳ್ನಗುತ್ತಾ ಮಾತನಾಡಿದುದು ಅವನು ದುಃಖದಿಂದ ಮುಕ್ತನಾಗಿರುವುದನ್ನು ತೋರಿಸಿತು ಮತ್ತು ಅರ್ಜುನನನ್ನು ಆವರಿಸಿದ್ದ ಎಲ್ಲ ಭಾರದಿಂದ ಅವನನ್ನು ಮುಕ್ತಗೊಳಿಸಲು ತಾನು ಸಮರ್ಥನು ಮತ್ತು ಹಾಗೆ ಮಾಡುವೆನೆಂಬುದನ್ನು ಸೂಚಿಸಿತು. ಶೋಕಿಸಬಾರದವರಿಗಾಗಿ ಅರ್ಜುನನು ಶೋಕಿಸುತ್ತಿರುವನೆಂದು ಅವನಿಗೆ ಹೇಳಿದುದರ ಉದ್ದೇಶ ಅವನ ಭಾವನಾತ್ಮಕ ಕಳವಳ ತಪ್ಪು ಗ್ರಹಿಕೆಯಿಂದ ಉಂಟಾಗಿದೆ ಎಂಬುದನ್ನು ಸೂಚಿಸುವುದೇ ಹೊರತು, ಅವನನ್ನು ಅಪಹಾಸ್ಯ ಮಾಡಿ ಕ್ಷಣಕಾಲವಾದರೂ ಅವನ ಖಿನ್ನತೆಯನ್ನು ಹೆಚ್ಚಿಸುವುದಲ್ಲ. ಆದ್ದರಿಂದ ಹುರಿದುಂಬಿಸುವಂತಿದ್ದ ಪ್ರಸನ್ನ ಮುಖಭಾವದೊಂದಿಗೆ, ಕೃಷ್ಣನು ತಕ್ಷಣವೇ ಅರ್ಜುನನ ದುಃಖವನ್ನು ಶಮನಗೊಳಿಸಲು ಮತ್ತು ಅವನಿಗೆ ಸರಿಯಾದ ಜ್ಞಾನವನ್ನು ವಿವರವಾಗಿ ಬೋಧಿಸಲು ಮುಂದಾದನು. ಭಗವಂತನ ವಿಶ್ವರೂಪವನ್ನು ಕಂಡ ಅರ್ಜುನನು ಭಯಭೀತನಾದಾಗ, ಭಗವಂತನು ತಕ್ಷಣ ವಿಶ್ವರೂಪವನ್ನು ಹಿಂತೆಗೆದುಕೊಂಡನು ಮತ್ತೆ ಆ ಬಳಿಕ ಅವನನ್ನು ಸಾಂತ್ವನಗೊಳಿಸಲು ಮಧುರವಾದ ಮಾತುಗಳನ್ನು ನುಡಿದನು (*ಅರ್ಜುನಂ ಭೀತಮುಪಲಭ್ಯೋಪಸಂಹೃತ್ಯ ವಿಶ್ವರೂಪಂ ಪ್ರಿಯವಚನೇನಾಶ್ವಾಸಯನ್ ಶ್ರೀಭಗವಾನ್ ಉವಾಚ* — ಅರ್ಜುನನು ಭಯಭೀತನಾಗಿರುವುದನ್ನು ಕಂಡು, ಭಗವಂತನು ಮೊದಲು ವಿಶ್ವರೂಪವನ್ನು ಹಿಂತೆಗೆದುಕೊಂಡು, ಅನಂತರ ಮಧುರವಾದ ಮಾತುಗಳಿಂದ ಅವನಲ್ಲಿ ಧೈರ್ಯ ತುಂಬುತ್ತಾ)[1] ಎಂದು ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಹೇಳಿದ್ದಾರೆ. ಅರ್ಜುನನ ವಿಷಯದಲ್ಲಿ ಅಷ್ಟು ಆಳವಾದ ಕಾಳಜಿಯುಳ್ಳ ಭಗವಂತನು ಮೊದಲು ಅವನನ್ನು ಅಪಹಾಸ್ಯ ಮಾಡುವುದರ ಮೂಲಕ, ಅವನ ಖೇದವನ್ನು ನಿವಾರಿಸುವುದನ್ನು ಖಂಡಿತವಾಗಿಯೂ ವಿಳಂಬಮಾಡುತ್ತಿರಲಿಲ್ಲ. ಭಗವಂತನ ಪ್ರಸನ್ನ ಮುಖವು ಅವನ ಸಹಜ ಆನಂದವನ್ನೂ ಎಲ್ಲ ದುಃಖಗಳನ್ನೂ ಮೀರಿರುವುದನ್ನೂ ಪ್ರತಿಬಿಂಬಿಸಿತು; ಅದು ಅರ್ಜುನನಲ್ಲಿ ಧೈರ್ಯವನ್ನು ತುಂಬಿ, ಅವನಿಗೆ ಆಳವಾದ ಬೋಧನೆಯನ್ನು ನೀಡಲೂ ಅವನ ತಪ್ಪುಗ್ರಹಿಕೆ ಹಾಗೂ ದುಃಖದ ಮೂಲವನ್ನೇ ನಿವಾರಿಸಲೂ ಅನುವಾಯಿತು.' ಗುರುಗಳ ವಿವರಣೆಯು — ಭಗವತ್ಪಾದರು ತಮ್ಮ ಛಾಂದೋಗ್ಯ-ಉಪನಿಷತ್-ಭಾಷ್ಯದಲ್ಲಿ ಬ್ರಹ್ಮಜ್ಞಾನಿಯು ನಗುವ ಮುಖವುಳ್ಳವನೂ ಚಿಂತಾರಹಿತನೂ ಆಗಿರುತ್ತಾನೆ (*ಪ್ರಹಸಿತವದನಶ್ಚ ನಿಶ್ಚಿನ್ತಃ*)[2] ಎಂದು ಛಾಂದೋಗ್ಯ-

[1] ಭಗವದ್ಗೀತಾ 11.47ರ ಭಾಷ್ಯದಲ್ಲಿನ ಅವತಾರಿಕೆ

[2] ಛಾಂದೋಗ್ಯ-ಉಪನಿಷತ್ 4.9.2ರ ಭಾಷ್ಯ

ಉಪನಿಷತ್ತು ಹೇಳಿರುವ ಮಾತಿನೊಂದಿಗೆ — ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ, ಭಗವಂತನು ಅರ್ಜುನನನ್ನು ಅಪಹಾಸ್ಯ ಮಾಡಿದನೋ ಎಂಬ ರೀತಿಯ ಒಂದು ಉಪವ್ಯಾಖ್ಯಾನದ ವಿವರಣೆಯೂ, ಅವನನ್ನು ನಾಚಿಕೆಯ ಸಾಗರದಲ್ಲಿ ಮುಳುಗಿಸಿದನೋ ಎಂಬ ರೀತಿಯ ಮತ್ತೊಂದು ಟೀಕೆಯ ವಿವರಣೆಯೂ ಇವೆ. ಗುರುಗಳ ವಿಶ್ಲೇಷಣೆಗೂ ಮತ್ತು ಈ ಟೀಕೆ ಟಿಪ್ಪಣಿಗಳಿಗೂ ಅಜಗಜಾಂತರ!

ತಮ್ಮ ಶಿಷ್ಯರು ಪರಿಪಕ್ವಮತಿಗಳೋ, ಅಲ್ಲವೋ, ಪ್ರತಿಯೊಬ್ಬರೂ ತಮ್ಮ ವೇದಾಂತದ ಬೋಧನೆಯನ್ನು ಸ್ಪಷ್ಟವಾಗಿ ಗ್ರಹಿಸುವಂತೆ ಅತ್ಯಂತ ವಿಶಿಷ್ಟ ರೀತಿಗಳಲ್ಲಿ ಗುರುಗಳು ನೋಡಿಕೊಳ್ಳುತ್ತಿದ್ದರು. ಅನಂತರಾಮ ಶೇಷನ್ ಎಂಬ ಶಿಷ್ಯರೊಬ್ಬರು ಸ್ವಯಂ ನಿವೃತ್ತಿಯನ್ನು ಆಯ್ಕೆ ಮಾಡಿಕೊಂಡ ಬಳಿಕ, ತಮ್ಮ ಪತ್ನಿ ವೈಕುಂಠಂ ಅವರೊಂದಿಗೆ 1963ರಲ್ಲಿ ಶೃಂಗೇರಿಯಲ್ಲಿ ನೆಲೆಸುವ ಉದ್ದೇಶದೊಂದಿಗೆ ಅಲ್ಲಿ ಬಂದರು. ಆ ವರ್ಷದ ಚಾತುರ್ಮಾಸ್ಯದ ಅವಧಿಯಲ್ಲಿ ಆ ದಂಪತಿಗಳಿಗೂ, ಕೆಲವು ವಿದ್ವಾಂಸರಿಗೂ ಮತ್ತು ಓರ್ವ ಸಂನ್ಯಾಸಿಗೂ ಅದ್ವೈತ ವೇದಾಂತದ ಒಂದು ಪ್ರಮಾಣಭೂತ ಹಾಗೂ ಪಾರಿಭಾಷಿಕ ಪಠ್ಯವಾದ ವೇದಾಂತ-ಪರಿಭಾಷಾ ಎಂಬ ಗ್ರಂಥವನ್ನು ಗುರುಗಳು ಅಪ್ಪಟ ಸಂಸ್ಕೃತದಲ್ಲಿ ಬೋಧಿಸಿದರು. ಮೊದಲ ದಿನದ ಪಾಠದ ಬಳಿಕ ವೈಕುಂಠಂ ಅವರು ಸಂಜೆ ಗುರುಗಳಲ್ಲಿ, 'ತಮ್ಮ ತರಗತಿಯಲ್ಲಿ ಭಾಗವಹಿಸುವುದು ನನ್ನ ಭಾಗ್ಯ. ಆದರೆ ಇತರರಿಗೆ ಸಂಸ್ಕೃತದ ಪರಿಚಯವಿರುವ ಹಾಗೆ ನನಗಿಲ್ಲ. ಆದ್ದರಿಂದ ತಮ್ಮ ವಿವರಣೆಯನ್ನು ಅರ್ಥಮಾಡಿಕೊಳ್ಳಲು ನನಗೆ ಸಾಧ್ಯವಾಗುತ್ತಿಲ್ಲ', ಎಂದು ನಿವೇದಿಸಿದರು. ಗುರುಗಳು ಆಕೆಯನ್ನು ಆಶೀರ್ವದಿಸಿ ಕರುಣೆಯಿಂದ, 'ನಿಮಗೆ ಗ್ರಂಥವನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗುತ್ತದೆ', ಎಂದರು. ಮರುದಿನದಿಂದಲೇ ಗುರುಗಳ ವಿವರಣೆಯನ್ನು ಯಾವುದೇ ಕಷ್ಟವಿಲ್ಲದೆ ಅರ್ಥಮಾಡಿಕೊಳ್ಳಲು ಆಕೆಗೆ ಸಾಧ್ಯವಾದುದು ಆಕೆಗೇ ಆಶ್ಚರ್ಯಕರವಾಗಿತ್ತು. ಮೊದಲ ದಿನದ ಪಾಠದ ಭಾಗವೂ ಆಕೆಗೆ ಸ್ಪಷ್ಟವಾಯಿತು. ನಂತರ ಗುರುಗಳು ಆ ದಂಪತಿಗಳಿಗೆ ಪಂಚದಶೀ ಎಂಬ ಅದ್ವೈತ ವೇದಾಂತದ ಆಧ್ಯಾತ್ಮಿಕ ಗ್ರಂಥವನ್ನು ಬೋಧಿಸಲು ಪ್ರಾರಂಭಿಸಿದರು. ಅವರು ಅದನ್ನು ಸಂಸ್ಕೃತದಲ್ಲೇ ಬೋಧಿಸಿದರೂ, ಆಕೆಗೆ ಅವರ ವಿವರಣೆಯನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಗ್ರಂಥದ ಒಂದು ಭಾಗವನ್ನು ಬೋಧಿಸಿದ ಬಳಿಕ, ಅವರಿಗೆ ಗ್ರಂಥವನ್ನು ಅಲ್ಲಿಂದ ಮುಂದಕ್ಕೆ ಅವರೇ ಸ್ವಂತವಾಗಿ ಓದಿಕೊಳ್ಳಬಹುದೆಂದು ಮತ್ತು ಅದು ಅವರಿಗೆ ಸ್ಪಷ್ಟವಾಗುವುದು ಎಂದು ಗುರುಗಳು ಹೇಳಿದರು. ಹಾಗೆಯೇ ನಡೆದುಹೋಯಿತು. ಈ ಮಾಹಿತಿಯನ್ನು ಹಲವು ದಶಕಗಳ ಬಳಿಕ ಆಕೆಯೇ ನನಗೆ ಕೊಟ್ಟರು. ನಾನು ಸಂಸ್ಕೃತದಲ್ಲಿ ಓದಿ ಕೇಳಿಸಿದ ಆ ಗ್ರಂಥದ ಕೆಲವು ಪಂಕ್ತಿಗಳ ಅರ್ಥವನ್ನು ಆಕೆಯು ತಮಿಳಿನಲ್ಲಿ ಸರಿಯಾಗಿ ತಿಳಿಸುವ ಮೂಲಕ ವೇದಾಂತ-ಪರಿಭಾಷೆ ಮತ್ತು ಪಂಚದಶೀ ಗ್ರಂಥಗಳ ಕುರಿತಾದ ಗುರುಗಳ ವಿವರಣೆಯು ತಮಗೆ ಅರ್ಥವಾದ್ದುದನ್ನೂ ನನಗೆ ತೋರಿಸಿಕೊಟ್ಟರು.

ಗುರುಗಳು ಅವ್ಯಾಜ ಕರುಣಾಮೂರ್ತಿಗಳಾಗಿದ್ದರು ಎಂಬುದು ಅವರ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ವಿದಿತವೇ ಆಗಿತ್ತು. ಅಸಂಖ್ಯಾತ ಘಟನೆಗಳು ಇದಕ್ಕೆ ಸಾಕ್ಷಿಯಾಗಿವೆ. ಉದಾಹರಣೆಗೆ, ಈರೋಡ್‌ನ ಶ್ರೀಮತಿ ಸುಶೀಲಾ ಅವರು ತಮ್ಮ ಒಂದು ಅನುಭವವನ್ನು ಹೀಗೆ ಹಂಚಿಕೊಂಡಿದ್ದಾರೆ: 'ಒಮ್ಮೆ ಗುರುಗಳು ಸೇಲಂನಲ್ಲಿ ಬಿಡಾರ ಹೂಡಿದ್ದಾಗ ನಾನು ಅವರ ದರ್ಶನಕ್ಕೆ ಹೋದೆ. ಆಗ ಕಷ್ಟದಲ್ಲಿದ್ದ ನಮ್ಮ ಕುಟುಂಬದ ವ್ಯಾಪಾರದ ಕುರಿತು ಅವರು ಕರುಣೆಯಿಂದ ವಿಚಾರಿಸಿದರು. ನಾವು ನಮ್ಮ ಮನೆಯನ್ನು ಮಾರಿಬಿಟ್ಟು ಬಾಡಿಗೆ ಮನೆಗೆ ಹೋಗಬೇಕಾಯಿತು ಎಂದು ನಾನು ಹೇಳಿದಾಗ ಅವರು ನನಗೆ ಸಾಂತ್ವನ ನೀಡಿದರು. ನಂತರ ನಾನು ವಿನಯದಿಂದ ಅವರಿಗೆ ಹೀಗೆ ತಿಳಿಸಿದೆ: "ಗುರುಗಳ ಮುಂದಿನ ಬಿಡಾರ ಇರುವುದು ಕೊಯಮತ್ತೂರಿನಲ್ಲೆಂದು ಮತ್ತು ಈ ಬಾರಿ ಈರೋಡ್‌ನಲ್ಲಿ ತಾವು ತಂಗುವುದಿಲ್ಲವೆಂದು ನನಗೆ ತಿಳಿದುಬಂದಿದೆ. ತಾವು ಈರೋಡ್ ಮಾರ್ಗವಾಗಿ ಹಾದುಹೋಗಿ ನಮ್ಮ ಮನೆಗೆ ಬಾರದಿದ್ದರೆ, ನನಗೆ ಸಹಿಸಲಾಗದ ದುಃಖವಾಗುತ್ತದೆ. ತಮ್ಮ ಪವಿತ್ರ ಪಾದಧೂಳಿನಿಂದ ನನ್ನ ಮನೆ ಪಾವನವಾಗಲಿ ಎಂದು ನಾನು ಪ್ರಾರ್ಥಿಸುತ್ತೇನೆ." ಹೀಗೆ ಪ್ರಾರ್ಥಿಸುತ್ತಿದ್ದಾಗ ನಾನು ಕಣ್ಣೀರಿಟ್ಟೆ. ಗುರುಗಳು ಕರುಣೆಯಿಂದ, "ಚಿಂತಿಸಬೇಡ. ತಥಾಸ್ತು", ಎಂದು ನುಡಿದರು. ಕೊಯಮತ್ತೂರಿಗೆ ಹೋಗುವ ಮಾರ್ಗದಲ್ಲಿ ಅವರ ಕಾರು ನಮ್ಮ ಬಾಡಿಗೆ ಮನೆ ಇದ್ದ ಕಾಲೊನಿಯೊಳಗೆ ಬಂದು ನಮ್ಮ ಮನೆಯ ಹತ್ತಿರ ನಿಂತಿತು. ಗುರುಗಳು ಕಾರಿನಿಂದ ಇಳಿದು ತಮ್ಮ ಪಾದುಕೆಗಳನ್ನು ಬಿಟ್ಟು ಬರಿಗಾಲಿನಲ್ಲಿ ನಡೆದುಬಂದರು. ಪಾದುಕೆಗಳನ್ನು ಅವರು ಬಿಟ್ಟದ್ದೇಕೆ ಎಂದು ತಿಳಿಯದೆ ಆತಂಕಪಟ್ಟೆ; ಏಕೆಂದರೆ ಆ ಹಾದಿಯಲ್ಲಿ ಮರಳು ಮತ್ತು ಚೂಪಾದ ಕಲ್ಲುಗಳಿದ್ದವು. ಅವರು ನಿಧಾನವಾಗಿ ನಡೆದು ಮನೆಯನ್ನು ಪ್ರವೇಶಿಸಿದಾಗ, ಅವರ ಪಾದಧೂಳಿಯಿಂದ ಸ್ಪಷ್ಟ ಪಾದಚಿಹ್ನೆಗಳು ನೆಲದ ಮೇಲೆ ಮೂಡುತ್ತಿರುವುದನ್ನು ನಾನು ಕಂಡೆ. ಆಗ ಅವರು ತಮ್ಮ ವಿಶಿಷ್ಟವಾದ ಮುಗುಳ್ನಗೆಯೊಂದಿಗೆ ನನ್ನನ್ನು ನೋಡಿ, "ಇಗೋ, ನಾನು ಬಂದಿದ್ದೇನೆ. ನಿನಗೀಗ ಸಂತೋಷವೇ?" ಎಂದರು. ನನ್ನ ಮನೆಯನ್ನು ತಮ್ಮ ಪಾದಧೂಳಿನಿಂದ ಪಾವನ-ಗೊಳಿಸಬೇಕೆಂಬ ನನ್ನ ಪ್ರಾರ್ಥನೆಯನ್ನು ಗುರುಗಳು ಭಾವನಾತ್ಮಕವಾಗಿ ಮಾತ್ರವಲ್ಲದೆ ಅಕ್ಷರಶಃ ಈಡೇರಿಸಿದ್ದಾರೆ ಎಂಬುದು ನನಗೆ ಮನದಟ್ಟಾದುದು ಆಗಷ್ಟೆ. ಭಾವೋದ್ರೇಕದಿಂದ ಗದ್ಗದಿತಳಾದ ನಾನು, "ನನ್ನ ಆಸೆಯನ್ನು ಈಡೇರಿಸಿಕೊಳ್ಳುವುದಕ್ಕಾಗಿ ಗುರುಗಳನ್ನು ಚೂಪಾದ ಕಲ್ಲುಗಳ ಮೇಲೆ ನಡೆಸಿದ ಪಾಪವನ್ನೆಸಗಿದ್ದೇನೆ. ದಯವಿಟ್ಟು ನನ್ನನ್ನು ಕ್ಷಮಿಸಿ", ಎಂದೆ. ಹಸನ್ಮುಖರಾಗಿ, "ಓಹ್, ಅದೇನೂ ತೊಂದರೆಯಾಗಲಿಲ್ಲ. ಇಂಥ ನೆಲದಲ್ಲಿ ನಾನು ಸಾಕಷ್ಟು ಪಳಗಿದ್ದೇನೆ", ಎಂದರು.'

ಈ ರೀತಿಯಾಗಿ ಗುರುಗಳನ್ನು ಶೃಂಗೇರಿಯಲ್ಲಿ ನೆಲೆಸಿ ಶಿಷ್ಯರಿಗೆ ತತ್ತ್ವವನ್ನು ಬೋಧಿಸುವ 'ದೇಶಿಕರಾಜ — ಗುರುಗಳ ರಾಜ' ಎಂದು ವರ್ಣಿಸುವುದರ ಮೂಲಕ, ಅವರನ್ನು ಶಾಸ್ತ್ರದಲ್ಲಿ ಪರಿಪೂರ್ಣ ಪಾರಂಗತರಾದ, ಅಪಾರವಾದ ಮತ್ತು ಅವ್ಯಾಜ ಕರುಣೆಯುಳ್ಳ, ಅಸಾಧಾರಣ ಜೀವನ್ಮುಕ್ತ-ಗುರುಗಳೆಂದು 7ನೆಯ ಶ್ಲೋಕವು ನಿರೂಪಿಸುತ್ತದೆ.

ಮೊದಲ ಏಳು ಶ್ಲೋಕಗಳು ಪರಮಪೂಜ್ಯ ಜಗದ್ಗುರುಗಳ ಪೂಜ್ಯನಾಮವಾದ "ಅಭಿನವ ವಿದ್ಯಾತೀರ್ಥ" ಎಂಬ ಹೆಸರಿನ ಮೊದಲ ಏಳು — ಅ, ಭಿ, ನ, ವ, ವಿ, ದ್ಯಾ, ತೀ — ಎಂಬೀ ಅಕ್ಷರಗಳಿಂದ ಆರಂಭವಾಗುತ್ತವೆ. ಆದರೆ ಅವರ ನಾಮದ 'ರ್ಥ' ಎಂಬ ಎಂಟನೆಯ ಮತ್ತು ಅಂತಿಮ ಅಕ್ಷರದಿಂದ ಸಂಸ್ಕೃತದಲ್ಲಿ ಯಾವುದೇ ಪದ ಆರಂಭವಾಗುವುದಿಲ್ಲ. ಈ ಸಮಸ್ಯೆಯನ್ನು ಎಂಟನೆಯ ಶ್ಲೋಕದಲ್ಲಿ 'ರ್ಥಮಪೂರ್ವಮ್' ಎಂಬ ಪದಗುಚ್ಛದಿಂದ ಅತಿ ಚತುರವಾಗಿ ಪರಿಹರಿಸಲಾಗಿದೆ. 'ಅ'-ಅಕ್ಷರದ ಬಳಿಕ ಬರುವ 'ರ್ಥಮ್' ಎಂಬ ಪದಗುಚ್ಛವು ಪರಿಚಿತವಾದ ಸಂಸ್ಕೃತ ಪದ 'ಅರ್ಥಮ್' ಆಗುತ್ತದೆ. ಅದು 'ಅರ್ಥ' ಎಂಬ ಪದದ ದ್ವಿತೀಯಾ ಏಕವಚನ ರೂಪ. ವಿವೇಕಚೂಡಾಮಣಿಯ ತಮ್ಮ ಪ್ರಮಾಣಭೂತ ವ್ಯಾಖ್ಯಾನದ ಎರಡನೆಯ ಮಂಗಳಶ್ಲೋಕದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು 'ಚೂಡಾಮಣಿಂ ವಿವೇಕಾದಿಮ್' ಎಂಬ ಪದಗುಚ್ಛವನ್ನು ಬಳಸಿದ್ದಾರೆ. ಅದರ ಅರ್ಥ, 'ವಿವೇಕ ಎಂಬ ಪದವನ್ನು ಮೊದಲಲ್ಲಿ ಹೊಂದಿರುವ ಚೂಡಾಮಣಿಮ್ ಎಂಬ ಪದ' ಎಂದಾಗುತ್ತದೆ; ಇದರಿಂದ ವಿವರಿಸಲ್ಪಡುತ್ತಿರುವ ಗ್ರಂಥದ ಶೀರ್ಷಿಕೆಯ ದ್ವಿತೀಯಾ ವಿಭಕ್ತಿ ಏಕವಚನ 'ವಿವೇಕ-ಚೂಡಾಮಣಿಮ್' ಎಂಬ ಸಮಸ್ತಪದವು ರೂಪುಗೊಳ್ಳುತ್ತದೆ. ಆ ಶ್ಲೋಕ ಹೀಗಿದೆ: '*ಜ್ಞಾನಸ್ವರೂಪೇ ವಾಗ್ದೇವಿ ಭಗವತ್ಪಾದಪೂಜಿತೇ । ಚೂಡಾಮಣಿಂ ವಿವೇಕಾದಿಂ ವ್ಯಾಕುರುಷ್ವ ಮುಖಾನ್ಮಮ* — ಚೈತನ್ಯಸ್ವರೂಪಳೇ ಆದ, ಭಗವತ್ಪಾದರಿಂದ ಪೂಜಿತಳಾದ ಓ ವಾಗ್ದೇವಿಯೇ ('ಶೃಂಗೇರಿ ಶಾರದಾ ಪೀಠ'ದ ಅಧಿಷ್ಠಾತೃ ದೇವಿಯಾದ ಶ್ರೀ ಶಾರದೆಯೇ), ನನ್ನ ಬಾಯಿಯ ಮೂಲಕ ವಿವೇಕಚೂಡಾಮಣಿಯನ್ನು ವ್ಯಾಖ್ಯಾನಿಸು.' ಇದೇ ಪರಿಯಲ್ಲಿ ಎಂಟನೆಯ ಶ್ಲೋಕದಲ್ಲಿನ 'ಅರ್ಥಮ್' ಎಂಬ ಪದದ ರಚನೆಯು, ಪರಮಪೂಜ್ಯ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳ ವಿವೇಕಚೂಡಾಮಣಿಯ ಟೀಕೆಯ ಎರಡನೆಯ ಮಂಗಳಶ್ಲೋಕದಲ್ಲಿನ 'ವಿವೇಕಚೂಡಾಮಣಿ' ಎಂಬ ಪದದ ರಚನೆಯಂತಿದೆ.

ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದ ಆರಂಭದಲ್ಲಿ ಹೀಗೆ ಹೇಳುತ್ತಾರೆ: '*ಸ ಭಗವಾನ್...ಮರೀಚ್ಯಾದೀನ್...ಪ್ರಜಾಪತೀನ್...ಪ್ರವೃತ್ತಿಲಕ್ಷಣಂ ಧರ್ಮಂ ಗ್ರಾಹಯಾಮಾಸ ವೇದೋಕ್ತಮ್...ಸನಕಸನನ್ದನಾದೀನ್...ನಿವೃತ್ತಿಲಕ್ಷಣಂ ಧರ್ಮಂ ಜ್ಞಾನವೈರಾಗ್ಯಲಕ್ಷಣಂ ಗ್ರಾಹಯಾಮಾಸ । ದ್ವಿವಿಧೋ ಹಿ ವೇದೋಕ್ತೋ ಧರ್ಮಃ ಪ್ರವೃತ್ತಿಲಕ್ಷಣೋ ನಿವೃತ್ತಿಲಕ್ಷಣಶ್ಚ*— ಆ ಭಗವಂತನು ವೇದೋಕ್ತವಾದ ಪ್ರವೃತ್ತಿಲಕ್ಷಣವುಳ್ಳ ಧರ್ಮವನ್ನು (ಕರ್ಮ ಮತ್ತು ಕರ್ತವ್ಯಗಳಿಂದ ಗುರುತಿಸಲ್ಪಟ್ಟ ಧರ್ಮದ ಮಾರ್ಗವನ್ನು) ಅನುಸರಿಸುವಂತೆ ಮರೀಚಿ ಮೊದಲಾದ ಪ್ರಜಾಪತಿಗಳನ್ನು ಪ್ರೇರೇಪಿಸಿದನು. ಜ್ಞಾನ ಮತ್ತು ವೈರಾಗ್ಯಗಳಿಂದ ಲಕ್ಷಿತವಾದ ನಿವೃತ್ತಿಧರ್ಮವನ್ನು ಅನುಸರಿಸುವಂತೆ ಸನಕ, ಸನಂದನ ಮೊದಲಾದ ಋಷಿಗಳನ್ನು ಪ್ರೇರೇಪಿಸಿದನು. ವೈದಿಕ ಧರ್ಮವು ಎರಡು ವಿಧ: ಕರ್ಮದಿಂದ ಗುರುತಿಸಲ್ಪಟ್ಟದ್ದು ಮತ್ತು ಸಂನ್ಯಾಸದಿಂದ ಗುರುತಿಸಲ್ಪಟ್ಟದ್ದು.'[1]

[1] ಭಗವತ್ಪಾದರ ಭಗವದ್ಗೀತಾ-ಭಾಷ್ಯದ ಅವತಾರಿಕೆ

ಆಚಾರ್ಯನ ಲಕ್ಷಣವನ್ನು ಹೀಗೆ ನಿರೂಪಿಸಲಾಗಿದೆ: 'ಆಚಿನೋತಿ ಚ ಶಾಸ್ತ್ರಾರ್ಥಮಾಚಾರೇ ಸ್ಥಾಪಯತ್ಯಪಿ । ಸ್ವಯಮಾಚರತೇ ಯಸ್ಮಾದಾಚಾರ್ಯಸ್ತೇನ ಚೋಚ್ಯತೇ — ಶಾಸ್ತ್ರದ ತಾತ್ಪರ್ಯವನ್ನು ಸಂಪೂರ್ಣವಾಗಿ ಗ್ರಹಿಸಿ, ಇತರರನ್ನು ವಿಧಿಸಲ್ಪಟ್ಟ ಸತ್ಪ್ರವೃತ್ತಿಯಲ್ಲಿ ನಿಲ್ಲುವಂತೆ ಮಾಡಿ, ತಾನೂ ಸ್ವತಃ ಅದನ್ನು ಆಚರಿಸುವವನನ್ನು ಆಚಾರ್ಯನೆಂದು ಹೇಳುತ್ತಾರೆ.'[1] ಹೀಗಾಗಿ, ಆಚಾರ್ಯನು ಧರ್ಮದ ಪೂರ್ಣ ಜ್ಞಾನವನ್ನು ಹೊಂದಿರುವವನು; ಮಾತ್ರವಲ್ಲ, ಅದನ್ನು ತನ್ನ ಜೀವನದಲ್ಲಿ ಸಂಪೂರ್ಣವಾಗಿ ಮೈಗೂಡಿಸಿಕೊಂಡಿರುವವನೂ, ಇತರರನ್ನು ಅದನ್ನು ಅನುಸರಿಸುವಂತೆ ಪರಿಣಾಮಕಾರಿಯಾಗಿ ಪ್ರೇರೇಪಿಸುವವನೂ ಆದವನು. ಗುರುಗಳು ಈ ವ್ಯಾಖ್ಯಾನಕ್ಕೆ ಸಂಪೂರ್ಣವಾಗಿ ಹೊಂದುವ ಆದರ್ಶ ಆಚಾರ್ಯರಾಗಿದ್ದರು. ಧರ್ಮದ ವಿಷಯದಲ್ಲಿ ಅವರ ಗ್ರಹಿಕೆ ಮತ್ತು ವಿವರಣೆಗಳು, ಅದರ ಆಚರಣೆಯನ್ನು ಸುಗಮಗೊಳಿಸಲು ಮತ್ತು ಪ್ರೋತ್ಸಾಹಿಸಲು ಅವರು ನಿಷ್ಠೆಯಿಂದ ಮಾಡಿದ ಪ್ರಯತ್ನಗಳು ಮತ್ತು ಸ್ವತಃ ಅವರು ಅದನ್ನು ಅತ್ಯಂತ ಕಟ್ಟುನಿಟ್ಟಾಗಿ ಆಚರಿಸಿದ ಉದಾಹರಣೆಗಳ ಮೂಲಕ ಇದು ಮುಂದಿನ ಭಾಗದಲ್ಲಿ ಸ್ಪಷ್ಟವಾಗುತ್ತದೆ.

ಶಾಸ್ತ್ರವಿಹಿತ ಆಚರಣೆಯ ಮುಖ್ಯ ಅಂಶಗಳನ್ನು ಸುಲಭವಾಗಿ ಅರ್ಥವಾಗುವಂತೆ ಗುರುಗಳು ತಾವೇ ಕಲ್ಪಿಸಿಕೊಂಡ ನೀತಿಕಥೆಗಳು ಮತ್ತು ಶ್ರುತಿಯ ಪ್ರಸಂಗಗಳ ಮೂಲಕವೂ ವಿವರಿಸುತ್ತಿದ್ದರು. ಸತ್ಯಕ್ಕೆ ಸಂಬಂಧಿಸಿದ ಅವರ ವಿವರಣೆಯ ಕೆಲವು ಉದಾಹರಣೆಗಳು ಈ ಕೆಳಕಂಡಂತೆ ಇವೆ; ಇವುಗಳಲ್ಲಿ ವಿಶೇಷವಾಗಿ, ಕೃಷ್ಣಪರಮಾತ್ಮನು ಅರ್ಜುನನಿಗೂ ಯುಧಿಷ್ಠಿರನಿಗೂ ಸತ್ಯವಚನದ ಸೂಕ್ಷ್ಮ ಅಂಶಗಳನ್ನು ಬೋಧಿಸುವ ಮಹಾಭಾರತದ ಒಂದು ಪ್ರಸಂಗಕ್ಕೆ ಸಂಬಂಧಪಟ್ಟ ಅವರ ವಿವರಣೆಯನ್ನು ಕೊನೆಯಲ್ಲಿ ನೀಡಲಾಗಿದೆ.

ಒಬ್ಬ ವ್ಯಕ್ತಿಯು ಕೆಲವು ವಸ್ತುಗಳನ್ನು ಕದ್ದನು. ಅವನನ್ನು ಹಿಡಿದು, ಸತ್ಯವನ್ನೇ ಹೇಳುವುದಾಗಿ ಪ್ರಮಾಣ ಮಾಡಿಸಲಾಯಿತು. 'ಜೀವವಿರುವವರೆಗೂ ನಾನು ಸತ್ಯವನ್ನೇ ಹೇಳುತ್ತೇನೆ', ಎಂದನು. ನಂತರ ಅವನನ್ನು ಪ್ರಶ್ನಿಸಲಾಯಿತು. ತಾನು ಏನನ್ನೂ ಕದ್ದೇ ಇಲ್ಲವೆಂದು ಅವನು ಖಡಾಖಂಡಿತವಾಗಿ ನಿರಾಕರಿಸಬಿಟ್ಟನು. ಅವನ ಹೇಳಿಕೆಯ ಆಧಾರದ ಮೇಲೆ ಅವನನ್ನು ಬಿಡುಗಡೆ ಮಾಡಲಾಯಿತು. ಅವನೊಂದಿಗೆ ಆ ಹೀನ ಕೃತ್ಯದಲ್ಲಿ ಪಾಲ್ಗೊಂಡಿದ್ದ ಒಬ್ಬ ಸ್ನೇಹಿತನು ಅವನನ್ನು, 'ನೀನು ಪ್ರಮಾಣ ಮಾಡಿದ ಮೇಲೂ ಇಷ್ಟರ ಮಟ್ಟಿಗೆ ದಿಟ್ಟತನದಿಂದ ಸುಳ್ಳನ್ನು ಹೇಳಿದ್ದೇಕೆ?' ಎಂದು ಕೇಳಿದನು. ಆಗ, 'ನಾನು ಸುಳ್ಳು ಹೇಳಲಿಲ್ಲ. ನಾನು

[1] ಈ ಶ್ಲೋಕವು ಧರ್ಮಶಾಸ್ತ್ರದ ಸಂಕಲನಗಳು ಮತ್ತು ವ್ಯಾಖ್ಯಾನಗಳಲ್ಲಿ, ರಾಜಮಾರ್ತಾಂಡ ಎಂಬ ಯೋಗಸೂತ್ರಗಳ ಟೀಕೆಯಲ್ಲಿ ಮತ್ತು ಭಗವತ್ಪಾದರ ಬ್ರಹ್ಮಸೂತ್ರ-ಭಾಷ್ಯದ ಮೇಲಿನ ಭಾಮತೀ ವ್ಯಾಖ್ಯಾನದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದರ ಮೂಲವು ಒಂದು ಪುರಾಣವೆಂದು ಹೇಳಲಾಗಿದೆ. ಲಿಂಗ-ಪುರಾಣ 2.20.20, ಬ್ರಹ್ಮಾಂಡ-ಪುರಾಣ 1.32.32 ಮತ್ತು ವಾಯು-ಪುರಾಣ 1.5.30ಗಳಲ್ಲಿ ಇದು ದೊರೆಯುತ್ತದೆ; ಈ ಪುರಾಣಗಳ ಮುದ್ರಿತ ಆವೃತ್ತಿಗಳಲ್ಲಿ ಈ ಶ್ಲೋಕದ ಮೂರನೆಯ ಪಾದವು ಮೊದಲನೆಯದಾಗಿ ಕಂಡುಬರುತ್ತದೆ.

ಹೇಳಿದ್ದೆಲ್ಲವೂ ಸತ್ಯವೇ. ನಾನು ಜೀವ ಇರುವವರೆಗೂ ಸತ್ಯವನ್ನೇ ಹೇಳುತ್ತೇನೆಂದು ಪ್ರತಿಜ್ಞೆ ಮಾಡಿದ್ದೆ. ನನ್ನ ಕೈಯಲ್ಲಿ ಒಂದು ಹುಳು ಇತ್ತು. ನಾನು ಉತ್ತರಿಸುವ ಮೊದಲು ಅದನ್ನು ಹಿಸುಕಿ ಕೊಂದುಬಿಟ್ಟೆ. ಆದ್ದರಿಂದ, "ಜೀವವಿರುವವರೆಗೂ ನಾನು ಸತ್ಯವನ್ನೇ ಹೇಳುತ್ತೇನೆ", ಎಂಬ ನನ್ನ ಮಾತು ಸತ್ಯವಾಗಿಯೇ ಉಳಿಯಿತು', ಎಂದು ಅವನು ನಿರ್ಲಜ್ಜನಾಗಿ ಉತ್ತರಿಸಿದನು.

ಇದು ಕುತರ್ಕದ ಒಂದು ಉದಾಹರಣೆಯಷ್ಟೆ. ಮನಸ್ಸಿನಲ್ಲಿ ಒಂದನ್ನು ಇಟ್ಟುಕೊಂಡು, ಕೇಳುವವನು ಬೇರೆ ಅರ್ಥವನ್ನು ಗ್ರಹಿಸುವಂತೆ ದ್ವಂದ್ವಾರ್ಥಕ ಅಥವಾ ದಾರಿ ತಪ್ಪಿಸುವ ಮಾತುಗಳನ್ನು ಆಡಿದರೆ, ಅವನು ಸತ್ಯವಚನದಿಂದ ವಿಚಲಿತನಾಗಿದ್ದಾನೆ. ಶಾಸ್ತ್ರವು ವಿಧಿಸಿದಂತೆ ಸತ್ಯವನ್ನು ನುಡಿಯಲು ಮಾತುಗಳು ಮನಸ್ಸಿನಲ್ಲಿರುವ ಭಾವಕ್ಕೆ ಅನುಗುಣವಾಗಿ ಇರಬೇಕು. 'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಮ್ । ಮನಸ್ಯನ್ಯತ್ ವಚಸ್ಯನ್ಯತ್ಕರ್ಮಣ್ಯನ್ಯದ್ದುರಾತ್ಮನಾಮ್ — ಮಹಾತ್ಮರ ಮನಸ್ಸು, ಮಾತು ಮತ್ತು ಕರ್ಮಗಳಲ್ಲಿ ಏಕರೂಪತೆ ಇರುತ್ತದೆ; (ಇದಕ್ಕೆ ವ್ಯತಿರಿಕ್ತವಾಗಿ) ದುಷ್ಟರ ಆಲೋಚನೆ ಒಂದಾದರೆ, ಮಾತು ಮತ್ತೊಂದು ಮತ್ತು ಕ್ರಿಯೆ ಮಗದೊಂದು,'[1] ಎಂದು ಹೇಳಲಾಗಿದೆ.

'ಸತ್ಯಂ ವದ — ಸತ್ಯವನ್ನು ನುಡಿ',[2] ಎಂಬುದಾಗಿ ಶ್ರುತಿಯು ವಿಧಿಸುತ್ತದೆ. ಇದನ್ನು ಸ್ಮೃತಿಯು, 'ಸತ್ಯಂ ಬ್ರೂಯಾತ್ಪ್ರಿಯಂ ಬ್ರೂಯಾನ್ನ ಬ್ರೂಯಾತ್ಸತ್ಯಮಪ್ರಿಯಮ್ । ಪ್ರಿಯಂ ಚ ನಾನೃತಂ ಬ್ರೂಯಾದೇಷ ಧರ್ಮಸ್ಸನಾತನಃ — ಸತ್ಯವನ್ನು ನುಡಿಯಬೇಕು; ಪ್ರಿಯವಾದುದನ್ನು ಹೇಳಬೇಕು; ಸತ್ಯವಾದರೂ ಅಪ್ರಿಯವಾದುದನ್ನು ಹೇಳಬಾರದು; ಪ್ರಿಯವಾದರೂ ಸುಳ್ಳನ್ನು ನುಡಿಯಬಾರದು. ಇದು ಸನಾತನ ಧರ್ಮ',[3] ಎಂಬುದಾಗಿ ವಿಶದಪಡಿಸುತ್ತದೆ. ಕಷ್ಟಕರ ಸಂದರ್ಭಗಳಲ್ಲೂ ಸತ್ಯವನ್ನು ಪಾಲಿಸುವುದರಿಂದ ಪುಣ್ಯ, ಸ್ವರ್ಗಫಲ ಮತ್ತು ಕೀರ್ತಿ ದೊರೆಯುತ್ತದೆ ಎಂಬುದನ್ನು ಹರಿಶ್ಚಂದ್ರ ಮುಂತಾದವರ ಕಥೆಗಳ ಮೂಲಕ ಪುರಾಣಗಳು[4] ತೋರಿಸುತ್ತವೆ. ಹೀಗೆ ಆ ಶ್ರುತಿ-ಸ್ಮೃತಿ-ಪುರಾಣಗಳು ಜನರನ್ನು ಸತ್ಯವಚನದ ಧರ್ಮವನ್ನು ದೃಢವಾಗಿ ಅನುಸರಿಸುವಂತೆ ಪ್ರೇರೇಪಿಸುತ್ತವೆ.

ಒಬ್ಬ ವ್ಯಕ್ತಿಯು ತನ್ನ ಸ್ನೇಹಿತನನ್ನು ಮೋಸಗೊಳಿಸಲು ನಿರ್ಧರಿಸಿದನು. ಅವನು ತನ್ನ ಸ್ನೇಹಿತನಲ್ಲಿಗೆ ಹೋಗಿ ಉತ್ಸಾಹದಿಂದ, 'ನೀನು ಲಾಟರಿಯಲ್ಲಿ ಹತ್ತು ಲಕ್ಷ ರೂಪಾಯಿಗಳನ್ನು ಗೆದ್ದಿರುವೆ ಎಂಬುದು ನಿನಗೆ ಗೊತ್ತಿಲ್ಲವೇ? ನೀನು ಹೀಗೆ ಏನೂ ನಡೆದಿಲ್ಲವೆಂಬಂತೆ ಹೇಗೆ ತಾನೆ ಕುಳಿತಿದ್ದೀಯ?' ಎಂದು ಕೇಳಿದನು. ಸ್ನೇಹಿತನು ದಿಗ್ಭ್ರಮೆಗೊಂಡನು. ಅವನ ಆಶ್ಚರ್ಯವು ತುಸು ಕಡಿಮೆಯಾದಾಗ, ಅವನು ಗಾಳಿಯಲ್ಲಿ ಕೋಟೆಯನ್ನು ಕಟ್ಟತೊಡಗಿದನು. ಅಷ್ಟರಲ್ಲಿ ಆ

[1] ಪದ್ಮ-ಪುರಾಣ 7.6.108–109; ಹಿತೋಪದೇಶ 2.102

[2] ತೈತ್ತಿರೀಯ-ಉಪನಿಷತ್ 1.11.1

[3] ಮನು-ಸ್ಮೃತಿ 4.138

[4] ಮಾರ್ಕಂಡೇಯ-ಪುರಾಣ 7.1–69; 8.1–268; ದೇವೀ-ಭಾಗವತ 7.18.1–7.27.41

ಕುಚೇಷ್ಟೆ ಮಾಡಿದವನು ಅಲ್ಲಿಂದ ಹೊರಟುಹೋದನು. ಕೊನೆಗೆ, ಲಾಟರಿಯಲ್ಲಿ ತನ್ನ ಸಂಖ್ಯೆಯನ್ನು ನೋಡಿ ಸಂತೋಷಿಸಲು ಸ್ನೇಹಿತನು ವಾರ್ತಾಪತ್ರಿಕೆಯಲ್ಲಿ ಹುಡುಕಿದನು. ಆದರೆ ಅಲ್ಲಿ ತನ್ನ ಸಂಖ್ಯೆಯನ್ನು ಕಾಣದೆ, ಅವನ ಉಲ್ಲಾಸವು ಪೂರ್ಣ ನಿರಾಶೆಯಾಗಿ ಬದಲಾಯಿತು. ಇದು ಪ್ರಿಯವಾದ ಅಸತ್ಯಕ್ಕೆ ಒಂದು ಉದಾಹರಣೆ.

ದುಃಖಕರವಾದ ಸತ್ಯವನ್ನು ಜವಾಬ್ದಾರಿಯಿಲ್ಲದೆ ನುಡಿಯಬಾರದು. ಇದಕ್ಕೆ ಸಂಬಧಪಟ್ಟ ನಿದರ್ಶನ ಇಲ್ಲಿದೆ. ತೀವ್ರವಾದ ಹೃದಯಾಘಾತಕ್ಕೆ ಒಳಗಾಗಿದ್ದ ಒಬ್ಬ ವ್ಯಕ್ತಿಯು ಆಸ್ಪತ್ರೆಯಲ್ಲಿ ಚೇತರಿಸಿಕೊಳ್ಳುತ್ತಿದ್ದನು. ಒಂದು ದಿನ ಅವನ ಮಗನು ರಸ್ತೆ ಅಪಘಾತಕ್ಕೆ ತುತ್ತಾಗಿ ಮೃತಪಟ್ಟನು. ಆ ದುರ್ಘಟನೆಯನ್ನು ಕಂಡ ಒಬ್ಬ ವ್ಯಕ್ತಿಯು ಆಸ್ಪತ್ರೆಗೆ ಧಾವಿಸಿ ಆ ರೋಗಿಗೆ, 'ಏನಾಗಿದೆ ಎಂದು ನಿನಗೆ ಗೊತ್ತೇ? ನಿನ್ನ ಮಗ ಸತ್ತುಹೋದನು', ಎಂದು ಉದ್ಗರಿಸಿದನು. ತನ್ನ ಮಗನ ಮೇಲೆ ಅಪಾರವಾದ ಪ್ರೀತಿಯಿದ್ದ ಆ ರೋಗಿ ಆ ದಾರುಣ ಸುದ್ದಿಯನ್ನು ಸಹಿಸಲಾಗದೆ ಹೋದನು. ಆಗ್ಗೆ ಅವನ ಹೃದಯವು ದುರ್ಬಲವಾಗಿದ್ದರಿಂದ, ಅವನೂ ಪ್ರಾಣಬಿಟ್ಟನು. ಕೆಟ್ಟ ಸುದ್ದಿಯನ್ನು ಈ ಬಗೆಯಲ್ಲಿ ತಿಳಿಸಿದ ವ್ಯಕ್ತಿಯ ವರ್ತನೆಯನ್ನು ಧರ್ಮವೆನ್ನಲಾಗದು.

ಇದು ಇಲ್ಲಿಯ ಸಾರಾಂಶ. ಸತ್ಯವನ್ನು ಹೇಳಬೇಕು; ಮಾತ್ರವಲ್ಲ, ಮಾತುಗಳು ಇತರರಿಗೆ ಪ್ರಿಯವಾಗಿಯೂ ಹಿತಕರವಾಗಿಯೂ ಇರಬೇಕು; ದುಃಖಕರವಾದ ಸತ್ಯಗಳನ್ನು ಯೋಚಿಸದೆ ನುಡಿಯಬಾರದು; ಮತ್ತು ಇತರರನ್ನು ದಾರಿತಪ್ಪಿಸುವಂತೆ ಮಾತುಗಳನ್ನು ರೂಪಿಸಬಾರದು.

ಒಮ್ಮೆ ಮೂವರು ವ್ಯಕ್ತಿಗಳು ತಮ್ಮನ್ನು ಕರೆದೊಯ್ಯಲು ಬಂದ ದೇವಲೋಕದ ವಿಮಾನದಲ್ಲಿ ಸ್ವರ್ಗದತ್ತ ಪ್ರಯಾಣ ಬೆಳೆಸುತ್ತಿದ್ದರು. ಆಗ ಅವರು ಹಾವೊಂದು ತನ್ನ ಬೇಟೆಯಾಗಿ ಕಪ್ಪೆಯೊಂದನ್ನು ಕಬಳಿಸಲು ಮುಂದಾಗುತ್ತಿದ್ದುದನ್ನು ಕಂಡರು. ಅವರಲ್ಲೊಬ್ಬ, 'ಓ ಸರ್ಪವೆ! ಕಪ್ಪೆಯ ಮೇಲೆ ನಿನಗೆ ಅನುಕಂಪವೇ ಇಲ್ಲವೇ? ದಯವಿಟ್ಟು ಅದರ ಪ್ರಾಣವನ್ನು ಉಳಿಸು', ಎಂದ. ಸಿಟ್ಟಿಗೆದ್ದ ಆ ನಾಗ, 'ನನ್ನನ್ನು ನನ್ನ ಆಹಾರದಿಂದ ವಂಚಿತನನ್ನಾಗಿ ಮಾಡಲು ನಿನಗೆಷ್ಟು ಧೈರ್ಯ? ನೀನು ನರಕಕ್ಕೆ ಹೋಗು', ಎಂದು ಅವನಿಗೆ ಶಾಪ ಹಾಕಿತು. ಅವನ ಕರ್ಮ; ನರಕಕ್ಕೆ ಹೋದ. ಅದನ್ನು ಕಂಡ ದಿಗ್ಭ್ರಮೆಗೊಂಡ ಎರಡನೆಯವನು, ಹಾವಿನ ಪಕ್ಷವನ್ನು ಹಿಡಿದು, 'ಕಪ್ಪೆ ನಿನ್ನ ನೈಸರ್ಗಿಕವಾದ ಆಹಾರವಷ್ಟೆ. ಖಂಡಿತವಾಗಿಯೂ ನೀನದನ್ನು ತಿನ್ನಬಹುದು', ಎಂದ. ಆಗ ಆಕ್ರೋಶದಿಂದ ಕಪ್ಪೆ, 'ನಾನು ತುತ್ತಾಗಬಹುದೆಂದು ಹೇಳಲು ನಿನಗೆಷ್ಟು ಧೈರ್ಯ? ನಿನಗೆ ಕರುಣೆಯೇ ಇಲ್ಲ. ನೀನು ನರಕಯಾತನೆಯನ್ನು ಅನುಭವಿಸುವಂತಾಗಲಿ', ಎಂದು ಅವನಿಗೆ ಎದುರಾಯಿತು. ಅವನು ದೇವಲೋಕದ ವಿಮಾನದಿಂದ ಕೆಳಗೆ ಬಿದ್ದ. ಮೌನದಿಂದಿದ್ದ ಮೂರನೆಯವನು ಸ್ವರ್ಗವನ್ನು ಸೇರಿದ. ಈ ಕಥೆಯ ನೀತಿಯೇನೆಂದರೆ, ಕೆಲವೊಮ್ಮೆ ಸತ್ಯವನ್ನು ನುಡಿಯುವುದಕ್ಕಿಂತಲೂ ಮೌನವಾಗಿರುವುದೇ ಲೇಸು.

ದ್ರೋಣಾಚಾರ್ಯರ ಮರಣದ ಬಳಿಕ ಕರ್ಣನು ಕೌರವ ಪಡೆಗಳ ಸೇನಾಪತಿಯಾದನು. ಕರ್ಣನೊಂದಿಗೆ ಮುಖಾಮುಖಿಯಲ್ಲಿ ಯುಧಿಷ್ಠಿರ, ನಕುಲ ಮತ್ತು ಸಹದೇವ ಸೋತು

ಗಾಯಗೊಂಡರು. ಅವಮಾನಿತನಾದ ಮತ್ತು ಬಹಳವಾಗಿ ನೊಂದ ಯುಧಿಷ್ಠಿರನು ಸ್ವಲ್ಪ ವಿಶ್ರಾಂತಿ ಪಡೆಯಲು ಯುದ್ಧಭೂಮಿಯಿಂದ ತನ್ನ ಗುಡಾರಕ್ಕೆ ಹಿಂದಿರುಗಿದನು. ಭೀಕರ ಯುದ್ಧ ಮುಂದುವರಿಯಿತು. ಸ್ವಲ್ಪ ಸಮಯದ ನಂತರ, ಯುಧಿಷ್ಠಿರನ ಬಗ್ಗೆ ಆತಂಕಗೊಂಡ ಅರ್ಜುನನು ಅವನನ್ನು ನೋಡಬಯಸಿದ. ಆದ್ದರಿಂದ ಅವನು ಪಾಂಡವ ಪಡೆಗಳನ್ನು ಭೀಮನ ಆಧಿಪತ್ಯದಲ್ಲಿ ಬಿಟ್ಟು ತನ್ನನ್ನು ಯುಧಿಷ್ಠಿರನ ಗುಡಾರಕ್ಕೆ ಕರೆದೊಯ್ಯುವಂತೆ ಕೃಷ್ಣನನ್ನು ಕೋರಿದನು.

ಕೃಷ್ಣ ಮತ್ತು ಅರ್ಜುನ ಯುಧಿಷ್ಠಿರನಿಗೆ ಗೌರವ ಸಲ್ಲಿಸಲು ಬಂದಾಗ, ಅರ್ಜುನನು ಕರ್ಣನನ್ನು ಕೊಂದಿರುವುದಾಗಿ ತಪ್ಪಾಗಿ ಭಾವಿಸಿದ ಯುಧಿಷ್ಠಿರನು ಅದರ ವಿವರಗಳನ್ನು ತಿಳಿದುಕೊಳ್ಳಲು ಬಯಸಿದನು. ಕರ್ಣನನ್ನು ಕೊಲ್ಲುವಲ್ಲಿ ತಾನಿನ್ನೂ ಯಶಸ್ವಿಯಾಗಲಿಲ್ಲವೆಂದು ಅರ್ಜುನನು ವಿವರಿಸಿ, ಮುಂದೆ ಖಂಡಿತವಾಗಿಯೂ ಕೊಲ್ಲುವುದಾಗಿ ಪ್ರತಿಜ್ಞೆ ಮಾಡಿದನು.

ಅರ್ಜುನನ ಮಾತುಗಳನ್ನು ಕೇಳಿದಾಗ ಯುಧಿಷ್ಠಿರನಿಗೆ ಬಹಳ ಅಸಮಾಧಾನವಾಗಿ ಸಿಟ್ಟೇರಿತು. ಅರ್ಜುನನನ್ನು ಕುರಿತು, 'ಕರ್ಣನನ್ನು ಸೋಲಿಸಲು ಸಾಧ್ಯವಿಲ್ಲದೆ ಹೆದರಿ ನೀನು ಭೀಮನ ಆಧಿಪತ್ಯಕ್ಕೆ ಪಡೆಗಳನ್ನು ಬಿಟ್ಟು ಇಲ್ಲಿಗೆ ಓಡಿ ಬಂದಿರುವೆ. ಕರ್ಣನೊಂದಿಗೆ ಹೋರಾಡುವುದಿಲ್ಲ ಎಂಬುದಾಗಿ ಬಹಳ ಹಿಂದೆಯೇ ನೀನು ಹೇಳಿದ್ದೇ ಆದರೆ, ರಣನೀತಿಯನ್ನು ನಾನು ಬೇರೆ ರೀತಿಯಲ್ಲೇ ನಿರ್ಧರಿಸುತ್ತಿದ್ದೆ. ಕರ್ಣನನ್ನು ಕೊಲ್ಲುತ್ತೇನೆಂದು ಭರವಸೆ ನೀಡಿ, ನಿನ್ನ ಮಾತನ್ನು ಉಳಿಸಿಕೊಂಡಿಲ್ಲ. ನಿನ್ನ ರಥವನ್ನು ವಿಶ್ವಕರ್ಮ ಸಿದ್ಧಪಡಿಸಿದ್ದಾನೆ; ಅದರ ಮೇಲೆ ಹನುಮಂತನ ಚಿಹ್ನೆಯ ಒಂದು ಧ್ವಜವಿದೆ. ನಿನ್ನ ಬಳಿ ಗಾಂಡೀವ ಬಿಲ್ಲಿದೆ. ಶ್ರೀಕೃಷ್ಣನೇ ಸ್ವಯಂ ನಿನ್ನ ಸಾರಥಿ. ಇಷ್ಟೆಲ್ಲ ಇದ್ದಾಗ್ಯೂ, ಕರ್ಣನ ಭಯದಿಂದ ನೀನು ಇಲ್ಲಿಗೆ ಓಡಿ ಬಂದಿರುವೆ. ನಿನ್ನ ಗಾಂಡೀವವನ್ನು ಕೃಷ್ಣನಿಗೆ ಕೊಟ್ಟುಬಿಡು. ಕೃಷ್ಣ ಅಗತ್ಯ ಕ್ರಮ ಕೈಗೊಂಡು ಕರ್ಣನನ್ನು ಕೊಲ್ಲಲಿ. ಇಲ್ಲವಾದರೆ, ಗಾಂಡೀವವನ್ನು ಮತ್ತಾರಿಗಾದರೂ ಕೊಟ್ಟುಬಿಡು. ನೀನದಕ್ಕೆ ಅನರ್ಹ. ನಿನಗೆ ನಾಚಿಕೆಯಾಗಬೇಕು! ನಿನ್ನ ಪರಾಕ್ರಮಕ್ಕೆ ಮಾನಗೇಡು! ನಿನ್ನ ಗಾಂಡೀವಕ್ಕೆ ಅವಮಾನ!' ಎಂದು ತೀವ್ರವಾಗಿ ಖಂಡಿಸಿದನು.

ಯುಧಿಷ್ಠಿರನ ಛೀಮಾರಿ ಕೇಳಿ ಅರ್ಜುನನ ಕೋಪ ಕೆರಳಿತು. ಅವನು ತನ್ನ ಕತ್ತಿಯನ್ನು ಹೊರತೆಗೆಯುತ್ತಿದ್ದುದನ್ನು ನೋಡಿದ ಕೃಷ್ಣನು, 'ಏನನ್ನು ಮಾಡಲು ಮುಂದಾಗಿರುವೆ? ಇಲ್ಲಿ ಯಾರೂ ವೈರಿಗಳಲ್ಲ. ಖಡ್ಗವನ್ನೇಕೆ ಹೊರತೆಗೆಯ ಹೊರಟಿರುವೆ?' ಎಂದು ಕೇಳಿದ. ಅರ್ಜುನನು, 'ನಾನು ಯುಧಿಷ್ಠಿರನನ್ನು ಮುಗಿಸಿಬಿಡುತ್ತೇನೆ. "ಗಾಂಡೀವವನ್ನು ಬಿಟ್ಟುಬಿಡು", ಎಂದು ಯಾರಾದರೂ ನನಗೆ ಹೇಳಿದರೆ, ಖಂಡಿತವಾಗಿಯೂ ಅವನನ್ನು ಕೊಲ್ಲುವೆನೆಂದು ನಾನು ರಹಸ್ಯವಾಗಿ ಪ್ರತಿಜ್ಞೆ ಮಾಡಿದ್ದೇನೆ. ನನ್ನ ಗಾಂಡೀವವನ್ನು ಇನ್ನೊಬ್ಬರಿಗೆ ಕೊಡುವಂತೆ ಹೇಳುವ ಮೂಲಕ ನನ್ನನ್ನು ಅವಮಾನಿಸಿದ್ದಲ್ಲದೆ, ನಾನದಕ್ಕೆ ಅನರ್ಹನೆಂದು ಯುಧಿಷ್ಠಿರ

ಪರಿಗಣಿಸಿದ್ದ ಕಾರಣ, ನನ್ನ ಪ್ರತಿಜ್ಞೆಯನ್ನು ಈಡೇರಿಸಲು ಯುಧಿಷ್ಠಿರನನ್ನು ಕೊಲ್ಲಲು ಈಗ ಮುಂದಾಗಿದ್ದೇನೆ', ಎಂದು ಗುಡುಗಿದನು.

ಕೃಷ್ಣನು, 'ಅರ್ಜುನ, ನಿನಗೆ ಮಾನಗೇಡು! ನೀನು ಉದ್ಯುಕ್ತನಾದ ರೀತಿಯಲ್ಲಿ ಧರ್ಮದ ನಿಜ ಸ್ವರೂಪವನ್ನು ತಿಳಿದ ಯಾರೂ ವರ್ತಿಸುವುದಿಲ್ಲ. ಸತ್ಯವನ್ನು ಪಾಲಿಸುವುದು ಅತಿ ಶ್ರೇಷ್ಠ. ಆದಾಗ್ಯೂ, ಮಹಾತ್ಮರು ಎತ್ತಿಹಿಡಿದಂತೆ ಸತ್ಯದ ಸ್ವರೂಪವನ್ನು ಸುಲಭವಾಗಿ ಗ್ರಹಿಸಲು ಸಾಧ್ಯವಿಲ್ಲ. ಒಬ್ಬ ವ್ಯಕ್ತಿ ಸುಳ್ಳನ್ನು ನುಡಿದೂ ಪಾಪಕ್ಕೆ ಒಳಗಾಗದ ಸಂದರ್ಭಗಳಿವೆ. ಉದಾಹರಣೆಗೆ, ತನ್ನ ಪ್ರಾಣವನ್ನು ಉಳಿಸಿಕೊಳ್ಳಲಾಗಲಿ, ತನ್ನನ್ನು ಸಂಪೂರ್ಣ ವಿನಾಶದಿಂದ ಪಾರುಮಾಡಿಕೊಳ್ಳಲಾಗಲಿ, ಪವಿತ್ರಾತ್ಮರೊಬ್ಬರ ಹಿತಕ್ಕಾಗಲಿ ಸುಳ್ಳನ್ನು ಹೇಳಬಹುದು. ಅದರಿಂದ ಅನ್ಯಾಯವನ್ನು ಎಸಗಿದಂತಾಗದು. ಸತ್ಯವನ್ನು ನಿರ್ದಾಕ್ಷಿಣ್ಯವಾಗಿ ನುಡಿಯುವುದರ ಮೂಲಕ ಪುಣ್ಯವನ್ನು ಗಳಿಸದಿರುವುದು ಮಾತ್ರವಲ್ಲದೆ, ಪಾಪಕ್ಕೆ ಗುರಿಯಾಗುವ ಕೆಲ ಸಂದರ್ಭಗಳೂ ಇವೆ', ಎಂದು ತಿಳಿಹೇಳಿದನು.

ಕೃಷ್ಣನು ಆಗ ಕೌಶಿಕನ ಕಥೆಯನ್ನು ಹೇಳಿದನು. ಅಷ್ಟೇನೂ ವಿದ್ಯಾವಂತನಾಗಿರದಿದ್ದರೂ ಕೌಶಿಕನು ಸತ್ಯವಂತನಾಗಬಯಸಿದ್ದನು. ಸತ್ಯವಾದಿಯೆಂದು ಪ್ರಸಿದ್ಧನಾಗಿದ್ದನು. ಒಂದು ದಿನ ಅವನು ಕುಳಿತಿದ್ದಾಗ ಕೆಲವರು ಅವನಿದ್ದ ಸ್ಥಳವನ್ನು ಹಾದು ಓಡಿಹೋದರು. ಸ್ವಲ್ಪ ಸಮಯದ ನಂತರ, ದರೋಡೆಕಾರರು ಗುಂಪಾಗಿ ಅತ್ತ ಬಂದು, ಅವರು ಹಿಂಬಾಲಿಸುತ್ತಿರುವ ವ್ಯಕ್ತಿಗಳು ಎಲ್ಲೆಂದು ಕೇಳಿದರು. ನಿಜವನ್ನು ನುಡಿಯುವುದು ಅಮೂಲ್ಯವೆಂದು ಭಾವಿಸಿದ ಕೌಶಿಕನು, ಆ ಜನರು ಹೋದ ಹಾದಿಯನ್ನು ಅವರಿಗೆ ಸೂಚಿಸಿಯೇ ಬಿಟ್ಟನು. ಡಕಾಯಿತರು ಆ ಹಾದಿಯಲ್ಲಿ ಮುಂದುವರಿದು, ಕಡೆಗೆ ಅವರನ್ನು ಕೊಂದೇ ಬಿಟ್ಟರು. ಆಗ ಕೌಶಿಕನು ತನ್ನ ಸತ್ಯವಚನದಿಂದ ಪುಣ್ಯವನ್ನು ಗಳಿಸಲಿಲ್ಲವೆಂದಿರಲಿ; ಪಾಪವೇ ಅವನ ಪಾಲಾಯಿತೆಂದು ಕೃಷ್ಣನು ವಿವರಿಸಿದನು. ಆ ಸನ್ನಿವೇಶದಲ್ಲಿ, ಕೌಶಿಕ ಮೌನವಾಗಿರಬೇಕಿತ್ತೆಂದೂ ತಿಳಿಸಿದನು. ಇಲ್ಲವೇ, ಆತನ ಮೌನದಿಂದಲೇ ಡಕಾಯಿತರಿಗೆ ಆ ಜನರು ಅತ್ತ ಹಾದುಹೋಗಿದ್ದ ಸುಳಿವು ಸಿಗುವ ಸಂಭವವಿದ್ದರೆ, ಕೌಶಿಕನು ಡಕಾಯಿತರ ದಾರಿ ತಪ್ಪಿಸಬಹುದಿತ್ತು.

ಕೌಶಿಕನ ಈ ವೃತ್ತಾಂತವನ್ನು ಹೇಳಿ ನಂತರ ಕೃಷ್ಣನು ಅರ್ಜುನನಿಗೆ ಯುಧಿಷ್ಠಿರನು ಬಹಳ ನೋವಿನಿಂದ ಬಳಲುತ್ತಿದ್ದು ಕರ್ಣನಿಂದ ಅವಮಾನಿತನಾಗಿರುವನೆಂದು ಸ್ಪಷ್ಟಪಡಿಸಿದನು. ತನ್ನ ಮಟ್ಟಿಗೆ ಯುದ್ಧವನ್ನು ನಿಲ್ಲಿಸಿದ ನಂತರವೂ ಯುಧಿಷ್ಠಿರನ ಮೇಲೆ ಕರ್ಣನು ಹಲ್ಲೆ ನಡೆಸಿದ್ದನು. ಹೀಗಾಗಿ ಅರ್ಜುನನನ್ನು ಖಂಡಿಸಿದಾಗ ಯುಧಿಷ್ಠಿರನು ಖಿನ್ನನಾಗಿದ್ದ. ಇದಲ್ಲದೆ, ಅರ್ಜುನನಿಗೆ ಕರ್ಣನನ್ನು ಕೊಲ್ಲುವ ಸಾಮರ್ಥ್ಯವಿದೆಯೆಂದು ತಾನು ತಿಳಿದಿದ್ದ ಕಾರಣ, ಯುಧಿಷ್ಠಿರನು ಕಟು ಮಾತುಗಳಿಂದ ಕರ್ಣನನ್ನು ಕೊಲ್ಲುವಂತೆ ಅರ್ಜುನನನ್ನು ಪ್ರಚೋದಿಸಲು ಯತ್ನಿಸಿದನು. ಅರ್ಜುನನಿಗೆ ಪೂಜ್ಯನೂ ಸತ್ಪುರುಷನೂ ಆದ ಯುಧಿಷ್ಠಿರನ ಮಾತುಗಳನ್ನು ಸಮರ್ಪಕವಾಗಿ ಸಮರ್ಥಿಸಬಹುದಾಗಿರುವುದರಿಂದ, ಅರ್ಜುನನು ಆತನನ್ನು ಕೊಲ್ಲುವುದು ಮಹಾ

ಅಪರಾಧವೂ ಅತ್ಯುನ್ನತ ಧರ್ಮವಾದ ಅಹಿಂಸೆಯ ನೇರ ಉಲ್ಲಂಘನೆಯೂ ಆಗುತ್ತದೆಂದು ಭಗವಂತ ಕೃಷ್ಣನು ವಿಶದಪಡಿಸಿದನು.

ಆಗ ತಾನೇನು ಮಾಡಬೇಕೆಂಬುದನ್ನು ನಿಸ್ಸಂದಿಗ್ಧವಾಗಿ ತನಗೆ ಸೂಚಿಸುವಂತೆ ಅರ್ಜುನನು ಕೃಷ್ಣನನ್ನು ವಿನಂತಿಸಿದನು. ಏಕೆಂದರೆ, ಒಂದೆಡೆ ಯುಧಿಷ್ಠಿರನನ್ನು ಹತ್ಯೆ ಮಾಡುವುದು ತಪ್ಪು; ಮತ್ತೊಂದೆಡೆ ಅವನು ತನ್ನ ಪ್ರತಿಜ್ಞೆಯನ್ನು ಈಡೇರಿಸಬೇಕಾಗಿತ್ತು. ಆಗ ಭಗವಂತನು, 'ಅತ್ಯಂತ ಗೌರವಾನ್ವಿತ ಮಹಾತ್ಮನನ್ನು ಬಹಳವಾಗಿ ನಿಂದಿಸಿದಾಗ, ಅವನು ಮೃತಪ್ರಾಯನಾಗುತ್ತಾನೆ. ಪೂಜಾರ್ಹನಾದ ಹಿರಿಯನೊಂದಿಗೆ ಅಗೌರವದಿಂದ ಮಾತನಾಡುವುದು, ಅವನ ಪ್ರಾಣವನ್ನು ತೆಗೆಯದೆ ಅವನನ್ನು ಕೊಲ್ಲುವುದಕ್ಕೆ ಸಮಾನವೆಂದು ಅಥರ್ವವೇದವು ಬೋಧಿಸುತ್ತದೆ. ಈ ಶಾಸ್ತ್ರವಾಕ್ಯವನ್ನವಲಂಬಿಸಿ, ಯುಧಿಷ್ಠಿರನನ್ನು ಅವಹೇಳನೆ ಮಾಡುವುದರ ಮೂಲಕ ನಿನ್ನ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿಕೊ. ಅದರ ನಂತರ, ಅವನ ಪಾದಗಳ ಮೇಲೆ ಬಿದ್ದು ಅವನ ಕ್ಷಮೆಯನ್ನು ಯಾಚಿಸು. ಧರ್ಮನಿಷ್ಠನಾದ ಅವನು ತಿಳಿವಳಿಕೆಯಿಂದ ಕೂಡಿದವನಾಗಿ ನಿನ್ನನ್ನು ಕ್ಷಮಿಸುವನು', ಎಂದು ಹೇಳಿದನು.

ಕೃಷ್ಣನ ಆದೇಶದಂತೆ ಅರ್ಜುನನು ಯುಧಿಷ್ಠಿರನನ್ನು ಅಸಭ್ಯವಾಗಿ ನಿಂದಿಸಲು ಮುಂದಾದನು. 'ಕದನರಂಗದಿಂದ ದೂರವಿರುವ ಇಲ್ಲಿಗೆ ಕದ್ದುಬಂದ ನೀನು, ನಿನ್ನ ರಕ್ಷಣೆಗೆ ನಿನ್ನ ಹಿತೈಷಿಗಳ ಪರಾಕ್ರಮವನ್ನು ಸಂಪೂರ್ಣವಾಗಿ ಅವಲಂಬಿಸಿರುವೆ. ನೀನೆಲ್ಲಿ; ಆ ಪರಾಕ್ರಮಿ ಮತ್ತು ಶಕ್ತಿಶಾಲಿ ಭೀಮನೆಲ್ಲಿ; ಓಹ್, ಅಜಗಜಾಂತರ! ಅವನಿಗೆ ವಿಲಕ್ಷಣವಾದ ನಿನ್ನಲ್ಲಿ, ನನ್ನಲ್ಲಿನ ತಪ್ಪು ಕಂಡುಹಿಡಿಯಲು ಯಾವ ಅರ್ಹತೆಯೂ ಇಲ್ಲ. ನಿನಗೆ ಜೂಜಾಟದ ವ್ಯಸನ. ನಿನ್ನಿಂದಾಗಿ ರಾಜ್ಯವನ್ನು ಕಳೆದುಕೊಂಡ ನಾವು ತೀವ್ರ ಕಷ್ಟಗಳನ್ನು ಎದುರಿಸಬೇಕಾಯಿತು', ಎಂದು ಹೀಯಾಳಿಸಿದ ಅರ್ಜುನ.

ಅಣ್ಣನನ್ನು ನಿಂದಿಸಿ ಮುಗಿಸುತ್ತಿದ್ದಂತೆ ಅವನು ಪಶ್ಚಾತ್ತಾಪಕ್ಕೆ ಒಳಗಾದನು. ಮತ್ತೆ ತನ್ನ ಕತ್ತಿಯನ್ನು ಹೊರತೆಗೆದನು. ಆಶ್ಚರ್ಯದಿಂದಲೋ ಎಂಬಂತೆ ಕೃಷ್ಣನು, 'ಈಗೇನು ಸಮಸ್ಯೆ?' ಎಂದು ಕೇಳಿದನು. ನಿಜಕ್ಕೂ ತನಗೆ ಅತ್ಯಂತ ಪೂಜ್ಯನಾದ ತನ್ನ ಅಣ್ಣನ ವಿಷಯದಲ್ಲಿ ಅಸಭ್ಯವಾಗಿ ನಡೆದುಕೊಂಡ ತಾನು, ತನ್ನ ಪ್ರಾಣವನ್ನು ತ್ಯಜಿಸಲು ಮುಂದಾಗಿರುವುದಾಗಿ ಅರ್ಜುನನು ಹೇಳಿದನು.

ಭಗವಂತನು ಅವನನ್ನು ತಡೆಯುತ್ತಾ, 'ನೀನೊಂದು ವೇಳೆ ಯುಧಿಷ್ಠಿರನನ್ನು ವಧಿಸಿದ್ದೇ ಆದರೆ ಎಷ್ಟು ಭಯಂಕರವಾಗಿರುತ್ತಿತ್ತು ಎಂದಾಲೋಚಿಸು. ಆ ತಪ್ಪಾದ ಕೃತ್ಯವನ್ನು ತಪ್ಪಿಸಲೆಂದೇ ಅವನೊಂದಿಗೆ ಅಸಭ್ಯವಾಗಿ ಮಾತನಾಡಿರುವೆ. ಆದ ಕಾರಣ, ನೀನೇಕೆ ದುಃಖದಲ್ಲಿ ಮುಳುಗಿರುವೆ? ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿರುವೆ. ಆದರೆ ಪ್ರಾಜ್ಞರು ಎಂದಿಗೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ನೀನು ನಿನ್ನ ಪ್ರಾಣವನ್ನೇ ತೆಗೆದುಕೊಂಡರೆ, ಅದರಿಂದ ನಿನಗುಂಟಾಗುವ ಪಾಪ ನಿನ್ನ ಸಹೋದರನನ್ನು ಹತ್ಯೆ ಮಾಡಿದ್ದರೆ ತಗಲುತ್ತಿದ್ದ ಪಾಪಕ್ಕಿಂತ

ಹೆಚ್ಚು; ನರಕದಲ್ಲಿ ಅಗಾಧ ದುಃಖವನ್ನು ಅನುಭವಿಸುವೆ. ಆತ್ಮಪ್ರಶಂಸೆ ಆತ್ಮಹತ್ಯೆಗೆ ಸಮಾನ. ಆದ್ದರಿಂದ ನಿನ್ನನ್ನು ಹೊಗಳಿಕೊಂಡು ಆ ಮೂಲಕ ನೀನು ಬಯಸಿದ ಆತ್ಮಹತ್ಯೆಗೆ ಸಮಾನವೆಂದು ಹೇಳಲಾದ ಕೃತ್ಯವನ್ನು ಮಾಡು', ಎಂದನು.

ಆಗ ಅರ್ಜುನ ಜಂಬ ಕೊಚ್ಚಿಕೊಂಡ: 'ಪಿನಾಕವನ್ನು ಹಿಡಿದ ಶಿವನನ್ನು ಹೊರತುಪಡಿಸಿ, ಬಿಲ್ಲುಗಾರಿಕೆಯಲ್ಲಿ ನನ್ನ ಸಮಾನ ಯಾರೂ ಇಲ್ಲ. ಇಡೀ ಜಗತ್ತನ್ನು ಅದರ ನಿವಾಸಿಗಳೊಂದಿಗೆ ನಾನು ಒಬ್ಬಂಟಿಯಾಗಿ ಧ್ವಂಸ ಮಾಡಬಲ್ಲೆ. ಈ ಹಿಂದೆ ವಿವಿಧ ದಿಕ್ಕುಗಳಲ್ಲಿದ್ದ ರಾಜರನ್ನು ಸೋಲಿಸಿ ಅವರನ್ನು ನಿನಗಧೀನರನ್ನಾಗಿ ಮಾಡಿದವನು ನಾನೇ. ಓ ಯುಧಿಷ್ಠಿರ! ನಾನು ಈಗ ಕೌರವ ಪಡೆಗಳ ಅರ್ಧವನ್ನು ನಾಶಮಾಡಿದ್ದೇನೆ.' ತರುವಾಯ ತನ್ನ ಪ್ರತಿಜ್ಞೆಯನ್ನು ಮುರಿದು, ಯುಧಿಷ್ಠಿರನನ್ನು ಕೊಂದು, ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಹತ್ತುವ ಪಾಪಗಳಿಂದ ಭಗವಂತನಿಂದ ರಕ್ಷಿಸಲ್ಪಟ್ಟ ಅರ್ಜುನನು ತನ್ನ ಸಹೋದರನಿಗೆ ನಮಸ್ಕರಿಸಿ ಕ್ಷಮೆ ಬೇಡಿದನು.

ಯುಧಿಷ್ಠಿರನನ್ನು ಶಾಂತಗೊಳಿಸಿದ ಬಳಿಕ ಅರ್ಜುನನು ಯುದ್ಧಭೂಮಿಗೆ ಮರಳಲು ಸಿದ್ಧನಾದನು. 'ನನ್ನೀ ಜೀವನ ನಿನಗೆ ಪ್ರಿಯವಾದದ್ದನ್ನು ಮಾಡುವುದಕ್ಕಾಗಿ', ಎಂದು ಒತ್ತಿ ಹೇಳಿದನು. ಈ ಮಧ್ಯೆ, ಅರ್ಜುನನ ಕಟುವಾದ ನಿಂದೆಯನ್ನು ಈ ತನಕ ಮೌನವಾಗಿ ಆಲಿಸಿದ್ದ ಯುಧಿಷ್ಠಿರನು ಖೇದಗೊಂಡು, ತಾನು ನೀಚನೆಂದು ಭಾವಿಸಿದನು. ಅವನು, 'ನಿಮ್ಮೆಲ್ಲರಿಗೂ ಬಹಳ ತೊಂದರೆಗಳನ್ನುಂಟುಮಾಡಿದ ಕಡುಪಾಪಿ ನಾನು. ಮರಣದಂಡನೆಗೆ ನಾನರ್ಹ. ಭೀಮನು ರಾಜ್ಯವನ್ನಾಳಲು ಯೋಗ್ಯ; ಅವನೇ ರಾಜನಾಗಲಿ; ದುರ್ಬಲನಾದ ನಾನಲ್ಲ. ನಾನು ಕಾಡಿಗೆ ಹೊರಟುಹೋಗುತ್ತೇನೆ', ಎಂದ.

ಯುಧಿಷ್ಠಿರನು ಹೊರಡಲು ತನ್ನ ಹಾಸಿಗೆಯಿಂದ ಏಳುತ್ತಿದ್ದಂತೆ ಕೃಷ್ಣನು ಅವನ ಕಾಲುಗಳನ್ನು ಹಿಡಿದು, 'ಗಾಂಡೀವವನ್ನು ಇನ್ನೊಬ್ಬರಿಗೆ ಕೊಡುವಂತೆ ಯಾರು ಹೇಳಿದರೂ, ಅವರನ್ನು ಕೊಲ್ಲುವುದಾಗಿ ಶಪಥ ಮಾಡಿದ್ದ ಅರ್ಜುನನಿಗೆ ತನ್ನ ಪ್ರತಿಜ್ಞೆಯನ್ನು ಸುಳ್ಳಾಗಿಸಲು ಸಾಧ್ಯವಾಗಿರಲಿಲ್ಲ. ಆದ್ದರಿಂದ ನನ್ನ ಸಲಹೆಯ ಮೇರೆಗೆ ನಿನ್ನ ಕುರಿತು ಅವಹೇಳನದ ಮಾತನ್ನಾಡಿ, ಆ ಮೂಲಕ ತನ್ನ ಪ್ರತಿಜ್ಞೆಯನ್ನು ಕಾಪಾಡಿಕೊಂಡನು. ನಾವುಗಳು ನಿನ್ನನ್ನು ಆಶ್ರಯಿಸಿದ್ದೇವೆ. ನಿನ್ನನ್ನು ವಂದಿಸಿ, ನಮ್ಮ ಅಪರಾಧಗಳನ್ನು ದಯೆಯಿಂದ ಕ್ಷಮಿಸುವಂತೆ ನಾನು ನಿನ್ನಲ್ಲಿ ಕೋರುತ್ತೇನೆ. ನೀನು ಕರ್ಣನ ಮರಣವನ್ನು ಬಯಸಿರುವೆ. ಇಂದು ಅವನ ಹತ್ಯೆ ನಿಶ್ಚಿತ; ಭೂಮಿಯು ಅವನ ರಕ್ತವನ್ನು ಕುಡಿಯುವುದು', ಎಂದು ಆಶ್ವಾಸನೆಯಿತ್ತನು.

ಪೂರ್ತಿಯಾಗಿ ಸಮಾಧಾನಗೊಂಡ ಯುಧಿಷ್ಠಿರನು ಕೃಷ್ಣನನ್ನು ಮೇಲಕ್ಕೆತ್ತಿ ಅವನಿಗೆ, 'ಮರುಳುಹೋಗಿದ್ದ ಅರ್ಜುನ ಮತ್ತು ನಾನು ವಿಪತ್ತು ಮತ್ತು ದುಃಖಗಳ ಸಾಗರದಲ್ಲಿ ಮುಳುಗಿಹೋಗುತ್ತಿದ್ದೆವು. ನೀನು ನಮ್ಮನ್ನು ಕಾಪಾಡಿರುವೆ. ನಿನ್ನ ಬುದ್ಧಿವಂತಿಕೆಯ ದೋಣಿಯಿಂದಾಗಿ ನಾವು ಸುರಕ್ಷಿತವಾಗಿ ತೀರವನ್ನು ಮುಟ್ಟುವಂತೆ ಮಾಡಿರುವೆ', ಎಂದು ಹೇಳಿದ.

ಈ ಮುಂದಿನ ವೃತ್ತಾಂತವನ್ನು (ಸಂನ್ಯಾಸವನ್ನು ಸ್ವೀಕರಿಸಿದ ಬಳಿಕ ಶ್ರೀ ಜ್ಞಾನಾನಂದ-ತೀರ್ಥರಾದ) ವೆಂಕಟಪ್ಪಯಜ್ಞನಾರಾಯಣ ಅವರು ವಿವರಿಸಿದ್ದಾರೆ.

'ಗುರುಗಳ ಆಂಧ್ರಪ್ರದೇಶದ ಪ್ರವಾಸದಲ್ಲಿ ಅವರೊಂದಿಗೆ ಜೊತೆಯಾಗುವ ಸೌಭಾಗ್ಯ ನನಗೆ ದೊರೆತಿದ್ದರಿಂದ, ವೇದಗಳ ವಿಷಯದಲ್ಲಿ ಅವರ ಅಪಾರವಾದ ಶ್ರದ್ಧೆಯನ್ನೂ ವೈದಿಕರ ಮೇಲಿದ್ದ ಅವರ ಆದರವನ್ನೂ ಎತ್ತಿತೋರಿಸುವ ಅನೇಕ ಘಟನೆಗಳನ್ನು ನಾನು ಕಣ್ಣಾರೆ ನೋಡಲು ಸಾಧ್ಯವಾಯಿತು. ಅವರು ಆಂಧ್ರಪ್ರದೇಶದ ಯಾವುದೇ ಗ್ರಾಮ ಅಥವಾ ಪಟ್ಟಣಕ್ಕೆ ಭೇಟಿ ನೀಡಿದಾಗಲೆಲ್ಲ, "ಈ ಸ್ಥಳದಲ್ಲಿ ಅಗ್ನಿಹೋತ್ರಿಗಳು (ವೇದೋಕ್ತ ಅಗ್ನಿಯನ್ನು ಕಾಪಾಡಿಕೊಂಡು ಪ್ರತಿದಿನ ಸೂರ್ಯೋದಯ ಮತ್ತು ಸೂರ್ಯಾಸ್ತದ ವೇಳೆ ಅಗ್ನಿಹೋತ್ರ ಕರ್ಮವನ್ನು ಮಾಡುವವರು) ಯಾರಾದರೂ ಇದ್ದಾರೆಯೇ?"ಎಂದು ಕೇಳುತ್ತಿದ್ದರು. "ಹೌದು" ಎಂದುತ್ತರಿಸಿದರೆ, ಆ ವ್ಯಕ್ತಿಯ ಮನೆಗೆ ಭೇಟಿ ನೀಡುವ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದರು. ಅಂತಹ ಯಾವುದೇ ಮನೆಗೆ ಅವರು ಭೇಟಿ ನೀಡಿದಾಗ, ಅಲ್ಲಿ ಆ ಅಗ್ನಿಹೋತ್ರಿಗಿರುವ ಆಚರಣೆಯ ಶ್ರದ್ಧೆಯನ್ನು ಪ್ರಶಂಸಿಸಿ, ಆತನಿಗೂ ಆತನ ಕುಟುಂಬಕ್ಕೂ ವಿಶೇಷವಾದ ಆಶೀರ್ವಾದವನ್ನು ನೀಡುತ್ತಿದ್ದರು. ತಮ್ಮೊಂದಿಗೆ ಅಂತಹ ಸ್ಥಳಗಳಿಗೆ ಬಂದ ಜನರಿಗೆ ಅವರವರ ನಿತ್ಯಕರ್ಮವನ್ನು ಶ್ರದ್ಧೆಯಿಂದ ಆಚರಿಸುವಂತೆ ಅವರು ಸಲಹೆ ನೀಡುತ್ತಿದ್ದರು.

'ತೆನಾಲಿಯಲ್ಲಿ ಅವರ ಮೊಕ್ಕಾಮಿದ್ದಾಗ, ಶ್ರದ್ಧೆಯಿಂದ ಅಗ್ನಿಹೋತ್ರವನ್ನು ಆಚರಿಸುತ್ತಿದ್ದ ಓರ್ವ ಅಗ್ನಿಹೋತ್ರಿಯ ಬಗ್ಗೆ ಅವರಿಗೆ ತಿಳಿದುಬಂದಿತು. ಆತನ ಮನೆಗೆ ಅವರು ಭೇಟಿ ನೀಡಲು ನಿರ್ಧರಿಸಿದರು. ಗುರುಗಳು ತಮ್ಮ ಮನೆಗೆ ಬರಲಿದ್ದಾರೆ ಎಂಬುದನ್ನು ಆ ವ್ಯಕ್ತಿಗೆ ತಿಳಿಸಲಾಯಿತು. ಆತನು ಸಹಜವಾಗಿ ಬಹಳ ಸಂತೋಷಪಟ್ಟನು. ಗುರುಗಳು ಆತನ ಮನೆಗೆ ಬಂದಾಗ, ಆತನು ಅಗ್ನಿಹೋತ್ರ ಮಾಡುವ ಸ್ಥಳಕ್ಕೆ ತಮ್ಮನ್ನು ಕರೆದೊಯ್ಯುವಂತೆ ಹೇಳಿದರು. ಆತನು ವಾಸಿಸುತ್ತಿದ್ದ ಮನೆಯೂ ಅಗ್ನಿಹೋತ್ರವನ್ನು ಆಚರಿಸುತ್ತಿದ್ದ ಸ್ಥಳವೂ ಶಿಥಿಲಾವಸ್ಥೆಯಲ್ಲಿದ್ದವು. ಆತನ ಬಡತನದ ನಡುವೆಯೂ ತನ್ನ ಧರ್ಮವನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದುದನ್ನು ಮೆಚ್ಚಿದ ಗುರುಗಳು, ಮಠದ ವೆಚ್ಚದಲ್ಲಿ ಆತನಿಗಾಗಿ ಹೊಸ ಮನೆಯನ್ನು ನಿರ್ಮಿಸಿ, ಆ ಶ್ರದ್ಧಾವಂತ ಅಗ್ನಿಹೋತ್ರಿಗೆ ಉಚಿತವಾಗಿ ನೀಡುವಂತೆ ಮಠದ ಅಧಿಕಾರಿಗಳಿಗೆ ಆದೇಶವಿತ್ತರು. ಗುರುಗಳ ಈ ಕರುಣೆತುಂಬಿದ ನಡೆ ನಮ್ಮೆಲ್ಲರನ್ನೂ ಭಾವುಕರನ್ನಾಗಿಸಿತು. ಕೆಲವೇ ತಿಂಗಳುಗಳಲ್ಲಿ ಆ ಅಗ್ನಿಹೋತ್ರಿಯ ವಾಸಕ್ಕೆ ಯೋಗ್ಯವಾದ ಮನೆಯು ಸಿದ್ಧವಾಯಿತು.'

ಗುರುಗಳು ಅನೇಕ ಸ್ಥಳಗಳಲ್ಲಿ ವೇದಪಾಠಶಾಲೆಗಳನ್ನು ಸ್ಥಾಪಿಸಿದರು. ವೇದಗಳ ಬೋಧನೆ, ಅಧ್ಯಯನ ಮತ್ತು ಪ್ರಸಾರಕ್ಕೆ ಅನುವಾಗುವಂತೆ ಅವರು ವೇದ-ಪೋಷಕ-ಸಭೆಯನ್ನು ಆರಂಭಿಸಿದರು. ಅದರ ಮೂಲಕ ವೇದವಿದ್ವಾಂಸರಿಗೆ ಆರ್ಥಿಕ ನೆರವು ನೀಡುವುದರ ಜೊತೆಗೆ, ಅವರನ್ನು ಸನ್ಮಾನಿಸಿ, ನಗದು ಬಹುಮಾನಗಳನ್ನು ನೀಡಿ ಪ್ರೋತ್ಸಾಹಿಸಿದರು. ಅಂದಿನಿಂದ ಮೊದಲ್ಗೊಂಡು ವೇದ-ಪೋಷಕ-ಸಭೆಯು ಪ್ರತಿವರ್ಷವೂ ತಪ್ಪದೆ ಈ ಕಾರ್ಯವನ್ನು

ನಡೆಸಿಕೊಂಡು ಬರುತ್ತಿದೆ. ಅದು ವೇದಪರೀಕ್ಷೆಗಳನ್ನೂ ನಡೆಸುತ್ತದೆ; ದೇಶದಾದ್ಯಂತದ ಪಾಠಶಾಲೆಗಳ ವಿದ್ಯಾರ್ಥಿಗಳು ಈ ಅತ್ಯಂತ ಪ್ರತಿಷ್ಠಿತ ಪರೀಕ್ಷೆಗಳಲ್ಲಿ ಭಾಗವಹಿಸುತ್ತಿದ್ದಾರೆ. ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರಗಳನ್ನೂ ನಗದು ಬಹುಮಾನಗಳನ್ನೂ ನೀಡಲಾಗುತ್ತದೆ. ಇತರ ಸಂದರ್ಭಗಳಲ್ಲೂ ವೇದವಿದ್ವಾಂಸರನ್ನು ಸನ್ಮಾನಿಸಲಾಗುತ್ತದೆ.

ಗುರುಗಳ ಅಧ್ಯಕ್ಷತೆಯಲ್ಲಿ ಅನೇಕ ಶಾಸ್ತ್ರೀಯ ಅನುಷ್ಠಾನಗಳು ನಡೆದಿವೆ. ಅನೇಕ ಅತಿರುದ್ರ-ಮಹಾಯಾಗಗಳ ನಿರ್ವಹಣೆಯ ಅಧ್ಯಕ್ಷತೆಯನ್ನು ಗುರುಗಳು ವಹಿಸಿದ್ದರು. (ಅತಿರುದ್ರ-ಮಗಾಯಾಗದಲ್ಲಿ ವೇದದ ಶ್ರೀರುದ್ರ-ಪ್ರಶ್ನವನ್ನು ಒಟ್ಟಾಗಿ 14641 ಬಾರಿ ಪಠಿಸಿ, ಪವಿತ್ರ ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸಲಾಗುವುದು. ಹಾಗೆಯೇ, ಸಹಸ್ರಚಂಡೀ ಮಹಾಯಾಗಗಳ ಅಧ್ಯಕ್ಷತೆಯನ್ನೂ ವಹಿಸುತ್ತಿದ್ದರು. ಇವುಗಳಲ್ಲಿ ದೇವೀಮಾಹಾತ್ಮ್ಯವನ್ನು ಸಾವಿರ ಬಾರಿ ಪಠಿಸಿ, ಪವಿತ್ರ ಅಗ್ನಿಯಲ್ಲಿ ಆಹುತಿಗಳನ್ನು ಅರ್ಪಿಸಲಾಗುತ್ತಿತ್ತು. ಲಲಿತಾಸಹಸ್ರನಾಮದಲ್ಲಿರುವ ಅಮ್ಮನವರ ನಾಮಗಳಿಂದ ಶ್ರೀಚಕ್ರಗಳಿಗೆ ಅರ್ಚನೆ ಮಾಡುವ ಕೋಟಿ ಕುಂಕುಮಾರ್ಚನೆಗಳ ಅಧ್ಯಕ್ಷತೆಯನ್ನೂ ವಹಿಸುತ್ತಿದ್ದರು. ಋಗ್ವೇದ-ಸಂಹಿತೆಯ ಮಂತ್ರಗಳನ್ನು ಪಠಿಸಿ ಪವಿತ್ರ ಅಗ್ನಿಯಲ್ಲಿ ಆಹುತಿಗಳನ್ನು ನೀಡುವ ಋಗ್ವೇದ-ಸಂಹಿತಾ ಹೋಮದ ಜೊತೆಗೆ, ಯಜುರ್ವೇದ-ಸಂಹಿತಾ ಹೋಮ ಮತ್ತು ಸಾಮವೇದ-ಸಂಹಿತಾ ಹೋಮಗಳ ಅಧ್ಯಕ್ಷತೆಯನ್ನೂ ವಹಿಸುತ್ತಿದ್ದರು. ಇವೆಲ್ಲವೂ ಲೋಕಕಲ್ಯಾಣಕ್ಕಾಗಿ ನಡೆಸಲ್ಪಟ್ಟವು.

ಧರ್ಮಮಾರ್ಗವನ್ನು ಅನುಸರಿಸುವಂತೆ ಜನರಿಗೆ ಬೋಧನೆ, ಪ್ರೇರೇಪಣೆ, ಪ್ರೋತ್ಸಾಹವನ್ನು ನೀಡಿದ್ದು ಮಾತ್ರವಲ್ಲದೆ, ತಾವೇ ಸ್ವತಃ ಸಮರ್ಪಣಾಭಾವದಿಂದ ಆಚರಿಸಿ ಮಾರ್ಗದರ್ಶನ ಮಾಡಿದರು. ಉದಾಹರಣೆಗೆ, ಸದಾ ಸತ್ಯವಂತರಾಗಿದ್ದರು; ಯಾರಿಗಾದರೂ ಎಳ್ಳಷ್ಟೂ ದುಃಖವನ್ನು ಉಂಟುಮಾಡುವ ವಿಚಾರವನ್ನು ಕನಸಿನಲ್ಲೂ ಯೋಚಿಸುತ್ತಿರಲಿಲ್ಲ; ಇತರರನ್ನು ಉದ್ಧರಿಸಲು ಎಷ್ಟೇ ಅಪಾರವಾದ ಶ್ರಮವನ್ನು ಸಹಿಸಬೇಕಾದರೂ ಅದನ್ನು ಲೆಕ್ಕಿಸುತ್ತಿರಲಿಲ್ಲ. ಸಂನ್ಯಾಸಿಗೆ ವಿಹಿತವಾದ ನಿಯಮಗಳಿಗೆ ಅನುಗುಣವಾಗಿ, ದಿನಕ್ಕೆ ಮೂರು ಬಾರಿ ತಪ್ಪದೆ ಸ್ನಾನವನ್ನು ಮಾಡಿ ಆಹ್ನಿಕವನ್ನು ಆಚರಿಸುತ್ತಿದ್ದರು. ಪರಮಭಕ್ತಿಯಿಂದ ದೇವರನ್ನು ಪೂಜಿಸುತ್ತಿದ್ದರು; ಪೂಜಿಸಲ್ಪಡುವ ವಿಗ್ರಹಗಳಲ್ಲಿ ದೇವತಾಸಾನ್ನಿಧ್ಯವನ್ನು ಅನುಭವಿಸುತ್ತಿದ್ದರು. ಅನೇಕ ಬಾರಿ ಶೃಂಗೇರಿಯ ಶ್ರೀ ಶಾರದಾಂಬೆಯ ಸಮ್ಮುಖ ಗರ್ಭಗುಡಿಯ ಬಳಿ ಅವರು ನಿಂತಾಗ, ಅವರ ತುಟಿಗಳು ಚಲಿಸುತ್ತಿರುವುದು ಕಂಡುಬರುತ್ತಿತ್ತು; ಅವರು ದೇವಿಯೊಂದಿಗೆ ಸಂಭಾಷಿಸುತ್ತಿದ್ದುದು ಸ್ಪಷ್ಟವಾಗಿ ತೋರಿಬರುತ್ತಿತ್ತು. ಪ್ರತಿವರ್ಷ ನರಸಿಂಹ ಜಯಂತಿಯಂದು ಲಕ್ಷ್ಮೀನರಸಿಂಹನ ಪೂಜೆಯ ಸಂದರ್ಭದಲ್ಲಿ ಭಾಗವತ-ಪುರಾಣದಲ್ಲಿನ ನರಸಿಂಹಾವತಾರದ ಘಟ್ಟದ ಪಾರಾಯಣವನ್ನು ಮಾಡುವಾಗ, ಅವರು ತಪ್ಪದೆ ಭಾವಪರವಶರಾಗುತ್ತಿದ್ದರು. ಗುರುಗಳು ನೆರವೇರಿಸುವ ಪೂಜೆಯು ವೀಕ್ಷಕರ ಕಣ್ಣುಗಳಿಗೆ ಸದಾ ರಸದೌತಣದಂತಿತ್ತು. ಅವರ ಅರ್ಚನೆಯ ವಿಧಾನ ಅದೆಷ್ಟು ಮನೋಹರವಾಗಿತ್ತೆಂದರೆ, ಪೂಜಾಮಂಟಪದೊಳಗೆ ಮೇಲಿನ ಮೆಟ್ಟಿಲಿನಲ್ಲಿ ಇರಿಸಲಾದ ಚಂದ್ರಮೌಳೀಶ್ವರ ಲಿಂಗಕ್ಕೆ ತಮ್ಮ ಆಸನದಿಂದ ಮೆಲ್ಲಗೆ

ಎಸೆಯುತ್ತಿದ್ದ ಹೂವುಗಳು ಅನೇಕ ಬಾರಿ ಸುಂದರವಾದ ವಿನ್ಯಾಸದಲ್ಲಿ ರೂಪಗೊಳ್ಳುತ್ತಿದ್ದವು. ಒಮ್ಮೆ ಚೆನ್ನೈಯಲ್ಲಿ ಒಂದು ರಾತ್ರಿ ಅವರು ಹೇರಳವಾಗಿ ಕೆಂಗೆಂಪು ಗುಲಾಬಿಗಳಿಂದ ಅರ್ಚನೆ ಮಾಡಿದಾಗ, ಅರ್ಪಿಸಿದ ಹೂವುಗಳು ಲಿಂಗದ ಸುತ್ತಲೂ ಅಚ್ಚುಕಟ್ಟಾದ, ದಟ್ಟವಾದ ಹಾರದಂತೆ ರೂಪುಗೊಂಡವು. ಇದನ್ನು ಕಂಡ ಭಕ್ತಸಮೂಹವು ಸಾಮಾನ್ಯವಾದ ಶಿಷ್ಟಾಚಾರವನ್ನು ಮರೆತು ಸ್ವಯಂಸ್ಫೂರ್ತಿಯಾಗಿ ಚಪ್ಪಾಳೆ ತಟ್ಟತೊಡಗಿತು.

ಗುರುಗಳು ಹೀಗೆ ಅಪ್ಪಣೆ ಕೊಡಿಸಿದ್ದಾರೆ: 'ಶ್ರೀರಾಮನನ್ನು ಆದರ್ಶಪುರುಷನನ್ನಾಗಿ ನೋಡಿ ಅವನ ಜೀವನವನ್ನು ಮನಸ್ಸಿಗೆ ತಂದುಕೊಂಡಾಗ, ಅತ್ಯಂತ ಬಲಿಷ್ಠರನ್ನೂ ವಿಚಲಿತರನ್ನಾಗಿ ಮಾಡುವ ಬಿರುಗಾಳಿಗಳ ನಡುವೆಯೂ, ಅವನು ತಪ್ಪದೆ ಪಾಲಿಸಿದ ಧರ್ಮಮಾರ್ಗವನ್ನು ನಿಷ್ಠೆಯಿಂದ ಅನುಸರಿಸುವಂತೆ ನಿಮ್ಮ ಹೃದಯವು ಹುರಿದುಂಬಿಸುತ್ತದೆ. ತನಗೆ ಒದಗಿದ ವನವಾಸ, ವಿರಹ ಮತ್ತು ಸಮರ — ಪ್ರತಿಯೊಂದು ಪರೀಕ್ಷೆಯನ್ನೂ ಅಚಲ ಸ್ಥೈರ್ಯದಿಂದ ಎದುರಿಸಿದನು. ಒಮ್ಮೆಯೂ ಹೆಜ್ಜೆ ತಪ್ಪಲಿಲ್ಲ; ಒಮ್ಮೆಯೂ ಧರ್ಮದಿಂದ ವಿಚಲಿತನಾಗಲಿಲ್ಲ. ಅವನ ಅದ್ಭುತ ಜೀವನದ ಕುರಿತು ಚಿಂತಿಸುವುದರಿಂದ, ನಿಮ್ಮ ನಿಮ್ಮ ಸಮಸ್ಯೆಗಳನ್ನು ಘನತೆ, ಶಕ್ತಿ ಮತ್ತು ಪ್ರಶಾಂತತೆಯಿಂದ ಎದುರಿಸುವ ಧೈರ್ಯ ನಿಮಗೆ ದೊರೆಯುತ್ತದೆ; ಮತ್ತು ಸಮರ್ಪಣಾಭಾವದಿಂದ ಧರ್ಮಮಾರ್ಗದಲ್ಲಿ ನಡೆಯಲು ಸಾಧ್ಯವಾಗುತ್ತದೆ.'

ಗುರುಗಳು ಮುಂದುವರಿಸಿ ಹೀಗೆಂದ್ದಾರೆ: 'ಎಲ್ಲರ ಮನದಲ್ಲೂ ನೆಲೆಸಿರುವ ಹಾಗೂ ಎಲ್ಲರ ವಿಷಯದಲ್ಲೂ ಕರುಣಾಮಯಿಯಾದ ಶ್ರೀರಾಮನನ್ನು ಭಗವಂತನಾಗಿ ನೋಡಿದರೆ, ನಿಮ್ಮ ಹೃದಯವು ಭಕ್ತಿಯಿಂದ ತುಂಬುತ್ತದೆ. ನಿಮ್ಮ ಕರ್ಮಗಳನ್ನು ಅವನಿಗರ್ಪಿಸಿ, ಅವನಲ್ಲಿ ಗಾಢ ಭಕ್ತಿಯನ್ನು ಮೈಗೂಡಿಸಿಕೊಳ್ಳಿ, ಅವನನ್ನು ಧ್ಯಾನಿಸಿ, ಅವನಿಗೆ ಶರಣರಾಗಿ; ಅವನು ನಿಮ್ಮನ್ನು ಸಾಕ್ಷಾತ್ಕಾರ ಮತ್ತು ಮೋಕ್ಷದ ಕಡೆಗೆ ಕರೆದೊಯ್ಯುತ್ತಾನೆ. ಅವನನ್ನು ಆದರ್ಶ ಪುರುಷನನ್ನಾಗಿ ಮತ್ತು ಪರಮಾತ್ಮನನ್ನಾಗಿ ನೋಡುವ ಈ ಎರಡೂ ದೃಷ್ಟಿಗಳು ಉಪಯುಕ್ತವಾಗಿವೆ. ಎರಡನ್ನೂ ಸರಿಯಾಗಿ ಅಳವಡಿಸಿಕೊಂಡು ಅವುಗಳಿಂದ ಶ್ರೇಯಸ್ಸನ್ನು ಹೊಂದಿ. ಕೃಷ್ಣಪರಮಾತ್ಮನು ಅವತರಿಸಿದಾಗ ದೇವಕೀ ಹಾಗೂ ವಸುದೇವನಿಗೆ, "ನನ್ನನ್ನು ನಿಮ್ಮ ಮಗ ಹಾಗೂ ಪರಬ್ರಹ್ಮ ಎಂಬುದಾಗಿ ಭಾವಿಸಿ", ಎಂದು ಹೇಳಲಿಲ್ಲವೇ?'

ಪರಮಪೂಜ್ಯ ಗುರುಗಳನ್ನು ಸಂಪೂರ್ಣ ಸ್ಫೂರ್ತಿದಾಯಕ ಆದರ್ಶಪುರುಷರಾಗಿ ಶ್ರೇಷ್ಠ ಜೀವನ್ಮುಕ್ತ-ಗುರುಗಳೆಂದೂ, ಹಾಗೆಯೇ ಪರಬ್ರಹ್ಮ ಮತ್ತು ಈಶ್ವರನೆಂದೂ ಈ ಸ್ತೋತ್ರದಲ್ಲಿ ನಿರೂಪಿಸಲಾಗಿದೆ. ಈ ದ್ವಿವಿಧ ದೃಷ್ಟಿಯು ಸೂಕ್ತವಷ್ಟೇ ಅಲ್ಲ; ಅಪಾರವಾದ ಅನುಗ್ರಹವೂ ಹೌದು. ಏಕೆಂದರೆ, ಇದರ ಮೂಲಕ ಸಾಧಕನು ಉದ್ಧಾರವಾಗುವುದು ಎರಡೂ ರೀತಿಗಳಲ್ಲಿ: ಇಹದಲ್ಲಿ ಉದಾತ್ತ ಜೀವನ ನಡೆಸಲು ಪ್ರೇರಿತನಾಗುತ್ತಾನೆ; ಭಕ್ತಿ ಹಾಗೂ ಸಮ್ಯಗ್ದರ್ಶನದ ಮೂಲಕ ಲೋಕದ ಮಿತಿಗಳನ್ನು ಮೀರಿ ಪರಮತತ್ತ್ವದತ್ತ ಸೆಳೆಯಲ್ಪಡುತ್ತಾನೆ.

ಗುರುಧ್ಯಾನಮ್

ಗುರುಧ್ಯಾನಮ್

ಅಜ್ಞಾನಧ್ವಾನ್ತವಿಧ್ವಂಸಿ-ಸಹಸ್ರಕರತೇಜಸಮ್ ।
ಸಚ್ಚಿತ್ಸುಖಾತ್ಮಕಬ್ರಹ್ಮ-ನಿವಿಷ್ಟಹೃದಯಾಮ್ಬುಜಮ್ ॥ 1 ॥

ಪದ್ಮಾಸನೋಪವಿಷ್ಟಞ್ಚ ಧ್ಯಾನಸ್ತಿಮಿತಲೋಚನಮ್ ।
ಸಮಂ ಕಾಯಶಿರೋಗ್ರೀವಂ ಧಾರಯನ್ತಂ ಮಹಾಪ್ರಭಮ್ ॥ 2 ॥

ಸಹಸ್ರಕಿರಣಸ್ಪರ್ಧಿ-ದೇಹಕಾನ್ತಿಸಮುಜ್ಜ್ವಲಮ್ ।
ನಿರ್ವಿಕಲ್ಪಸಮಾಧಿಸ್ಥಂ ನಿಶ್ಚಲಾವಯವಂ ಶಿವಮ್ ॥ 3 ॥

ದೇಹಾದಿಬ್ರಹ್ಮಪರ್ಯನ್ತೇ ಭೋಗ್ಯೇ ತುಚ್ಛತ್ವಧೀಯುತಮ್ ।
ಅರ್ತಾನಾಮಾರ್ತಿಹನ್ತಾರಂ ಜಿಜ್ಞಾಸುವಿಶಯಚ್ಛಿದಮ್ ॥ 4 ॥

ಸ್ವಾವಲೋಕನಮಾತ್ರೇಣ ಪುನಾನಂ ನಿಖಿಲಂ ಜಗತ್ ।
ಮದೀಯಹೃತ್ಸರೋಜಾತನಿವೇಶಿತಪದದ್ವಯಮ್ ॥ 5 ॥

ವಿದ್ಯಾತೀರ್ಥಗುರೂತ್ತಂಸಂ ಧ್ಯಾಯಾಮಿ ಭವಮುಕ್ತಯೇ



ಗುರುಧ್ಯಾನಮ್

ವಿದ್ಯಾತೀರ್ಥಗುರೂತ್ತಂಸಂ ಧ್ಯಾಯಾಮಿ ಭವಮುಕ್ತಯೇ

(ಈ ಕೃತಿಯ ಕೊನೆಯ ಪ್ರತ್ಯೇಕ ಸಾಲನ್ನು ಇಲ್ಲಿ ಮೊದಲಿಗೆ ಕೊಡಲಾಗಿದೆ.)

[ಸಂಸಾರದಿಂದ ಮುಕ್ತನಾಗಲು, ಗುರುಗಳ ಶಿರೋಮಣಿಗಳಾದ (ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ) ವಿದ್ಯಾತೀರ್ಥರನ್ನು ನಾನು ಧ್ಯಾನಿಸುತ್ತೇನೆ:]

ಇಲ್ಲಿ ಗುರುಗಳನ್ನು '*ಗುರೂತ್ತಂಸ* — ಗುರುಗಳ ಶಿರೋಮಣಿ' ಎಂದು ಹೇಳಲಾಗಿದೆ. ಅವರು ಶ್ರೇಷ್ಠತಮ ಗುರುಗಳೆಂಬುದನ್ನು ಸಮರ್ಥಿಸುವ ಸಂಗತಿಗಳು ಮೊದಲ ಶ್ಲೋಕದ ಉತ್ತರಾರ್ಧ-ದಲ್ಲೂ, ಮೂರನೆಯ ಹಾಗೂ ನಾಲ್ಕನೆಯ ಶ್ಲೋಕಗಳಲ್ಲಿ ಮತ್ತು ಐದನೆಯ ಶ್ಲೋಕದ ಪೂರ್ವಾರ್ಧದಲ್ಲಿ ಕಂಡುಬರುತ್ತವೆ. ಮೊದಲ ಶ್ಲೋಕದ ಪೂರ್ವಾರ್ಧದಲ್ಲಿ ಅವರನ್ನು ಪರಬ್ರಹ್ಮ ಎಂದು ಸ್ತುತಿಸಲಾಗಿದೆ; ಎರಡನೆಯ ಶ್ಲೋಕದ ಕೊನೆಯಲ್ಲಿರುವ 'ಮಹಾಪ್ರಭಮ್' ಪದವು ಅವರನ್ನು ಬೆಳಕುಗಳಿಗೆಲ್ಲ ಬೆಳಕಾದ ಚೈತನ್ಯಸ್ವರೂಪವೆಂದು ಹೇಳುತ್ತಾ, ಅವರನ್ನು ಪರಬ್ರಹ್ಮದೊಂದಿಗೆ ಗುರುತಿಸುವುದನ್ನು ಬಲಪಡಿಸುತ್ತದೆ. ಮೂರನೆಯ ಶ್ಲೋಕದ ಕೊನೆಯ ಪದವಾದ '*ಶಿವಮ್*' ಎಂಬುದರ ಮೂಲಕ ಅವರನ್ನು ಈಶ್ವರನೆಂದು ವರ್ಣಿಸಲಾಗಿದೆ; ಗುರುಗಳು ಮಂಗಳಕರರು ಎಂಬುದನ್ನಷ್ಟೇ ಅಲ್ಲದೆ, ಅವರೇ ಶಿವನು — ಅದೂ ನಿರಾಕಾರ ಈಶ್ವರಸ್ವರೂಪಿ ಶಿವನು — ಎಂಬುದನ್ನು ಸೂಚಿಸಲು ಆ ಪದವನ್ನು ಬಳಸಲಾಗಿದೆ. ಅವರೇ ಪರಬ್ರಹ್ಮವೂ ಈಶ್ವರನೂ ಆಗಿರುವುದು ಇದಕ್ಕೆ ಒಂದು ಕಾರಣ. ಆದ್ದರಿಂದಲೇ ಅವರ ಮೇಲಿನ ಧ್ಯಾನವು ಜ್ಞಾನಕ್ಕೂ, ಆ ಮೂಲಕ ಸಂಸಾರದಿಂದ ಮುಕ್ತಿಗೂ, ಸಮಗ್ರವಾದ ಸಾಧನವಾಗಿದೆ. ಅವರ ಮೇಲಿನ ಧ್ಯಾನವು ಜ್ಞಾನದ ಮೂಲಕ ಮುಕ್ತಿಯಲ್ಲಿ ಪರ್ಯವಸಾನಗೊಳ್ಳದಿದ್ದರೆ, ಸ್ತೋತ್ರದ ಈ ಸಾಲಿನಲ್ಲಿ ವರ್ಣಿಸಿರುವಂತೆ ಅವರ ಮೇಲಿನ ಧ್ಯಾನದ ಗುರಿಯು ಮುಕ್ತಿಯೇ ಎಂಬ ಯುಕ್ತಿಯು ದುರ್ಬಲ ತಳಪಾಯದ ಮೇಲೆ ನಿಂತಂತಾಗುತ್ತಿತ್ತು.

ಭಾಗವತ-ಪುರಾಣದ ಉದ್ಧವ-ಗೀತೆಯಲ್ಲಿ ಜ್ಞಾನವನ್ನು ಪಡೆಯಲು ಭಕ್ತನು ಹಂತಹಂತವಾಗಿ ಧ್ಯಾನದಲ್ಲಿ ಹೇಗೆ ಪ್ರಗತಿಯನ್ನು ಹೊಂದಬೇಕು ಎಂಬುದನ್ನು ಶ್ರೀಕೃಷ್ಣನು ಉದ್ಧವನಿಗೆ ಅಚ್ಚುಕಟ್ಟಾಗಿ ವಿವರಿಸುತ್ತಾನೆ. ಮೊದಲು ತನ್ನ ಸುಂದರವಾದ ರೂಪವನ್ನು ಏಕಾಗ್ರವಾಗಿ ಧ್ಯಾನಿಸಬೇಕು. ಬಳಿಕ ಆ ರೂಪದ ಏಕೈಕ ಅಂಗದ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು. ಮುಂದೆ ಆ ಅಂಗವನ್ನೂ ಬಿಟ್ಟು, ಎಲ್ಲದಕ್ಕೂ ಪರಮಕಾರಣನಾದ ಈಶ್ವರನೆಂದು ಅವನನ್ನು ಧ್ಯಾನಿಸಬೇಕು. ಕೊನೆಗೆ ಅದನ್ನೂ ಮೀರಿ, ಪರಬ್ರಹ್ಮವಾದ ಪರಮೇಶ್ವರನೂ ತಾನೂ ಅಭಿನ್ನವೆಂದು ಕಂಡು, ಬೇರೆ ಯಾವುದನ್ನೂ ಚಿಂತಿಸದಿರಬೇಕು. ಭಾಗವತ-ಪುರಾಣದ ನಾಲ್ಕು ಶ್ಲೋಕಗಳಲ್ಲಿನ ಭಗವಂತನ ಮಾತುಗಳಿವು:

'ಇನ್ದ್ರಿಯಾಣೀನ್ದ್ರಿಯಾರ್ಥೇಭ್ಯೋ ಮನಸಾಕೃಷ್ಯ ತನ್ಮನಃ । ಬುದ್ಧ್ಯಾ ಸಾರಥಿನಾ ಧೀರಃ ಪ್ರಣಯೇನ್ಮಯಿ ಸರ್ವತಃ — ಮನಸ್ಸಿನ ಮೂಲಕ ಇಂದ್ರಿಯಗಳನ್ನು ಎಲ್ಲ ವಿಷಯಗಳಿಂದ ಹಿಂತೆಗೆದುಕೊಂಡು, ವಿವೇಚಿಸುವ ಬುದ್ಧಿಯ ನೆರವಿನಿಂದ, ಸ್ಥಿರಚಿತ್ತನಾದ ಭಕ್ತನು ತನ್ನ ಮನಸ್ಸನ್ನು ನನ್ನ ಪೂರ್ಣ ರೂಪದಲ್ಲಿ ದೃಢವಾಗಿ ನೆಲೆಗೊಳಿಸಬೇಕು.[1]

'ತತ್ಸರ್ವವ್ಯಾಪಕಂ ಚಿತ್ತಂ ಅಕೃಷ್ಯೈಕತ್ರ ಧಾರಯೇತ್ । ನಾನ್ಯಾನಿ ಚಿನ್ತಯೇದ್ಭೂಯಃ ಸುಸ್ಮಿತಂ ಭಾವಯೇನ್ಮುಖಮ್ — ಬಳಿಕ ನನ್ನ ಪೂರ್ಣ ರೂಪದಿಂದ ತನ್ನ ಮನಸ್ಸನ್ನು ಹಿಂತೆಗೆದು-ಕೊಂಡು, ನನ್ನ ದೇಹದ ಒಂದು ಅಂಗದ ಮೇಲೆ ಅದನ್ನು ಸ್ಥಿರಗೊಳಿಸಬೇಕು; ನನ್ನ ಮಂದಹಾಸದ ಮುಖವನ್ನೇ ಭಾವಿಸುತ್ತಾ ಬೇರೆ ಯಾವುದನ್ನೂ ಚಿಂತಿಸಬಾರದು.[2]

'ತತ್ರ ಲಬ್ಧಪದಂ ಚಿತ್ತಮಾಕೃಷ್ಯ ವ್ಯೋಮ್ನಿ ಧಾರಯೇತ್ । ತಚ್ಚ ತ್ಯಕ್ತ್ವಾ ಮದಾರೋಹೋ ನ ಕಿಞ್ಚಿದಪಿ ಚಿನ್ತಯೇತ್ — ಅಲ್ಲಿ ಸ್ಥಿರತೆಯನ್ನು ಪಡೆದ ಚಿತ್ತವನ್ನು ನನ್ನ ರೂಪದ ಆ ಅಂಗದಿಂದಲೂ ಹಿಂತೆಗೆದುಕೊಂಡು, ಎಲ್ಲದಕ್ಕೂ ಪರಮಕಾರಣನಾದ (ಎಲ್ಲ ರೂಪವನ್ನೂ ಮೀರಿದ ಈಶ್ವರನಾದ) ನನ್ನ ಮೇಲೆ ಅದನ್ನು ಕೇಂದ್ರೀಕರಿಸಬೇಕು. ಬಳಿಕ ಈಶ್ವರನಾದ ನನ್ನ ಮೇಲಿನ ಸಮಾಧಿಯನ್ನೂ ಮೀರಿ, ಪರಬ್ರಹ್ಮವಾದ ನನ್ನೊಡನೆ ತನ್ನನ್ನೇ ಅಭೇದದಿಂದ ಕಂಡು, ಬೇರೆ ಯಾವುದನ್ನೂ ಚಿಂತಿಸಬಾರದು.[3]

'ಏವಂ ಸಮಾಹಿತಮತಿರ್ಮಾಮೇವಾತ್ಮಾನಮಾತ್ಮನಿ । ವಿಚಷ್ಟೇ ಮಯಿ ಸರ್ವಾತ್ಮ-ನ್ಜ್ಯೋತಿರ್ಜ್ಯೋತಿಷಿ ಸಂಯುತಮ್ — ಹೀಗೆ ಸಮಾಧಿಯಲ್ಲಿ ಸಂಪೂರ್ಣವಾಗಿ ಲೀನವಾದ ಮನಸ್ಸುಳ್ಳವನು ಆತ್ಮನಾದ ನನ್ನನ್ನು ತನ್ನಲ್ಲೂ, ತನ್ನನ್ನು ಸರ್ವಾತ್ಮನಾದ ನನ್ನಲ್ಲೂ ಬೆಳಕು ಬೆಳಕಿನಲ್ಲಿ ಲೀನವಾದಂತೆ ಕಾಣುತ್ತಾನೆ.'[4]

ಗುರುಗಳು ತೀವ್ರ ಸಾಧನೆಯನ್ನು ಮಾಡಿ, ಆ ಮೂಲಕ 1935ರ ಡಿಸೆಂಬರ್ 12ರಂದು (ಆಗ ಅವರಿಗೆ 18 ವರ್ಷ ತುಂಬಿತ್ತಷ್ಟೆ) ಜ್ಞಾನವನ್ನೂ ಜೀವನ್ಮುಕ್ತಿಯನ್ನೂ ಪಡೆಯುವ ದಿವ್ಯ-ಲೀಲೆಯನ್ನು ತೋರಿದರು. ಇದಾದ ಮೂರೂವರೆ ವರ್ಷಗಳ ಬಳಿಕ, 1939ರಲ್ಲಿ ಶೃಂಗೇರಿಯಲ್ಲಿ ಚಾತುರ್ಮಾಸ್ಯವನ್ನು ಆಚರಿಸುತ್ತಿದ್ದಾಗ, ಒಂದು ಬೆಳಗ್ಗೆ ಸಹಜವಾಗಿ ಮೂಡಿದ ಪ್ರೇರಣೆಗೆ ಸ್ಪಂದಿಸಿ ಅವರು ಉದ್ಧವಗೀತೆಯಲ್ಲಿ ವರ್ಣಿಸಿರುವಂತೆ ಮೊದಲು ಕೃಷ್ಣನ ಪೂರ್ಣ ರೂಪವನ್ನು, ಬಳಿಕ ಅವನ ಮಂದಹಾಸದ ಮುಖವನ್ನು, ತರುವಾಯ ಅವನನ್ನು ರೂಪರಹಿತ ಈಶ್ವರನಾಗಿ ಹಾಗೂ ಕೊನೆಗೆ ಅವನನ್ನು ಪರಬ್ರಹ್ಮವಾಗಿ ಧ್ಯಾನಿಸಿದರು. ಕೃಷ್ಣನು ಉದ್ಧವನಿಗೆ ವಿವರಿಸಿದ

[1] ಭಾಗವತ-ಪುರಾಣ 11.14.42

[2] ಭಾಗವತ-ಪುರಾಣ 11.14.43

[3] ಭಾಗವತ-ಪುರಾಣ 11.14.44

[4] ಭಾಗವತ-ಪುರಾಣ 11.14.45. ಈ ಶ್ಲೋಕ ಮತ್ತು ಇದರ ಹಿಂದಿನ ಮೂರು ಶ್ಲೋಕಗಳ ಅನುವಾದವು ಶ್ರೀಧರ ಸ್ವಾಮಿಗಳ ಪ್ರಮಾಣಭೂತವಾದ ಶ್ರೀಮದ್ಭಾಗವತ-ಭಾವಾರ್ಥದೀಪಿಕಾ ವ್ಯಾಖ್ಯಾನವನ್ನು ಅವಲಂಬಿಸಿದೆ.

ಹಂತಗಳನ್ನು ಅವರು ಯಥಾವತ್ತಾಗಿ ಪೂರ್ವಯೋಜನೆಯಿಲ್ಲದೆಯೇ ಕಾರ್ಯಗತ-ಗೊಳಿಸಿದರು. ಕೆಲವು ದಿನಗಳ ಬಳಿಕ ತಮ್ಮ ಇಷ್ಟದೇವತೆಯಾದ ಶ್ರೀ ನರಸಿಂಹಸ್ವಾಮಿಯನ್ನೂ ಅವರು ಅದೇ ರೀತಿಯಲ್ಲಿ ಧ್ಯಾನಿಸಿದರು. ಆದರೆ ಎರಡನೆಯ ಹಂತದಲ್ಲಿ ಅವರು ನರಸಿಂಹನ ಮುಖಕಮಲದ ಬದಲು ಅವನ ಕಮಲದಂತಹ ಪಾದದ್ವಯದ ಮೇಲೆ ಸಂಪೂರ್ಣವಾಗಿ ಗಮನವನ್ನು ಕೇಂದ್ರೀಕರಿಸಿದರು. ವರ್ಷಗಳ ಬಳಿಕ ಇದನ್ನೆಲ್ಲ ನೆನಪಿಸಿಕೊಳ್ಳುತ್ತಾ ಗುರುಗಳು ನನಗೆ ಹೇಳಿದರು: 'ಎರಡನೆಯ ಹಂತದಲ್ಲಿ ಭಗವಂತನ ಮಂದಹಾಸದ ಮುಖವನ್ನು ಧ್ಯಾನಿಸಿದರೂ, ಅಥವಾ ಅವನ ಪಾದಗಳನ್ನು ಧ್ಯಾನಿಸಿದರೂ ವ್ಯತ್ಯಾಸವಿಲ್ಲ. ಫಲಿತಾಂಶ ಒಂದೇ.' ನಗುತ್ತಾ ಅವರು ಮುಂದುವರಿಸಿ ಇಲ್ಲೊಂದು ವಿಪರ್ಯಾಸವನ್ನು ಸೂಚಿಸುತ್ತಾ, 'ಭಗವಂತನ ಸುಂದರವಾದ ಪೂರ್ಣ ರೂಪದ ಮೇಲೆ ಅಚಲವಾಗಿ ಗಮನವನ್ನು ನಿಲ್ಲಿಸಲಾಗದವನಿಗೆ, ರೂಪದ ಒಂದು ಅಂಗದ ಮೇಲೆ ಗಮನವನ್ನು ನಿಲ್ಲಿಸುವುದೇ ಒಳ್ಳೆಯ ಆಯ್ಕೆಯೆಂದು, ಮೇಲಾಗಿ ಆ ಅಂಗವು ಎಷ್ಟು ಚಿಕ್ಕದೂ ಸರಳವೂ ಆಗಿದ್ದರೆ ಅಷ್ಟು ಒಳ್ಳೆಯದೆಂದು ಅನಿಸಬಹುದು! ಆದರೆ ಕೃಷ್ಣನು ವಿವರಿಸಿದ ಹಂತಗಳಲ್ಲಿ ಪೂರ್ಣ ರೂಪದ ಮೇಲಿನ ಧ್ಯಾನವನ್ನು ಕರಗತ ಮಾಡಿಕೊಂಡ ಮೇಲೆಯೇ, ಮತ್ತು ರೂಪದಿಂದ ನಿರಾಕಾರದ ಕಡೆಗೆ ಸಾಗುವ ಸಾಧನವಾಗಿಯೇ, ರೂಪದ ಒಂದು ಅಂಗದ ಕಡೆಗೆ ಗಮನವನ್ನು ಬದಲಾಯಿಸಲಾಗುತ್ತದೆ.'

ಇಲ್ಲಿ ಈ *ಗುರುಧ್ಯಾನಮ್* ಸ್ತೋತ್ರದಲ್ಲಿ ಗುರುಗಳ ಪೂರ್ಣ ರೂಪವನ್ನು ವರ್ಣಿಸಲಾಗಿದೆ. ಉದಾಹರಣೆಗೆ, ಅವರು ಪದ್ಮಾಸನದಲ್ಲಿ ಕುಳಿತಿದ್ದಾರೆ ಎಂಬುದಾಗಿ ಹೇಳಿರುವುದನ್ನು ಕಾಣಬಹುದು. ಕೊನೆಯ ಶ್ಲೋಕದಲ್ಲಿ ಅವರ ರೂಪದ ಒಂದು ಅಂಗವನ್ನು — ಕಮಲದಂತಹ ಅವರ ಪಾದದ್ವಯವನ್ನು — ವಿಶೇಷವಾಗಿ ಪ್ರಸ್ತಾಪಿಸಲಾಗಿದೆ. '*ಶಿವಮ್*' ಎಂಬ ಪದದ ಮೂಲಕ ಅವರನ್ನು ಈಶ್ವರನೆಂದು ಹೇಳಲಾಗಿದೆ. ಮೊದಲ ಶ್ಲೋಕದ ಪೂರ್ವಾರ್ಧದಿಂದಲೂ ಹಾಗೂ '*ಮಹಾಪ್ರಭಮ್*' ಎಂಬ ಪದದಿಂದಲೂ ಅವರನ್ನು ಪರಬ್ರಹ್ಮದೊಡನೆ ಅಭೇದದಿಂದ ಹೇಳಲಾಗಿದೆ. ಭಗವಂತನು ಉದ್ಧವನಿಗೆ ಉಪದೇಶಿಸಿದ ಧ್ಯಾನಕ್ಕೆ ಅನುಗುಣವಾಗಿ ಇಲ್ಲಿನ ನಾಲ್ಕು ಹಂತಗಳು ಹೀಗಿವೆ. ಮೊದಲು, ಗುರುಗಳ ಪೂರ್ಣ ರೂಪವನ್ನು ಧ್ಯಾನಿಸಬೇಕು. ಬಳಿಕ, ಅವರ ರೂಪದ ಒಂದೇ ಅಂಗವನ್ನು — ಅಂದರೆ, ಕಮಲದಂತಹ ಅವರ ಪಾದದ್ವಯವನ್ನು — ಧ್ಯಾನಿಸಬೇಕು. ಆಮೇಲೆ, ನಿರಾಕಾರ ಈಶ್ವರರೆಂದು ಗುರುಗಳನ್ನು ಧ್ಯಾನಿಸಬೇಕು. ಕೊನೆಗೆ ಪರಬ್ರಹ್ಮವೆಂದು ಅವರನ್ನು ಧ್ಯಾನಿಸಿ, ಬ್ರಹ್ಮದೊಂದಿಗೆ ತನ್ನನ್ನೇ ಅಭಿನ್ನವಾಗಿ ಕಂಡು, ಬೇರೆ ಯಾವುದನ್ನೂ ಚಿಂತಿಸಬಾರದು. ಪ್ರತಿ ಹಂತವನ್ನು ಕರಗತ ಮಾಡಿಕೊಂಡ ಬಳಿಕವೇ ಮುಂದಿನ ಹಂತವನ್ನು ಕೈಗೊಳ್ಳಬೇಕು. ಗುರುವಿನಿಂದಲೂ ಶಾಸ್ತ್ರದಿಂದಲೂ ತಿಳಿದುಕೊಂಡ ಈಶ್ವರನ ಮತ್ತು ಅದ್ವಿತೀಯ ಪರಬ್ರಹ್ಮದ ಸ್ಪಷ್ಟವಾದ ಅರಿವಿನೊಡನೆ ಹೀಗೆ ಸಾಗಿದವನಿಗೆ ಅದ್ವಿತೀಯ ಪರಬ್ರಹ್ಮದ ಸಾಕ್ಷಾತ್ಕಾರ-ರೂಪವಾದ ಜ್ಞಾನವೂ, ಆ ಮೂಲಕ ಮುಕ್ತಿಯೂ ಸಿದ್ಧಿಸುತ್ತದೆ.

ಅಜ್ಞಾನಧ್ವಾನ್ತವಿಧ್ವಂಸಿ-ಸಹಸ್ರಕರತೇಜಸಮ್ ।
ಸಚ್ಚಿತ್ಸುಖಾತ್ಮಕಬ್ರಹ್ಮ-ನಿವಿಷ್ಟಹೃದಯಾಮ್ಬುಜಮ್ ॥ 1 ॥

[ಅಜ್ಞಾನದ ಕತ್ತಲೆಯನ್ನು ಕಳೆಯುವ ಸೂರ್ಯಪ್ರಕಾಶವು ಯಾರದೋ; ಸತ್-ಚಿತ್-ಆನಂದಸ್ವರೂಪವಾದ ಪರಬ್ರಹ್ಮದಲ್ಲಿ ಯಾರ ಹೃದಯಕಮಲವು ನೆಲೆಗೊಂಡಿದೆಯೋ;]

ಅಜ್ಞಾನದ ಕತ್ತಲೆಯನ್ನು ಕಳೆಯುವ ಸೂರ್ಯಪ್ರಕಾಶವು ಅವರದೇ ಎಂಬುದನ್ನು ತಿಳಿಸುವ ಈ ಶ್ಲೋಕದ ಪೂರ್ವಾರ್ಧವು ಗುರುಗಳನ್ನು ಪರಬ್ರಹ್ಮವೆಂದು ನಿರೂಪಿಸುತ್ತದೆ; ಏಕೆಂದರೆ, ಜ್ಞಾನೋದಯವಾಗುವಾಗ ಮನಸ್ಸಿನಲ್ಲಿ ಪ್ರಕಟವಾಗುವ ಬ್ರಹ್ಮಚೈತನ್ಯವೇ ಆ ಅಜ್ಞಾನವನ್ನು ಕಳೆಯುವುದು.

ಪರಾಶರ-ಉಪಪುರಾಣದಲ್ಲಿ ಹೀಗೆ ಹೇಳಲಾಗಿದೆ: 'ಅತಃ ಸರ್ವಾಙ್ಗನಿಷ್ಠಸ್ಯ ಪ್ರತ್ಯಙ್-ಬ್ರಹ್ಮೈಕ್ಯಗೋಚರಾ ॥ ಯಾ ವೃತ್ತಿರ್ಮಾನಸೀ ಶುದ್ಧಾ ಜಾಯತೇ ವೇದವಾಕ್ಯತಃ । ತಸ್ಯಾಂ ಯಾ ಚಿದಭಿವ್ಯಕ್ತಿಃ ಸ್ವತಃಸಿದ್ಧಾ ಚ ಶಾಙ್ಕರೀ ॥ ತದೇವ ಬ್ರಹ್ಮವಿಜ್ಞಾನಂ ತದೇವಾಜ್ಞಾನನಾಶನಮ್ — ಆದ್ದರಿಂದ, ಅಗತ್ಯವಾದ ಎಲ್ಲ ಸಾಧನಗಳಲ್ಲೂ ನಿಷ್ಠೆಯಿಂದಿರುವ ಸಾಧಕನ ಮನಸ್ಸಿನಲ್ಲಿ, ವೇದದ ಮಹಾವಾಕ್ಯದಿಂದ (ಉದಾಹರಣೆಗೆ 'ತತ್ತ್ವಮಸಿ — ಅದು ನೀನೇ ಆಗಿರುವೆ' ಎಂಬುದರಿಂದ) ಜೀವ-ಬ್ರಹ್ಮ ಅಭೇದವನ್ನು ಗ್ರಹಿಸಿಕೊಂಡ ಒಂದು ಶುದ್ಧ ಮನೋವೃತ್ತಿಯು ಹುಟ್ಟುತ್ತದೆ. ಆ ವೃತ್ತಿಯಲ್ಲಿ ಸ್ವತಃಸಿದ್ಧವೂ ಶ್ರೇಯಸ್ಕರವೂ ಆದ ಶುದ್ಧಚೈತನ್ಯದ ಅಭಿವ್ಯಕ್ತಿ ಉಂಟಾಗುತ್ತದೆ. ಅದುವೇ ಬ್ರಹ್ಮಸಾಕ್ಷಾತ್ಕಾರ; ಅದೇ ಅಜ್ಞಾನವನ್ನು ನಾಶಮಾಡುವುದು.'[1] ಈ ಶ್ಲೋಕಗಳನ್ನು ವಿವರಣ-ಪ್ರಮೇಯ-ಸಂಗ್ರಹದಲ್ಲಿ ಪ್ರಮಾಣವಾಗಿ ಉದ್ಧರಿಸಲಾಗಿದೆ.

ಇವುಗಳಿಂದ ಸ್ಪಷ್ಟವಾಗುವುದೇನೆಂದರೆ, ತಕ್ಕ ಯೋಗ್ಯತೆಯುಳ್ಳ ಸಾಧಕನಲ್ಲಿ, ಜೀವನಿಗೂ ಅದ್ವಯ ಬ್ರಹ್ಮಕ್ಕೂ ಇರುವ ಅಭೇದವನ್ನು ತಿಳಿಸುವ ಮಹಾವಾಕ್ಯವು, ಅದ್ವಿತೀಯ ಬ್ರಹ್ಮವನ್ನೇ ವಿಷಯವಾಗಿ ಉಳ್ಳ ಅಖಂಡಾಕಾರ-ವೃತ್ತಿಯೆಂಬ ಚರಮ (ಅಂತಿಮ) ಮನೋವೃತ್ತಿಯನ್ನು ಉಂಟುಮಾಡುತ್ತದೆ. ಬ್ರಹ್ಮಚೈತನ್ಯವು ಆ ವೃತ್ತಿಯಲ್ಲಿ ಪ್ರಕಾಶಿಸುತ್ತದೆ ಮತ್ತು ಅಜ್ಞಾನವನ್ನು ನಿವಾರಿಸುತ್ತದೆ. ಆದ್ದರಿಂದ, ಯಾರ 'ಸೂರ್ಯಪ್ರಕಾಶ'ವು ಅಜ್ಞಾನದ ಕತ್ತಲೆಯನ್ನು ನಾಶಮಾಡುತ್ತದೆಯೋ ಆ ವಸ್ತುವೇ ಪರಬ್ರಹ್ಮ. ಅಜ್ಞಾನದ ಕತ್ತಲೆಯನ್ನು ನೀಗುವ ಸೂರ್ಯಪ್ರಕಾಶವು ಯಾರದೋ ಅವರೇ ಗುರುಗಳು ಎಂದು ಈ ಮೊದಲನೆಯ ಶ್ಲೋಕವು ಹೇಳುವುದರಿಂದ, ಗುರುಗಳಿಗೂ ಪರಬ್ರಹ್ಮಕ್ಕೂ ಯಾವ ಭೇದವೂ ಇಲ್ಲ ಎಂದು ಸ್ಪಷ್ಟವಾಗಿ ಹೇಳಿದಂತಾಗುತ್ತದೆ.

ಪರಮಾರ್ಥಸತ್, ಶುದ್ಧಚೈತನ್ಯ ಮತ್ತು ಅನಂತಾನಂದ ಸ್ವರೂಪವಾದ ಪರಬ್ರಹ್ಮದಲ್ಲಿ ಗುರುಗಳ ಮನಸ್ಸು ಸ್ಥಿರವಾಗಿ ನೆಲೆಸಿದೆ ಎಂಬುದನ್ನು ಈ ಶ್ಲೋಕದ ಉತ್ತರಾರ್ಧವು ವ್ಯಕ್ತಪಡಿಸುತ್ತದೆ.

[1] ಪರಾಶರ-ಉಪಪುರಾಣ 14.33-35. ವಿವರಣ-ಪ್ರಮೇಯ-ಸಙ್ಗ್ರಹ, ವರ್ಣಕ 1ರಲ್ಲಿ ಉದ್ಧರಿಸಲಾಗಿದೆ.

'ನೆಲೆಗೊಳಿಸಲ್ಪಟ್ಟ' ಎಂಬ ಅರ್ಥದ ಪ್ರೇರಣಾರ್ಥಕ ಪ್ರಯೋಗವಾದ 'ನಿವೇಶಿತ' ಎಂಬ ರೂಪವನ್ನು ಬಳಸದೆ, 'ನೆಲೆಗೊಂಡ' ಎಂಬ ಅರ್ಥದ 'ನಿವಿಷ್ಟ' ಎಂಬ ಪದವನ್ನು ಬಳಸಿರುವುದು ಅರ್ಥಪೂರ್ಣವಾಗಿದೆ. ಪರಬ್ರಹ್ಮದ ಕಡೆಗೆ ಮನಸ್ಸನ್ನು ತಿರುಗಿಸಲು ಮತ್ತು ಅಲ್ಲಿಯೇ ಅದನ್ನು ಲಯಗೊಳಿಸಲು ಯಾವ ಪ್ರಯತ್ನವೂ ಅಗತ್ಯವಿಲ್ಲದೆ ಸ್ವಾಭಾವಿಕವಾಗಿಯೇ ಅವರ ಮನಸ್ಸು ಅದರಲ್ಲಿ ನೆಲೆಸಿದೆ ಎಂಬುದನ್ನು, ಇಲ್ಲಿ 'ನಿವಿಷ್ಟ' ಪದದ ಬಳಕೆಯು ಸೂಚಿಸುತ್ತದೆ. ಇಂತಹ ಅನಾಯಾಸ, ಅಚಲ ನೆಲೆಸುವಿಕೆಯು ಕೇವಲ ಮಹಾಜೀವನ್ಮುಕ್ತರ ಮನಸ್ಸಿನ ಲಕ್ಷಣವಾಗಿದೆ. ಆದ್ದರಿಂದ, ಶ್ಲೋಕದ ಈ ಭಾಗವು ಗುರುಗಳು ನಿಶ್ಚಯವಾಗಿಯೂ ಮಹಾಜೀವನ್ಮುಕ್ತರೆಂಬುದನ್ನು ಮನದಟ್ಟು ಮಾಡುತ್ತದೆ. ಮಾತ್ರವಲ್ಲ, ಈ ಸ್ತೋತ್ರವು ಗುರುಗಳನ್ನು ನಿರ್ವಿಕಲ್ಪ-ಸಮಾಧಿಯಲ್ಲಿ ಕುಳಿತವರೆಂದು ಹೇಳುವುದರಿಂದ, ಅವರ ಮನಸ್ಸು ಪರಬ್ರಹ್ಮದಲ್ಲಿ ಸಂಪೂರ್ಣವಾಗಿ ಕೇಂದ್ರೀಕೃತವಾಗಿದೆ ಎಂಬ ನುಡಿಯು ಸಂಪೂರ್ಣವಾಗಿ ಹೊಂದಿಕೊಳ್ಳುತ್ತದೆ. ಅವರ ನಿರ್ವಿಕಲ್ಪ-ಸಮಾಧಿಯ ವರ್ಣನೆಯಾಗಿಯೂ ಕೂಡ ಯುಕ್ತವೇ ಆಗಿದೆ.

ಪದ್ಮಾಸನೋಪವಿಷ್ಟಞ್ಚ ಧ್ಯಾನಸ್ತಿಮಿತಲೋಚನಮ್ ।
ಸಮಂ ಕಾಯಶಿರೋಗ್ರೀವಂ ಧಾರಯನ್ತಂ ಮಹಾಪ್ರಭಮ್ ॥ 2 ॥

[ಯಾರು ಪದ್ಮಾಸನದಲ್ಲಿ ಆಸೀನರಾಗಿದ್ದಾರೋ; ಧ್ಯಾನದಲ್ಲಿ ಯಾರ ಕಣ್ಣುಗಳು ನಿಶ್ಚಲವಾಗಿ ಇವೆಯೋ; ಯಾರು ತಮ್ಮ ದೇಹದ ಮಧ್ಯಭಾಗ, ಕುತ್ತಿಗೆ ಮತ್ತು ತಲೆಗಳನ್ನು ನೇರವಾಗಿ ಹಿಡಿದಿದ್ದಾರೋ; ಯಾರು (ಚೈತನ್ಯವಾಗಿ, ಜ್ಯೋತಿಗಳಿಗೂ ಜ್ಯೋತಿಯಾಗಿ) ಮಹಾ-ತೇಜಸ್ವಿಗಳೋ;]

ಗುರುಗಳು ಪದ್ಮಾಸನದಲ್ಲಿ ಕುಳಿತಿದ್ದಾರೆ ಎಂಬ ವರ್ಣನೆಯಿಂದ ಈ ಎರಡನೆಯ ಶ್ಲೋಕವು ಆರಂಭವಾಗುತ್ತದೆ. ಇದರ ಮೂರನೆಯ ಪಾದವು ಭಗವದ್ಗೀತೆಯ 6.13 ಶ್ಲೋಕದ ಮೊದಲ ಪಾದಕ್ಕೆ ತದ್ರೂಪವಾಗಿದೆ; ಅದು ನಾಲ್ಕನೆಯ ಪಾದದ 'ಧಾರಯನ್ತಮ್' ಎಂಬ ಪದದೊಡನೆ ಕೂಡಿ, ಅವರು ತಮ್ಮ ದೇಹದ ಮಧ್ಯಭಾಗ, ಕುತ್ತಿಗೆ ಮತ್ತು ತಲೆಗಳನ್ನು ನೇರವಾಗಿ ಇರಿಸಿದ್ದಾರೆ ಎಂಬುದನ್ನು ಬಣ್ಣಿಸುತ್ತದೆ.

ಧ್ಯಾನದ ವಿಷಯವಾಗಿ ಭಗವಂತ ಶ್ರೀಕೃಷ್ಣನು ಹೀಗೆನ್ನುತ್ತಾನೆ: 'ಸಮ್ಪ್ರೇಕ್ಷ್ಯ ನಾಸಿಕಾಗ್ರಂ ಸ್ವಂ ದಿಶಶ್ಚಾನವಲೋಕಯನ್ — ತನ್ನ ಮೂಗಿನ ತುದಿಯನ್ನು ನೋಡುತ್ತಾ, ಅತ್ತಿತ್ತ ನೋಡದೆ'. ಮೂಗಿನ ತುದಿಯನ್ನು ನೋಡುವುದೇ ಗುರಿಯಲ್ಲ; ಆತ್ಮನಲ್ಲಿ ಮನಸ್ಸನ್ನು ನೆಲೆಗೊಳಿಸುವುದೇ ಉದ್ದೇಶ ಎಂದು ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಸ್ಪಷ್ಟಪಡಿಸುತ್ತಾರೆ. ಧ್ಯಾನದ ಸಮಯದಲ್ಲಿ ವ್ಯಕ್ತಿಯು ನಿಜಕ್ಕೂ ಮೂಗಿನ ತುದಿಯನ್ನೇ ನೋಡುತ್ತಿದ್ದರೆ, ಆ ತುದಿಯೇ ಅವನ ಮನಸ್ಸಿನ ಕೇಂದ್ರವಾಗಿಬಿಡುತ್ತದೆ. ಹಾಗಾಗಕೂಡದು. ಆದ್ದರಿಂದ, 'ಮೂಗಿನ ತುದಿಯನ್ನು ನೋಡುತ್ತಿರುವನೋ ಎಂಬಂತೆ' ಎಂಬುದೇ ತಾತ್ಪರ್ಯ. ಮಧುಸೂದನ ಸರಸ್ವತಿಗಳು ತಮ್ಮ

ಗೂಢಾರ್ಥ-ದೀಪಿಕಾ ಟೀಕೆಯಲ್ಲಿ ಸೂಚಿಸಿರುವಂತೆ, ಧ್ಯಾನದ ಸಮಯದಲ್ಲಿ ಕಣ್ಣುಗಳನ್ನು ಪೂರ್ತಿಯಾಗಿ ಮುಚ್ಚಿರಬಾರದು; ಹಾಗೆ ಮುಚ್ಚಿದರೆ ಜಡತ್ವ ಉಂಟಾಗಬಹುದು. ಅವುಗಳನ್ನು ಹೊರಗಿನ ವಿಷಯಗಳ ಕಡೆಗೂ ತಿರುಗಿಸಬಾರದು; ಹಾಗೆ ಮಾಡಿದರೆ ಮನಸ್ಸು ವಿಚಲಿತವಾಗುತ್ತದೆ. ಈ ಎಲ್ಲ ಅಂಶಗಳನ್ನೂ 'ಧ್ಯಾನದಲ್ಲಿ ಯಾರ ಕಣ್ಣುಗಳು ನಿಶ್ಚಲವಾಗಿ ಇವೆಯೋ' ಎಂಬರ್ಥವುಳ್ಳ 'ಧ್ಯಾನಸ್ತಿಮಿತಲೋಚನಮ್' ಎಂಬ ಪದದಿಂದ ಅರಿಯಬಹುದು.

ಈ ಶ್ಲೋಕದ ಕೊನೆಯ ಪದವಾದ 'ಮಹಾಪ್ರಭಮ್' ಎಂಬುದರ ಅರ್ಥ 'ಮಹಾತೇಜಸ್ಸನ್ನು ಉಳ್ಳವರು' ಎಂದು. ಗುರುಗಳೇ ಚೈತನ್ಯಸ್ವರೂಪವಾದ ಪರಬ್ರಹ್ಮ ಎಂಬುದನ್ನು ಅದು ಸೂಚಿಸುತ್ತದೆ; ಇಲ್ಲಿ ಹೇಳಿರುವ ತೇಜಸ್ಸು ಚೈತನ್ಯದ ತೇಜಸ್ಸು, ಜ್ಯೋತಿಗಳಿಗೂ ಜ್ಯೋತಿ. ಶ್ರುತಿಯು ಹೀಗೆ ಹೇಳುತ್ತದೆ: 'ತಸ್ಯ ಭಾಸಾ ಸರ್ವಮಿದಂ ವಿಭಾತಿ — ಆತನ ತೇಜಸ್ಸಿನಿಂದಲೇ ಇದೆಲ್ಲವೂ ವಿವಿಧ ರೀತಿಯಲ್ಲಿ ಪ್ರಕಾಶಿಸುತ್ತದೆ.'[1] ಇಲ್ಲಿ ಇಂದ್ರಿಯಗೋಚರವಾದ ದೈಹಿಕ ತೇಜಸ್ಸೇ ಸೂಚಿತವಾಗಿದ್ದರೆ, ಈ 'ಮಹಾಪ್ರಭಮ್' ಪದ ಮತ್ತು ಅವರ ದೈಹಿಕ ತೇಜಸ್ಸನ್ನು ಸೂಚಿಸುವ ಮುಂದಿನ ಶ್ಲೋಕದ ಪೂರ್ವಾರ್ಧ — ಇವೆರಡರಲ್ಲಿ ಒಂದಂತೂ ಅನಾವಶ್ಯಕವಾಗುತ್ತಿತ್ತು.

ಸಹಸ್ರಕಿರಣಸ್ಪರ್ಧಿ-ದೇಹಕಾನ್ತಿಸಮುಜ್ಜ್ವಲಮ್।
ನಿರ್ವಿಕಲ್ಪಸಮಾಧಿಸ್ಥಂ ನಿಶ್ಚಲಾವಯವಂ ಶಿವಮ್॥ 3॥

[ಯಾರು ಸೂರ್ಯನ ತೇಜಸ್ಸಿಗೆ ಸರಿಸಾಟಿಯಾದ ದೇಹಕಾಂತಿಯಿಂದ ಬೆಳಗುತ್ತಾರೋ; ಯಾರು ನಿರ್ವಿಕಲ್ಪ-ಸಮಾಧಿಯಲ್ಲಿ ನೆಲೆಸಿದ್ದಾರೋ; ಯಾರ ಅಂಗಗಳು ನಿಶ್ಚಲವಾಗಿವೆಯೋ; ಯಾರು ಶಿವಸ್ವರೂಪರೋ;]

ಸೂರ್ಯನ ತೇಜಸ್ಸಿಗೆ ಸರಿಸಾಟಿಯಾದ ದೇಹಕಾಂತಿ ಅವರಿಗಿದೆ ಎಂದು ಈ ಶ್ಲೋಕದ ಪೂರ್ವಾರ್ಧವು ಹೇಳುತ್ತದೆ. ಇಲ್ಲಿನ ಈ ವರ್ಣನೆಯ ಉದ್ದೇಶ ಅವರ ಮಹಿಮೆಯನ್ನು ಒತ್ತಿ ಹೇಳುವುದೇ ಆಗಿದೆ.

ವೈಶ್ವಾನರನನ್ನು ಉಪಾಸಿಸುವವನ ಬಗ್ಗೆ ವೈಶ್ವಾನರ-ವಿದ್ಯೆಯಲ್ಲಿ ಛಾಂದೋಗ್ಯ-ಉಪನಿಷತ್ತು ಹೇಳುತ್ತದೆ: 'ತೃಪ್ಯತಿ ಪ್ರಜಯಾ ಪಶುಭಿರನ್ನಾದ್ಯೇನ ತೇಜಸಾ ಬ್ರಹ್ಮವರ್ಚಸೇನ — ಅವನು ಸಂತಾನ, ಪಶು, ಆಹಾರ, ತೇಜಸ್ಸು ಮತ್ತು ಬ್ರಹ್ಮವರ್ಚಸ್ಸು (ಆಧ್ಯಾತ್ಮಿಕ ಸಾಧನೆಯಿಂದ ಬರುವ ಕಾಂತಿ) ಇವುಗಳಿಂದ ತೃಪ್ತನಾಗುತ್ತಾನೆ.'[2] ಇಲ್ಲಿ 'ತೇಜಸ್' ಎಂಬ ಪದವನ್ನು ಭಗವತ್ಪಾದರು ತಮ್ಮ ಭಾಷ್ಯದಲ್ಲಿ ಹೀಗೆ ವಿವರಿಸುತ್ತಾರೆ: 'ತೇಜಃ ಶರೀರಸ್ಥಾ ದೀಪ್ತೇಃ

[1] ಮುಂಡಕ-ಉಪನಿಷತ್ 2.2.10

[2] ಛಾಂದೋಗ್ಯ-ಉಪನಿಷತ್ 5.19.2

ಉಜ್ಜ್ವಲನತ್ವಮ್ — ತೇಜಸ್ಸೆಂದರೆ ದೇಹದ ಕಾಂತಿ, ಪ್ರಕಾಶಮಾನವಾಗಿರುವ ಸ್ಥಿತಿ.'[1] ಇನ್ನೊಂದು ಬಗೆಯ ತೇಜಸ್ಸಾದ 'ಬ್ರಹ್ಮವರ್ಚಸ್' ಎಂಬುದನ್ನು ಭಗವತ್ಪಾದರು ಹೀಗೆ ಸ್ಪಷ್ಟಪಡಿಸುತ್ತಾರೆ: 'ಬ್ರಹ್ಮವರ್ಚಸೇನ ಶಮ-ದಮ-ಜ್ಞಾನಾದಿ-ನಿಮಿತ್ತೇನ ತೇಜಸಾ — 'ಬ್ರಹ್ಮವರ್ಚಸ್ಸಿನಿಂದ' ಎಂದರೆ, ಮನೋನಿಗ್ರಹ, ಇಂದ್ರಿಯನಿಗ್ರಹ, ಜ್ಞಾನ ಇತ್ಯಾದಿಗಳಿಂದ ಉಂಟಾಗುವ ತೇಜಸ್ಸಿನಿಂದ.'[2]

ವ್ಯಕ್ತಿಗಳಲ್ಲಿನ ದೇಹಕಾಂತಿಯನ್ನು ಶ್ರುತಿ, ಇತಿಹಾಸ ಮತ್ತು ಪುರಾಣಗಳು ಉಲ್ಲೇಖಿಸುತ್ತವೆ. ಬಹುಕಾಲದ ಬಳಿಕ ತಮ್ಮ ಶಿಷ್ಯನಾದ ಸತ್ಯಕಾಮ ಜಾಬಾಲನನ್ನು ಕಂಡಾಗ ಹಾರಿದ್ರುಮತ ಗೌತಮರು ಅವನನ್ನು ಹೀಗೆ ಕೇಳಿದರೆಂದು ಛಾಂದೋಗ್ಯ-ಉಪನಿಷತ್ತು ಹೇಳುತ್ತದೆ: 'ಬ್ರಹ್ಮವಿದಿವ ವೈ ಸೋಮ್ಯ ಭಾಸಿ ಕೋ ನು ತ್ವಾಮನುಶಶಾಸ — ಪ್ರಿಯನೇ, ನೀನು ನಿಶ್ಚಯವಾಗಿಯೂ ಬ್ರಹ್ಮಜ್ಞಾನಿಯಂತೆ ಬೆಳಗುತ್ತಿದ್ದೀಯೆ. ನಿನಗೆ ಉಪದೇಶಿಸಿದವರು ಯಾರು?'[3] ಮೈತ್ರಾಯಣೀ-ಉಪನಿಷತ್ತಿನಲ್ಲಿ ಹೀಗೆ ಹೇಳಲಾಗಿದೆ: 'ಅಥಾಪಹತಪಾಪ್ಮಾನಸ್ತಿಗ್ಮತೇಜಸ ಊರ್ಧ್ವರೇತಸೋ ವಾಲಿಖಿಲ್ಯಾ ಇತಿ ಶ್ರೂಯನ್ತೇ — ವಾಲಿಖಿಲ್ಯರು ಪಾಪರಹಿತರೂ, ಪರಿಪೂರ್ಣ ಬ್ರಹ್ಮಚಾರಿಗಳೂ, ಮಹಾತೇಜಸ್ವಿಗಳೂ ಆಗಿದ್ದರೆಂದು ನಾವು ಕೇಳುತ್ತೇವೆ.'[4] ಜನಕ ಮಹಾರಾಜನನ್ನು ಭೇಟಿಯಾಗಿ ಪರಿಪೂರ್ಣ ಜ್ಞಾನವನ್ನು ಪಡೆದ ಬಳಿಕ ವ್ಯಾಸರ ಆಶ್ರಮವನ್ನು ಸಮೀಪಿಸುತ್ತಿದ್ದ ಶುಕಮಹರ್ಷಿಗಳನ್ನು ಮಹಾಭಾರತದಲ್ಲಿ ಹೀಗೆ ವರ್ಣಿಸಲಾಗಿದೆ — 'ಅರಣೇಯೋ ವಿಶುದ್ಧಾತ್ಮಾ ನಭಸೀವ ದಿವಾಕರಃ — ಅತ್ಯಂತ ಶುದ್ಧಮನಸ್ಕರಾದ ಶುಕರು ಆಕಾಶದಲ್ಲಿನ ಸೂರ್ಯನಂತೆ ಬೆಳಗಿದರು.'[5]

ಈ ಶ್ಲೋಕದ ಮೂರನೆಯ ಪಾದದಲ್ಲಿ, ಧ್ಯಾನದ ವಿಷಯರಾಗಿರುವ ಗುರುಗಳನ್ನು ನಿರ್ವಿಕಲ್ಪ-ಸಮಾಧಿಯಲ್ಲಿ ಲೀನರಾದವರೆಂದೂ, ನಾಲ್ಕನೆಯ ಪಾದದಲ್ಲಿ ಅವರ ಅಂಗಗಳು ನಿಶ್ಚಲವಾಗಿವೆಯೆಂದೂ ಹೇಳಲಾಗಿದೆ. ಈ ಹಿಂದೆ ಅವರು ತಮ್ಮ ದೇಹದ ಮಧ್ಯಭಾಗ, ಕುತ್ತಿಗೆ ಮತ್ತು ತಲೆಗಳನ್ನು ನೇರವಾಗಿ ಇರಿಸಿಕೊಂಡಿದ್ದಾರೆಂದು ಹೇಳಲಾಗಿತ್ತು; ಈಗ ಅವರು ನಿಶ್ಚಲರೆಂದೂ ಸಹ ಹೇಳಲಾಗಿದೆ. ಧ್ಯಾನಕ್ಕೆ ಕುಳಿತವನು ತನ್ನ ದೇಹದ ಮಧ್ಯಭಾಗ, ಕುತ್ತಿಗೆ ಮತ್ತು ತಲೆಗಳನ್ನು ಒಂದೇ ಸರಳ ರೇಖೆಯಲ್ಲಿ ಇಟ್ಟುಕೊಂಡು (ಸಮಂ ಕಾಯಶಿರೋಗ್ರೀವಮ್) ನಿಶ್ಚಲನಾಗಿರಬೇಕು (ಅಚಲಮ್) ಎಂಬ ಶ್ರೀಕೃಷ್ಣನ ಉಪದೇಶವನ್ನೇ ಇದು ಪ್ರತಿಬಿಂಬಿಸುತ್ತದೆ. ಭಗವತ್ಪಾದರು ತಮ್ಮ ಭಗವದ್ಗೀತಾ-ಭಾಷ್ಯದಲ್ಲಿ, 'ಸಮಂ ಧಾರಯತಶ್ಚಲನಂ ಸಮ್ಭವತಿ ಅತೋ ವಿಶಿನಷ್ಟ್ಯಚಲಮಿತಿ — ದೇಹದ ಮಧ್ಯಭಾಗ, ಕುತ್ತಿಗೆ ಮತ್ತು ತಲೆಗಳನ್ನು ಸರಳ

[1] ಛಾಂದೋಗ್ಯ-ಉಪನಿಷತ್ 5.19.2ರ ಭಾಷ್ಯ

[2] ತೈತ್ತಿರೀಯ-ಉಪನಿಷತ್ 3.6.1ರ ಭಾಷ್ಯ

[3] ಛಾಂದೋಗ್ಯ-ಉಪನಿಷತ್ 4.9.2

[4] ಮೈತ್ರಾಯಣೀ-ಉಪನಿಷತ್ 2.3

[5] ಮಹಾಭಾರತ 12.314.25

ರೇಖೆಯಲ್ಲಿ ಇಟ್ಟುಕೊಂಡಿದ್ದರೂ ಚಲನೆ ಸಾಧ್ಯ; ಆದ್ದರಿಂದ ನಿಶ್ಚಲನಾಗಿಯೂ ಇರಬೇಕೆಂದು ಭಗವಂತನು ವಿಶೇಷವಾಗಿ ಹೇಳುತ್ತಾನೆ.'[1]

ನಾಲ್ಕನೆಯ ಪಾದದ ಕೊನೆಯ ಪದವಾದ 'ಶಿವಮ್' ಎಂಬುದು, ಗುರುಗಳೇ ಈಶ್ವರ — ಸರ್ವವ್ಯಾಪಿ ಹಾಗೂ ಚತುರ್ಮುಖ ಬ್ರಹ್ಮನನ್ನೂ ಸೃಷ್ಟಿಸಿದ ಪರಮೇಶ್ವರ ಶಿವ — ಎಂಬುದನ್ನು ತಿಳಿಸುತ್ತದೆ. ಶ್ವೇತಾಶ್ವತರ-ಉಪನಿಷತ್ತು ಹೇಳುತ್ತದೆ: '*ಸರ್ವವ್ಯಾಪೀ ಸ ಭಗವಾಂಸ್ತಸ್ಮಾತ್ ಸರ್ವಗತಃ ಶಿವಃ* — (ಮಡಕೆಯನ್ನು ಮಣ್ಣು ವ್ಯಾಪಿಸಿರುವಂತೆ) ಅವನು ಎಲ್ಲವನ್ನೂ ವ್ಯಾಪಿಸಿದ್ದಾನೆ; (ಸಮಸ್ತ ದಿವ್ಯಶಕ್ತಿ, ಧರ್ಮ, ಯಶಸ್ಸು, ಐಶ್ವರ್ಯ, ವೈರಾಗ್ಯ ಮತ್ತು ಮೋಕ್ಷ (ಅಂದರೆ, ಮೋಕ್ಷಕ್ಕೆ ಕಾರಣವಾದ ಜ್ಞಾನ) ಎಂಬೀ) ಆರು 'ಭಗ'ಗಳು ಅವನಲ್ಲಿವೆ. ಆದ್ದರಿಂದ ಅವನು ಸರ್ವವ್ಯಾಪಿಯಾದ ಶಿವ.'[2] ಮಾತ್ರವಲ್ಲ, ಶಿವನ ಧ್ಯಾನವನ್ನು ವಿಧಿಸುವಲ್ಲಿ ಕೈವಲ್ಯ-ಉಪನಿಷತ್ತು ಹೇಳುತ್ತದೆ: '*...ಪ್ರಶಾಂತಮಮೃತಂ ಬ್ರಹ್ಮಯೋನಿಮ್ । ತಮಾದಿಮಧ್ಯಾನ್ತ-ವಿಹೀನಮೇಕಂ ವಿಭುಂ ಚಿದಾನನ್ದಮರೂಪಮದ್ಭುತಮ್* — ಅವನು ಪ್ರಶಾಂತನು, ಅಮೃತನು, ಬ್ರಹ್ಮನಿಗೂ ಮೂಲನು, ಸರ್ವವ್ಯಾಪಿಯು, ಆದಿ-ಮಧ್ಯ-ಅಂತ್ಯಗಳಿಲ್ಲದವನು, ಚಿದಾನಂದನು, ರೂಪರಹಿತನು ಮತ್ತು ಅದ್ಭುತನು.'[3] ಉಪನಿಷತ್ತುಗಳಲ್ಲಿ ವರ್ಣಿತನಾದ, ಗುರುಗಳೊಡನೆ ಇಲ್ಲಿ ಅಭೇದದಿಂದ ಹೇಳಲ್ಪಟ್ಟ ಶಿವನು ಪರಮ ಮಂಗಳಸ್ವರೂಪನು. ಈಗಷ್ಟೇ ಉದ್ಧರಿಸಿದ ಶ್ವೇತಾಶ್ವತರ-ಉಪನಿಷತ್ತಿನ ಮಂತ್ರದ ಒಂದು ಟೀಕೆಯಲ್ಲಿ ಹೀಗೆ ವಿವರಿಸಲಾಗಿದೆ: 'ಅವಿದ್ಯಾತತ್ಕಾರ್ಯಮಲರಹಿತತ್ವಾತ್ ಪರಿಪೂರ್ಣಾನನ್ದರೂಪತ್ವಾತ್ ಶಿವಃ — ಅವಿದ್ಯೆ ಮತ್ತದರ ಕಾರ್ಯರೂಪ ಮಾಲಿನ್ಯಗಳಿಂದ ಸ್ಪರ್ಶಿತನಾಗದ ಮತ್ತು ಪರಿಪೂರ್ಣ ಆನಂದಸ್ವರೂಪನಾದ್ದರಿಂದ ಅವನು ಶಿವನು, ಮಂಗಳಸ್ವರೂಪನು.'[4]

ದೇಹಾದಿಬ್ರಹ್ಮಪರ್ಯನ್ತೇ ಭೋಗ್ಯೇ ತುಚ್ಛತ್ವಧೀಯುತಮ್ ।
ಆರ್ತಾನಾಮಾರ್ತಿಹನ್ತಾರಂ ಜಿಜ್ಞಾಸುವಿಶಯಚ್ಛಿದಮ್ ॥ 4 ॥

[ದೇಹದಿಂದ ಹಿಡಿದು ಬ್ರಹ್ಮನ ಪದವಿಯವರೆಗಿನ ಎಲ್ಲ ಭೋಗ್ಯವಸ್ತುಗಳನ್ನೂ ಯಾರು ತುಚ್ಛವೆಂದು ಭಾವಿಸುತ್ತಾರೋ; ಆರ್ತರ ಸಂಕಟವನ್ನು ಯಾರು ನಿವಾರಿಸುತ್ತಾರೋ; ಯಾರು ತತ್ತ್ವಜಿಜ್ಞಾಸುಗಳ ಸಂಶಯಗಳನ್ನು ಪರಿಹರಿಸುತ್ತಾರೋ;]

ಗುರುಗಳ ವೈರಾಗ್ಯವನ್ನೂ, ತತ್ತ್ವಜಿಜ್ಞಾಸುಗಳಿಗೆ ಮಾರ್ಗದರ್ಶನವನ್ನು ನೀಡುವ ಗುರುವಿನ ಪಾತ್ರವನ್ನೂ, ಆರ್ತರ ಸಂಕಟವನ್ನು ನಿವಾರಿಸುವುದರಲ್ಲಿ ಪ್ರಕಟವಾಗುವ ಅವರ ಅಪಾರ

[1] ಭಗವದ್ಗೀತಾ 6.13ರ ಭಾಷ್ಯ

[2] ಶ್ವೇತಾಶ್ವತರ-ಉಪನಿಷತ್ 3.11

[3] ಕೈವಲ್ಯ-ಉಪನಿಷತ್ 6–7

[4] ಶ್ವೇತಾಶ್ವತರ-ಉಪನಿಷತ್ 3.11ರ ಮೇಲಿನ ವಿಜ್ಞಾನಭಗವತ್ ಅವರ ವ್ಯಾಖ್ಯಾನ. ಶಂಕರಾನಂದರ ವ್ಯಾಖ್ಯಾನವೂ ಇದಕ್ಕೆ ಹೊಂದಿಕೆಯಾಗುತ್ತದೆ.

ಕರುಣೆಯನ್ನೂ ಎತ್ತಿ ತೋರಿಸುವ ಮೂಲಕ ಈ ಶ್ಲೋಕವು ಅವರ ಮಹಿಮೆಯನ್ನು ಸೂಚಿಸುತ್ತದೆ.

ಪರಮಪೂಜ್ಯರು ಆಧ್ಯಾತ್ಮಿಕ ಸಾಧಕರಿಗೆ ಎಲ್ಲಕ್ಕಿಂತ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದರು. 1974ರ ನವೆಂಬರ್‌ನಲ್ಲಿ ಇಟಲಿಯ ಒಬ್ಬ ವ್ಯಕ್ತಿ ಗೌಡಪಾದಾಚಾರ್ಯರು ಮಾಂಡೂಕ್ಯ-ಉಪನಿಷತ್ತಿನ ಮೇಲೆ ರಚಿಸಿರುವ ಕಾರಿಕೆಗಳ ಬಗ್ಗೆ ಕೆಲವು ಸ್ಪಷ್ಟೀಕರಣಗಳನ್ನು ಪಡೆಯುವ ಆಶಯದಿಂದ ಶೃಂಗೇರಿಗೆ ಬಂದರು. ಆದರೆ ಆ ಸಮಯದಲ್ಲಿ ಗುರುಗಳು ಬಹಳ ಕಾರ್ಯನಿರತರಾಗಿದ್ದರು. ಅದೇ ನವೆಂಬರ್ 11ರಂದು ಅವರು 'ಶಿಷ್ಯಸ್ವೀಕಾರ'ವನ್ನು (ಒಬ್ಬರಿಗೆ ಸಂನ್ಯಾಸಕ್ಕೆ ದೀಕ್ಷೆ ನೀಡಿ ತಮ್ಮ ಉತ್ತರಾಧಿಕಾರಿಯಾಗಿ ನಿಯುಕ್ತಿಗೊಳಿಸುವ ಕಾರ್ಯವನ್ನು) ನೆರವೇರಿಸಬೇಕಿತ್ತು. ಆದ್ದರಿಂದ, ಆ ವಿದೇಶೀ ಸಾಧಕರಿಗೆ ಗುರುಗಳ ಖಾಸಗಿ ಭೇಟಿ ಸಿಗುವುದು ಅಸಾಧ್ಯವೆಂದು ಭಾವಿಸಲಾಗಿತ್ತು. ಆದರೂ, ಅವರು ಗುರುಗಳಲ್ಲಿ ಕೋರಿಕೊಂಡಾಗ, ಅವರಿಗಾಗಿ ಸಮಯವನ್ನು ಮೀಸಲಿಡಲು ಗುರುಗಳು ತಕ್ಷಣವೇ ಸಮ್ಮತಿಸಿದರು. ಶ್ರೀ ಸುಬ್ಬರಾಮಯ್ಯನವರನ್ನು ದುಭಾಷಿಯಾಗಿ ಇಟ್ಟುಕೊಂಡು, ಅವರ ಪ್ರಶ್ನೆಗಳಿಗೆ ಉತ್ತರಿಸಿ ಅವರ ಸಂಶಯಗಳನ್ನು ಪರಿಹರಿಸಿದರು. ಈ ಕುರಿತು ನಂತರ ಒಮ್ಮೆ ಪ್ರಸ್ತಾಪಿಸಿದಾಗ ಗುರುಗಳು ಹೇಳಿದರು — 'ಅವನು ಪ್ರಾಮಾಣಿಕನಾಗಿದ್ದಾನೆ; ಜಿಜ್ಞಾಸುವಾಗಿ ಅಷ್ಟು ದೂರದಿಂದ ಭಾರತಕ್ಕೆ ಬಂದಿದ್ದಾನೆ. ಅವನಿಗೆ ಸ್ಪಷ್ಟೀಕರಣಗಳನ್ನು ನೀಡುವುದು ನನ್ನ ಕರ್ತವ್ಯ; ಆದ್ದರಿಂದ ಅವನಿಗಾಗಿ ಸಮಯವನ್ನು ಮೀಸಲಿಡುವುದು ನನಗೆ ಅನಿವಾರ್ಯ.'

ಇನ್ನೊಂದು ಸಂದರ್ಭದಲ್ಲಿ, ಉತ್ತರ ಭಾರತದಿಂದ ಮೂವರು ಬ್ರಹ್ಮಚಾರಿಗಳು ಗುರುಗಳ ದರ್ಶನಕ್ಕಾಗಿಯೂ, ತಮ್ಮ ಆಧ್ಯಾತ್ಮಿಕ ಪ್ರಗತಿಗಾಗಿ ಅವರಿಂದ ಮಾರ್ಗದರ್ಶನ ಮತ್ತು ಆಶೀರ್ವಾದವನ್ನು ಪಡೆಯುವುದಕ್ಕಾಗಿಯೂ ಶೃಂಗೇರಿಗೆ ಬಂದರು. ಅವರು ನರಸಿಂಹವನಕ್ಕೆ ಬಂದಾಗ ಸಂಜೆ ಸುಮಾರು 6:40 ಆಗಿತ್ತು. ಗುರುಗಳು ಆ ಸಂಜೆಯ ದರ್ಶನವನ್ನು ಮುಗಿಸಿದ್ದರು; ಕೆಲವೇ ನಿಮಿಷಗಳಲ್ಲಿ ಸಂಜೆಯ ಸ್ನಾನಕ್ಕೆ ತೆರಳಬೇಕಾಗಿತ್ತು. ಆದ್ದರಿಂದ, ಆ ಬ್ರಹ್ಮಚಾರಿಗಳ ಆಗಮನವನ್ನು ಗುರುಗಳಿಗೆ ತಿಳಿಸಲು ಅವರ ಪರಿಚಾರಕನು ಹಿಂಜರಿದನು. ಆದರೆ ಗುರುಗಳೇ ಅವನನ್ನು, 'ಈಗ ದರ್ಶನಕ್ಕೆ ಯಾರಾದರೂ ಬಂದಿದ್ದಾರೆಯೆ?' ಎಂದು ನಿರ್ದಿಷ್ಟವಾಗಿ ಕೇಳಿದರು. ಅವನು ಹೌದೆಂದು ಉತ್ತರಿಸಿದನು. 'ಅವರನ್ನು ಒಳಗೆ ಕರೆದುಕೊಂಡು ಬಾ', ಎಂದು ಗುರುಗಳು ಅಪ್ಪಣೆಯಿತ್ತರು. ಅಂತೆಯೇ ಆ ಬ್ರಹ್ಮಚಾರಿಗಳನ್ನು ಮೇಲ್ಮಹಡಿಯಲ್ಲಿದ್ದ ಗುರುಗಳ ಸನ್ನಿಧಿಗೆ ಕರೆದೊಯ್ಯಲಾಯಿತು. ಅವರು ಗುರುಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ಅವರಿಗೆ ಕುಳಿತುಕೊಳ್ಳುವಂತೆ ಗುರುಗಳು ಸನ್ನೆ ಮಾಡಿದರು. ಅವರು ಎಲ್ಲಿಂದ ಬಂದರೆಂದು ಹಿಂದಿಯಲ್ಲಿ ಕೇಳಿದ ಬಳಿಕ, ಅವರ ಭೇಟಿಯ ಉದ್ದೇಶವನ್ನು ವಿಚಾರಿಸಿದರು. ತಾವು ಆಧ್ಯಾತ್ಮಿಕ ಮಾರ್ಗದಲ್ಲಿ ಪ್ರಗತಿಗೆ ಆಸಕ್ತರೆಂದು ಹೇಳಿ ಅವರು ಗೌರವಪೂರ್ವಕವಾಗಿ ತಮ್ಮ ಪ್ರಶ್ನೆಗಳನ್ನು ಕೇಳಿದರು. ಗುರುಗಳು ಬಹಳ

ಗಂಭೀರವಾಗಿ ಉತ್ತರಿಸಲಾರಂಭಿಸಿದರು. ವಿಸ್ತಾರವಾದ ಉತ್ತರಗಳನ್ನು ಕೊಡಲು ಅವರು ಆರಿಸಿಕೊಂಡುದರಿಂದ, ಮೊದಲ ಮುಖ್ಯ ಪ್ರಶ್ನೆಗೆ ಉತ್ತರಿಸುವಷ್ಟರಲ್ಲೇ ಸಂಜೆ 7:15 ಆಗಿತ್ತು. ತನ್ನ ಕರ್ತವ್ಯದಂತೆ ಆಪ್ತ ಪರಿಚಾರಕನು ಬಂದು ಗುರುಗಳಿಗೆ ತಡವಾಗುತ್ತಿರುವುದನ್ನು ಸೂಚಿಸಿದನು (ಸಾಯಂಕಾಲದ ಸ್ನಾನ ಮತ್ತು ಆಹ್ನಿಕಗಳ ಬಳಿಕ ಗುರುಗಳು ಸಾಮಾನ್ಯವಾಗಿ ರಾತ್ರಿ 8 ಗಂಟೆಯ ಸುಮಾರಿಗೆ ಸಾರ್ವಜನಿಕರು ಸಹ ವೀಕ್ಷಿಸಬಹುದಾದ ಚಂದ್ರಮೌಳೀಶ್ವರ ಪೂಜೆಯನ್ನು ಆರಂಭಿಸುತ್ತಿದ್ದರು). ಯಾವುದೇ ಅಡಚಣೆಯಿಲ್ಲವೆಂಬಂತೆ ಗುರುಗಳು ತಮ್ಮ ಮಾತುಗಳನ್ನು ಮುಂದುವರಿಸಿದರು. ಪ್ರಶ್ನೋತ್ತರಗಳು ಸಾಗಿದವು. ಪ್ರಶ್ನಿಸುವವರೂ ಗುರುಗಳೂ ಅದರಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದರು. ಸಮಯ ಕಳೆಯಿತು; ರಾತ್ರಿ 8 ಗಂಟೆಗೆ ಸಹಾಯಕನು ಮತ್ತೆ ಕಾಣಿಸಿಕೊಂಡನು. ಆದರೆ ಗುರುಗಳು ಅವನನ್ನು ಕೈಸನ್ನೆ-ಯಿಂದಲೇ ಕಳುಹಿಸಿಬಿಟ್ಟರು. ಅವರೆಲ್ಲರ ಪ್ರಶ್ನೆಗಳಿಗೆ ಉತ್ತರಿಸುವಷ್ಟರಲ್ಲಿ ರಾತ್ರಿ ಸುಮಾರು 9 ಗಂಟೆಯಾಯಿತು. ಬಳಿಕ ಗುರುಗಳು ಅವರಿಗೆ ಪೂರ್ಣ ಆಶೀರ್ವಾದವನ್ನೂ ಪ್ರಸಾದವನ್ನೂ ನೀಡಿದರು. ಬ್ರಹ್ಮಚಾರಿಗಳು ಅತ್ಯಂತ ಸಂತೋಷಗೊಂಡು ತಮ್ಮ ಕೃತಜ್ಞತೆಯನ್ನು ವ್ಯಕ್ತ-ಪಡಿಸಿದರು. ಆಧ್ಯಾತ್ಮಿಕ ಸ್ಫೂರ್ತಿ, ಹೃದಯತುಂಬಿದ ಆನಂದ ಮತ್ತು ಸವಿನೆನಪುಗಳೊಂದಿಗೆ ಅವರು ತೆರಳಿದರು. ಆ ಚರ್ಚೆಯ ಸಂದರ್ಭದಲ್ಲಿ ನಾನೂ ಅಲ್ಲಿದ್ದೆ. ಅದರ ನಡುವೆ ಗುರುಗಳು ನನ್ನ ಕಡೆಗೆ ತಿರುಗಿ, 'ಇವರು ಎಷ್ಟು ಶ್ರದ್ಧಾವಂತರು! ಇವರಿಗೆ ಎಷ್ಟಾದರೂ ನೆರವಾಗುವುದು ಆನಂದದ ಸಂಗತಿ. ನನ್ನ ಸ್ನಾನ ಎಷ್ಟೇ ತಡವಾದರೂ ಚಿಂತೆಯಿಲ್ಲ. ಇವರ ಅಗತ್ಯಗಳು ಸರ್ವೋಚ್ಚ ಆದ್ಯತೆಗೆ ಯೋಗ್ಯವಾದವು', ಎಂದರು.

ಇತರರ ದುಃಖಗಳನ್ನು ಅವರು ಕರುಣೆಯಿಂದ ನಿವಾರಿಸಿದ ಕೆಲವು ಉದಾಹರಣೆಗಳನ್ನು ಈ ಗ್ರಂಥದಲ್ಲಿ ಹಿಂದೆಯೇ, ಶ್ರೀಮದಭಿನವ-ವಿದ್ಯಾತೀರ್ಥ-ಅಕ್ಷರಮಾಲಾ-ಸ್ತೋತ್ರದ ಮೂರನೆಯ ಶ್ಲೋಕದ ವ್ಯಾಖ್ಯಾನದಲ್ಲಿ ನೀಡಲಾಗಿದೆ.

ಅವರ ತೀವ್ರ ವೈರಾಗ್ಯಕ್ಕೆ ಇಲ್ಲೊಂದು ಉದಾಹರಣೆ.

ನ್ಯಾಯಮೂರ್ತಿ ಸೋಮನಾಥ ಅಯ್ಯರ್ ಅವರು (ಕರ್ನಾಟಕ ಉಚ್ಚನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾಗಿದ್ದು ನಿವೃತ್ತರಾದವರು; ಹಾಗೂ ಕೆಲಕಾಲ ಕರ್ನಾಟಕ ರಾಜ್ಯದ ರಾಜ್ಯಪಾಲರಾಗಿಯೂ ಸೇವೆ ಸಲ್ಲಿಸಿದವರು) ಒಮ್ಮೆ ಗುರುಗಳನ್ನು ಕೇಳಿದರು: 'ಮಠದಲ್ಲಿ ತಾವು ಎಲ್ಲ ಸುಖಸೌಕರ್ಯಗಳನ್ನೂ ಅನುಭವಿಸುವ ಅವಕಾಶವಿದೆ. ಆದರೆ ಯಾವ ಸೌಕರ್ಯವನ್ನೂ ಅನುಭವಿಸದೆ, ಬೆಳಗಿನ ಜಾವದಿಂದ ತಡರಾತ್ರಿಯವರೆಗೆ ಪ್ರತಿದಿನವೂ ತಾವು ಇಷ್ಟೊಂದು ಶ್ರಮಪಡುತ್ತೀರಿ. ಇದರಿಂದ ತಮಗೆ ಏನು ಲಾಭ?' ಗುರುಗಳು ಮುಗುಳ್ನಕ್ಕು ಹೇಳಿದರು: 'ಸಾಧಾರಣವಾದ ಬೆಲ್ಲ ಮತ್ತು ಬಾದಾಮಿ ಹಲ್ವಾ — ಇವೆರಡರಲ್ಲಿ ಒಂದನ್ನು ಆರಿಸಿಕೊಳ್ಳಲು ನಿಮಗೆ ಅವಕಾಶ ಕೊಟ್ಟರೆ ನೀವು ಯಾವುದನ್ನು ಆರಿಸುತ್ತೀರಿ?' 'ಸಂದೇಹವೇಕೆ? ನಾನು ಬಾದಾಮಿ ಹಲ್ವಾವನ್ನೇ ಆರಿಸುತ್ತೇನೆ', ಎಂದರು ಸೋಮನಾಥ ಅಯ್ಯರ್ ಅವರು. ಗುರುಗಳು 'ಅಂತೆಯೇ, ಪರಬ್ರಹ್ಮದ ಆನಂದವನ್ನು ಸವಿದವರು ಈ ಲೌಕಿಕವಾದ ಸೌಕರ್ಯಗಳನ್ನು

ಬಯಸುವುದಿಲ್ಲ', ಎಂದು ಹಸನ್ಮುಖಿಗಳಾಗಿ ಉತ್ತರಿಸಿದರು. (ಇದನ್ನು ನ್ಯಾಯಮೂರ್ತಿ ಸೋಮನಾಥ ಅಯ್ಯರ್ ಅವರ ಪುತ್ರ ಎಸ್. ಶಿವಸ್ವಾಮಿ ತಿಳಿಸಿದರು.)

ಸ್ಮಾವಲೋಕನಮಾತ್ರೇಣ ಪುನಾನಂ ನಿಖಿಲಂ ಜಗತ್।
ಮದೀಯಹೃತ್ಸರೋಜಾತನಿವೇಶಿತಪದದ್ವಯಮ್॥ 5॥

[ಯಾರು ತಮ್ಮ ನೋಟಮಾತ್ರದಿಂದಲೇ ಸಮಸ್ತ ಜಗತ್ತನ್ನೂ ಪಾವನಗೊಳಿಸುತ್ತಾರೋ; ಮತ್ತು ಯಾರ ಪಾದಗಳು ನನ್ನ ಹೃದಯಕಮಲದಲ್ಲಿ ನೆಲೆಗೊಂಡಿವೆಯೋ;]

ಈ ಶ್ಲೋಕದ ಪೂರ್ವಾರ್ಧವು ಗುರುಗಳ ಮಹಿಮೆಯನ್ನು ಮತ್ತಷ್ಟು ಒತ್ತಿಹೇಳುತ್ತದೆ. ಬ್ರಹ್ಮದಲ್ಲಿ ನೆಲೆಗೊಂಡವರು ಅನಾಯಾಸವಾಗಿ ಸಮಸ್ತ ಜಗತ್ತನ್ನೂ ಪಾವನಗೊಳಿಸುತ್ತಾರೆ ಎಂದು ಹೇಳುವ ಹಲವು ವಾಕ್ಯಗಳು ಶಾಸ್ತ್ರಗಳಲ್ಲಿವೆ. ಉದಾಹರಣೆಗೆ, ದೇವೀ-ಭಾಗವತವು ಸಾರುತ್ತದೆ: 'ವಿಶ್ವಮ್ಭರಾ ಪುಣ್ಯವತೀ ಚಿಲ್ಲಯೋ ಯಸ್ಯ ಚೇತಸಃ — ಯಾರ ಮನಸ್ಸು ಶುದ್ಧಚೈತನ್ಯದಲ್ಲಿ ಲೀನವಾಗಿದೆಯೋ ಅವರಿಂದ ಸಮಸ್ತ ಜಗತ್ತೂ ಪಾವನವಾಗುತ್ತದೆ.'[1]

ಮೊದಲ ಶ್ಲೋಕದ ಉತ್ತರಾರ್ಧದಲ್ಲಿ ಅವರನ್ನು ಮಹಾಜೀವನ್ಮುಕ್ತರೆಂದು ನಿರೂಪಿಸಿರುವುದೂ ಸೇರಿದಂತೆ ಗುರುಗಳ ಮಹಿಮೆಯನ್ನು ನಾನಾ ರೀತಿಗಳಲ್ಲಿ ಮತ್ತೆ ಮತ್ತೆ ಎತ್ತಿಹೇಳಲಾಗಿದೆ. ಇದರಿಂದ, ಗುರುಗಳು ನಿಶ್ಚಯವಾಗಿಯೂ 'ಗುರೂತ್ತಂಸ' — ಗುರುಗಳ ಶಿರೋಮಣಿ — ಎಂಬುದು ಸಂದೇಹಕ್ಕೆ ಎಡೆಯಿಲ್ಲದಂತೆ ಸ್ಥಾಪಿತವಾಗಿದೆ.

ಅಷ್ಟದಳ ಹೃದಯಕಮಲದಲ್ಲಿ ಅವರ ಪೂರ್ಣ ರೂಪವನ್ನೇ ಧ್ಯಾನಿಸಲಾಗುತ್ತದೆಯಾದರೂ, ಈ ಶ್ಲೋಕದ ಉತ್ತರಾರ್ಧದಲ್ಲಿ ಕಮಲದಂತಹ ಅವರ ಪಾದದ್ವಯವು ಹೃದಯದಲ್ಲಿ ನೆಲೆಗೊಂಡಿದೆ ಎಂದು ಹೇಳಿ ಅವುಗಳನ್ನು ವಿಶೇಷವಾಗಿ ಸ್ತುತಿಸಲಾಗಿದೆ. ಶಿಷ್ಯನಿಗೆ ಗುರುಪಾದಗಳು ಪರಮಪೂಜ್ಯ; ಗುರುಪಾದಗಳನ್ನು ಭಕ್ತಿಯಿಂದ ಸ್ಮರಿಸುವ ಮಹಾತ್ಮರ ಶ್ಲೋಕಗಳು ಅನೇಕ.

ಕೃಷ್ಣನು ಉದ್ಧವನಿಗೆ ಉಪದೇಶಿಸಿದ ಧ್ಯಾನದ ನಾಲ್ಕು ಹಂತಗಳಲ್ಲಿ ಎರಡನೆಯದನ್ನು ಗುರುಗಳ ಮೇಲಿನ ಧ್ಯಾನದಲ್ಲಿ ಹೇಗೆ ಅಳವಡಿಸಿಕೊಳ್ಳಬಹುದು ಎಂಬುದನ್ನೂ ಗುರುಗಳ ಪಾದಗಳ ಈ ನಿರ್ದಿಷ್ಟ ಪ್ರಸ್ತಾಪವು ಸೂಚಿಸುತ್ತದೆ. ಮೇಲಾಗಿ, ಪರಮಪೂಜ್ಯ ಜಗದ್ಗುರು ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ದಿವ್ಯ ಪಾದಕಮಲಗಳ ಧ್ಯಾನವು ಬ್ರಹ್ಮಸಾಕ್ಷಾತ್ಕಾರದಲ್ಲಿ ಮತ್ತು ಆ ಮೂಲಕ ಮುಕ್ತಿಯಲ್ಲಿ ಪರ್ಯವಸಾನಗೊಳ್ಳಬಲ್ಲದು ಎಂದೂ ನಿರೂಪಿಸುತ್ತದೆ.

[1] ದೇವೀ-ಭಾಗವತ 7.36.20

